ಹೊಸ ಮನುಷ್ಯ

ಸಮಾಜವಾದಿ ಮಾಸಿಕ

ನವೆಂಬರ್, ೨೦೧೮ ಸಂಪಾದಕ : ಡಿ.ಎಸ್.ನಾಗಭೂಷಣ ಸಂಪುಟ: ೭ ಸಂಚಿಕೆ: ೧೦

ಚಂದಾ ರೂ. ೨೦೦/- (ವ್ಯಕ್ತಿಗಳಿಗೆ) ರೂ. ೩೦೦/- (ಸಂಸ್ಥೆಗಳಿಗೆ) ಬೆಲೆ: ಬಿಡಿ ಪ್ರತಿ: ರೂ. ೨೦/- ಪುಟ: ೨೦

ವಿಳಾಸ: ಎಚ್.ಐ.ಜಿ-೫, 'ನುಡಿ', ಕಲ್ಲಳ್ಳಿ ಬಡಾವಣೆ, ವಿನೋಬ ನಗರ, ಶಿವಮೊಗ್ಗ-೫೭೭ ೨೦೪

ದೂ: ೦೮೧೮೨-೨೪೮೫೭೪ ಸಂಚಾರಿ: ೯೪೪೯೨ ೪೨೨೮೪ ಈ ಮೇಲ್: dsnagabhushana@gmail.com

ಸಂಪಾದಕರ ಟಿಪ್ಪಣಿಗಳು

ಪ್ರಿಯ ಓದುಗರೇ,

ರಾಜ್ಯದಲ್ಲಿ ಮೂರು ಲೋಕಸಭಾ ಸ್ಥಾನಗಳಿಗೂ, ಎರಡು ವಿಧಾನಸಭಾ ಸ್ಥಾನಗಳಿಗೂ ಚುನಾವಣೆಗಳು ನಡೆದಿವೆ. ಇವುಗಳಲ್ಲಿ ಜಮಖಂಡಿ ವಿಧಾನಸಭಾ ಉಪಚುನಾವಣೆಯ ಹೊರತಾಗಿ ಮಿಕ್ಕ ನಾಲ್ಕೂ, ಜನರ ತೆರಿಗೆ ಹಣದ ಪೋಲಿನ ಬಾಬತ್ತುಗಳೇ. ಸಿದ್ದು ನ್ಯಾಮಗೌಡರ ಆಕಸ್ಮಿಕ ಸಾವಿನಿಂದ ಖಾಲಿಯಾಗಿದ್ದ ಜಮಖಂಡಿ ಕ್ಷೇತ್ರ ತನ್ನ ಹೊಸ ಪ್ರತಿನಿಧಿಯನ್ನು ಆಯ್ದುಕೊಳ್ಳಬೇಕಾದದ್ದು ನ್ಯಾಯಸಮ್ಮತವೇ. ಆದರೆ ಇತರೆ ಮೂರು ಉಪಚುನಾವಣೆಗಳು ಸಾಂವಿಧಾನಿಕವೇ ಆದರೂ, ಅವು ತಪ್ಪಿಸಬಹುದಾಗಿದ್ದವುಗಳು. ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿಯವರು ಅತಿ ಎಚ್ಚರಿಕೆಯಿಂದ ಎರಡು ಕ್ಷೇತ್ರಗಳಲ್ಲಿ ಸ್ಪರ್ಧಿಸಿ ಎರಡರಲ್ಲೂ ಅವರು ಗೆದ್ದು ಅವುಗಳ ಪೈಕಿ ಜಯ ಅನುಮಾನಾಸ್ಪದವಾಗಿದ್ದ ಚನ್ನಪಟ್ಟಣ ಕ್ಷೇತ್ರವನ್ನು ಉಳಿಸಿಕೊಂಡು ಜಯ ಹೆಚ್ಚು ಖಚಿತವಿದ್ದ ರಾಮನಗರ ಕ್ಷೇತ್ರದ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ಈಗ ಅಲ್ಲಿ -ಸಾರ್ವಜನಿಕ ಸೇವೆಯ ಯಾವ ಸಾಧನೆಯ ಕುರುಹೂ ಇಲ್ಲದ-ತಮ್ಮ ಪತ್ನಿಯನ್ನು ಅಭ್ಯರ್ಥಿಯನ್ನಾಗಿ ಮಾಡಿದ್ದಾರೆ. ನಮ್ಮ ರಾಜಕಾರಣ ಎಂದೋ ತನ್ನ ಲಜ್ಜೆಯನ್ನು ಕಳೆದುಕೊಂಡಿರುವುದರಿಂದ ಈ ಬಗ್ಗೆ ಮಾತನಾಡುವುದು ವ್ಯರ್ಥವೇ ಸರಿ.

ಇನ್ನು ಮೂರು ಲೋಕಸಭಾ ಉಪಚುನಾವಣೆಗಳಂತೂ ನಮ್ಮ ಸಂವಿಧಾನದ ಆಶಯದ ಅಣಕದಂತಿದೆ. ಚುನಾವಣಾ ಆಯೋಗದ ಅಧಿಕಾರಶಾಹಿ ಈ ಕುರಿತ ಸಂವಿಧಾನದ ನಿರ್ದೇಶನಗಳನ್ನು ಅಕ್ಷರಶಃ ಓದಿಕೊಂಡು ಜಾರಿಗೆ ತರುತ್ತಿರುವುದರ ಫಲ ಇದು. ಇದಕ್ಕಾಗಿ ಪ್ರತಿ ಲೋಕಸಭಾ ಸ್ಥಾನಕ್ಕೆ ೮ ಕೋಟಿ ರೂ. ಗಳಂತೆ ಒಟ್ಟು ಸುಮಾರು ೨೪ ಕೋಟಿ ರೂಪಾಯಿಗಳು ರಾಷ್ಟ್ರ ಬೊಕ್ಕಸದಿಂದ ಖರ್ಚಾಗಲಿದೆ. ಇನ್ನು ಅಭ್ಯರ್ಥಿಗಳು ಖರ್ಚು ಮಾಡುವುದು ನೂರಾರು ಕೋಟಿ ರೂಪಾಯಿಗಳು! ಇದು ಉಳಿದಿರುವ ಆರೇಳು ತಿಂಗಳ ಅವಧಿಗಾಗಿ ಈ ಕ್ಷೇತ್ರಗಳ ಪ್ರತಿನಿಧಿಗಳನ್ನು ಆಯ್ದು ಕಳಿಸುವ ಕಸರತ್ತಿಗಾಗಿ. ಲೋಕಸಭೆಯ ಅವಧಿ ಒಂದು ವರ್ಷಕ್ಕೂ ಮುನ್ನ ಖಾಲಿಯಾದ ಸ್ಥಾನಗಳಿಗಾಗಿ ಚುನಾವಣೆ ನಡೆಸುವುದು ಕಡ್ಡಾಯ ಮಾಡುವ ಸಂವಿಧಾನದ ನಿರ್ದೇಶನದ ಆಶಯ ಪ್ರಜಾತಾಂತ್ರಿಕ ತತ್ವಗಳ ಆಶಯಕ್ಕೆ ಅನುಗುಣವಾಗಿಯೇ ಇದ್ದರೂ, ಈ ನಿರ್ದೇಶನದ ಜಾರಿಗೆ ಬೇಕಾದ ಔಪಚಾರಿಕತೆಗಳನ್ನು ಮುಗಿಸಲು ನಮ್ಮ ಚುನಾವಣಾ ಆಯೋಗಕ್ಕೆ ಈ ಅವಧಿಯ ಅರ್ಧದಷ್ಟು ಕಾಲ ಬೇಕಾದಾಗ ಈ ನಿರ್ದೇಶನದ ಸಾಧುತ್ವವೇ ಪ್ರಶ್ನಾರ್ಹವಾಗುತ್ತದೆ. ಆದರೆ ಸಂವಿಧಾನವನ್ನು ಒಂದು ಶಿಲಾಲೇಖದಂತೆ ಪರಿಗಣಿಸುತ್ತಾ ಬಂದಿರುವ ನಮ್ಮ ಸರ್ಕಾರಗಳು ಮತ್ತು ಅಧಿಕಾರಶಾಹಿ ಇದನ್ನೆಲ್ಲ ಚರ್ಚಿಸಿ ಒಂದು ಒಮ್ಮತಕ್ಕೆ ಬರುವ ಚೈತನ್ಯವನ್ನೇ ಕಳೆದುಕೊಂಡಿದೆ. ಇದಕ್ಕೆ ಅಗತ್ಯವಾದ ಕಾನೂನು ಪ್ರಕ್ರಿಯೆಯ ಆರಂಭದ ಸೂಚನೆಯೂ ಯಾರಿಂದಲೂ ಬರಲಿಲ್ಲ. ಎಂಬುದು ನಮ್ಮ ಪ್ರಜಾತಂತ್ರ ವ್ಯವಸ್ಥೆಯ ಮೂರು ಅಂಗಗಳೂ ಎಷ್ಟು ಜಡಗೊಂಡಿದೆ ಎಂಬುದರ ಸೂಚನೆಯಾಗಿದೆ. ಇನ್ನು ನಾಲ್ಕನೆಯ ಅಂಗವೆಂದು ಹೇಳಲಾಗುವ ಮಾಧ್ಯಮಗಳೋ ಈ ಬಗ್ಗೆ ಒಂದು ದಿನದ ಸಣ್ಣ ಸದ್ದು ಮಾಡಿ ಸುಮ್ಮನಾಗಿಬಿಟ್ಟವು. ಏಕೆ? ಅವಕ್ಕೆ 'ಮಿ ಟೂ' ಎಂಬ ಮತ್ತೆ ಮತ್ತೆ ಚಪ್ಪರಿಸಬಹುದಾದ 'ರುಚಿ'ಕರ ಆಹಾರ ಸಿಕ್ಕಿತು!

ಆದರೆ ಈ ಉಪಚುನಾವಣೆಗಳು ಅನಗತ್ಯವೆಂದು ಭಾವಿಸಿ ವ್ಯಂಗ್ಯದ ಮಾತುಗಳನ್ನೂ ಆಡಿದ ವಿವಿಧ ಪಕ್ಷಗಳ ಜನನಾಯಕರಾದರೂ ಏನು ಮಾಡಿದರು? ಅವರು ನಿಜವಾದ ಜನನಾಯಕರೇ ಆಗಿದ್ದರೆ ಅವರು ತಂತಮ್ಮ ಕ್ಷೇತ್ರಗಳಲ್ಲಿ ಜನಸಂಘಟನೆ ಮಾಡಿ ಈ ಉಪಚುನಾವಣೆಗಳಲ್ಲಿ ಯಾರೂ ನಾಮಪತ್ರ ಸಲ್ಲಿಸಿದ ರೀತಿಯಿ ಒಮ್ಮತದ ಕಾರ್ಯಾಚರಣೆ ನಡೆಸಿ ಸರ್ಕಾರಿ ವ್ಯವಸ್ಥೆಯ ಈ ಕಾಲ ಮತ್ತು ಶಕ್ತಿ ಮತ್ತು ಹಣದ (ಅಪ)ವ್ಯಯವನ್ನು ತಡೆಯಬಹುದಿತ್ತು. ಆದರೆ ಇಂತಹ ರಚನಾತ್ಮಕ ಉದ್ದೇಶಗಳಿಗಾಗಿ ಜನಸಂಘಟನೆ ಯಾರಿಗೆ ಬೇಕಾಗಿದೆ? ಅದೇ ವೇಳೆಯಲ್ಲಿ ಉಪಚುನಾವಣೆಗಳಿಗೆ ನಡೆದಿರುವ ವೈವಿಧ್ಯಮಯ ಜನ 'ಸಂಘಟನೆ' ವೈಖರಿಗಳನ್ನೊನ್ನೊಮ್ಮೆ ನೋಡಿ. ಆಗ ಯಾರನ್ನು ನಾವು ಪ್ರಜಾತಂತ್ರದ ರಕ್ಷಕ ಕುಲವೆಂದು ಭಾವಿಸಿದ್ದೇವೋ ಅದೇ ನಿಜವಾಗಿ ಅದರ ಭಕ್ಷಕ ಕುಲವಾಗಿ ಪರಿವರ್ತಿತವಾಗಿರುವ ದುರಂತ ದೃಶ್ಯ ಕಾಣುತ್ತದೆ. ಚುನಾವಣೆಗಳಲ್ಲಿ ಒಂದಕ್ಕಿಂತ ಹೆಚ್ಚು ಸ್ಥಾನಗಳಲ್ಲಿ ಸ್ಪರ್ಧಿಸುವುದನ್ನು ನಿಷೇಧಿಸಲು ಮತ್ತು ಚುನಾಯಿತ ಪ್ರತಿನಿಧಿಗಳಿಗೆ ಕನಿಷ್ಟ ಒಂದು ವರ್ಷದ ಕಾರ್ಯಶೀಲ ಅವಧಿ ದೊರೆಯುವಂತಿದ್ದರೆ ಮಾತ್ರ ಚುನಾವಣೆಗಳನ್ನು ನಡೆಸಬೇಕೆಂಬ ಕಾನೂನು ತಿದ್ದುಪಡಿಯ ಪ್ರಕ್ರಿಯೆಯನ್ನು ಆರಂಭಿಸಿ ಎಂದು ಯಾರಿಗೆ ಹೇಳುವುದು? ಕೇಳಲು ಸಮಯ-ಆಸಕ್ತಿ ಯಾರಿಗಿದೆ? ಈ ವ್ಯವಸ್ಥೆ ಸಂಪೂರ್ಣ ಕಿವುಡಾಗಿದೆ.

ಹೀಗಾಗಿ ಈ ಉಪಚುನಾವಣೆಗಳಲ್ಲಿ ಯಾರು ಗೆದ್ದರೂ ಅಷ್ಟೆ. ಲಾಭ ಈ ಕಿವುಡು ವ್ಯವಸ್ಥೆಗೇ. ಈ ಕ್ಷೇತ್ರಗಳಲ್ಲಿ ವಿವಿಧ ಪಕ್ಷಗಳು ನಿಲ್ಲಿಸಿರುವ ಅಭ್ಯರ್ಥಿಗಳ ಗುಣವೈಖರಿಗಳೇ ಇದಕ್ಕೆ ಸದ್ಯದ ಸಾಕ್ಷಿ. ಇದರ ವಿಸ್ತರಣೆಯಾಗಿಯೇ ನೋಡಿ, ರಾಜ್ಯ ಸರ್ಕಾರದ ಒಬ್ಬ ಇಂಜಿನಿಯರ್ ಮನೆಯಲ್ಲಿ ಹದಿನೆಂಟು ಕೆಜಿ ಚಿನ್ನವೂ, ಜೊತೆಗೆ ಕೋಟಿ ಕೋಟಿ ರೂಪಾಯಿಗಳ ಅಕ್ರಮ ಆಸ್ತಿಯ ದಾಖಲೆಗಳೂ ಸಿಕ್ಕಿವೆಯಂತೆ! ದಿನನಿತ್ಯವೂ ನಮ್ಮ ಕಣ್ಣಿಗೆ ಹೊಡೆಯುತ್ತಿರುವ ರಾಜಕಾರಣಿಗಳು, ಅಧಿಕಾರಿಗಳು ನಡೆಸುತ್ತಿರುವ ಜೀವನ ಶೈಲಿಗಳನ್ನು ನೋಡಿದರೇ, ಇದೊಂದು ಸಣ್ಣ ಉದಾಹರಣೆಯಷ್ಟೇ ಎಂಬುದು ಗೊತ್ತಾಗುತ್ತದೆ. ಇಂತಹ ಪರಿಸ್ಥಿತಿಯಲ್ಲಿ ಯಾರೇ- ಅದು ಕುಮಾರಸ್ವಾಮಿಯವರೇ ಆಗಿರಬಹುದು ಅಥವಾ ನರೇಂದ್ರ ಮೋದಿಯವರೇ ಆಗಿರಬಹುದು-ನಾನು ಸ್ವಚ್ಛ ಆಡಳಿತ ನೀಡಿ ಜನಸಾಮಾನ್ಯರ ಹಿತಾಸಕ್ತಿಯನ್ನು ರಕ್ಷಿಸುತ್ತೇನೆ ಎಂದು ಯಾವ ಆಣೆ-ಪ್ರಮಾಣ ಮಾಡಿ ಹೇಳಿದರೂ ಅದು ಬರೀ ಮಂಕುಬೂದಿಯ ಮಾತುಗಳಂತೆ ಕೇಳಿಸುವಂತಾಗಿದೆ! ನಮ್ಮ ಸಿದ್ಧರಾಮಯ್ಯನವರು ತಮ್ಮ ರಾಜಕೀಯ ಉದ್ದೇಶಗಳಿಗಾಗಿ ಲೋಕಾಯುಕ್ತವನ್ನು ನಾಶ ಮಾಡಿದ್ದರ ಮುಂದುವರಿಕೆಯಾಗಿ ಮೋದಿಯವರು ರಾಷ್ಟ್ರದ ಅತ್ಯುನ್ನತ ತನಿಖಾ ಸಂಸ್ಥೆಯಾದ ಸಿ.ಬಿ.ಐ.ನ್ನು ತಮ್ಮ ರಾಜಕೀಯ ಹಸ್ತಕ್ಷೇಪದ ಮೂಲಕ ನಾಶ ಮಾಡಹೊರಟಂತಿದೆ. ಈ ಸಂಬಂಧ ಕೇಳಿಬರುತ್ತಿರುವ ಆರೋಪಗಳು ನಿಜವೇ ಆಗಿದ್ದರೆ ಮೋದಿ ಸರ್ಕಾರದ ಭ್ರಷ್ಟಾಚಾರ ರಾಹಿತ್ಯದ ಬಿಂಬ ಅನುಮಾನಾಸ್ಪದವಾಗುವುದು ಖಂಡಿತ. ಒಟ್ಟಿನಲ್ಲಿ ರಾಷ್ಟ್ರದ ಪ್ರಾತಿನಿಧಿಕ ಪ್ರಜಾಪ್ರಭುತ್ವವೆಂಬುದು ಒಂದು ದೊಡ್ಡ ದೋಖಾ ಆಗಿ ಪರಿಣಮಿಸಿದೆ. ನೇರ ಪ್ರಜಾಪ್ರಭುತ್ವದ ಮಾದರಿಗಳ ಅನ್ವೇಷಣೆ ಮತ್ತು ಪ್ರಾಯೋಗಿಕತೆಗಳ ಕಾಲ ಸನ್ನಿಹಿತವಾಗಿದೆ.

ಇನ್ನು ನಮ್ಮ ಸರ್ವೋನ್ನತ ನ್ಯಾಯಾಲಯ ಶಬರಿಮಲೈ ಮಂದಿರ ಪ್ರವೇಶ ಕುರಿತು ನೀಡಿದ ತೀರ್ಪಿನ ಬಗ್ಗೆ ಒಂದು ಮಾತು. ಬದುಕಿನ ಎಲ್ಲ ಸಂಗತಿಗಳನ್ನೂ ಸಂವಿಧಾನದ ತಾಂತ್ರಿಕ ಚೌಕಟ್ಟಿನಲ್ಲೇ ವ್ಯಾಖ್ಯಾನ ಮಾಡುವುದು ಅಸಾಧುವಾದೀತೇನೋ. ಸದರಿ ಪ್ರಕರಣದ ಲಿಂಗ ಸಮಾನತೆಯ ಪ್ರಶ್ನೆಯಾಗಿರಲಿ ಅಥವಾ ಈ ಹಿಂದಿನ ಮಾತೃಭಾಷಾ ಮಾಧ್ಯಮ ಪ್ರಕರಣದಲ್ಲಿ ಉಲ್ಲೇಖಿತವಾದ ಮೂಲಭೂತ ಸ್ವಾತಂತ್ರ್ಯದ ಪ್ರಶ್ನೆಯೇ ಆಗಿರಲಿ, ಅಂತಹ ಸಾಂಸ್ಕೃತಿಕ ಬೇರುಗಳುಳ್ಳ ಪ್ರಶ್ನೆಗಳ ವಿವೇಚನೆ ಸಂಪೂರ್ಣ ನ್ಯಾಯಸಮ್ಮತವೆನಿಸುವುದು ಅವು ಒಂದು ಸಾಮಾಜಿಕ-ಸಾಂಸ್ಕೃತಿಕ ಆವರಣದ ಜೀವಂತ ಅರಿವಿನೊಂದಿಗೆ ನಡೆದಾಗ ಮಾತ್ರ ಎಂಬ ಚರ್ಚೆಯನ್ನು ಯಾರಾದರೂ ಸಮರ್ಥ ನ್ಯಾಯವೇತ್ತರು ನ್ಯಾಯಾಂಗ ವಲಯದಲ್ಲಿ ಆರಂಭಿಸಲು ಇದು ಸಕಾಲವಾಗಿದೆ ಎನಿಸುತ್ತದೆ.

-ಸಂಪಾದಕ

ನಿಮ್ಮ ಪತ್ರ

ಪ್ರಿಯ ಸಂಪಾದಕರೇ,

ಮಹಾತ್ಮ ಗಾಂಧಿ ಮತ್ತು ಜೆಪಿಯವರ ಜನ್ಮದಿನ ಹಾಗೂ ಲೋಹಿಯಾ ಅವರ ಪುಣ್ಯದಿನಗಳನ್ನೊಳಗೊಂಡ ಅಕ್ಟೋಬರ್ ತಿಂಗಳ 'ಹೊಸ ಮನುಷ್ಯ' ಸಂಚಿಕೆ ಈ ಮೂವ್ವರ ವಿಚಾರಧಾರೆಗಳಿಂದ ಪ್ರಫುಲ್ಲಿತವಾಗಿ ಹೊರಬಂದಿದೆ. ಗಾಂಧೀಜಿಯವರ ೧೫೦ನೇ ಜನ್ಮೋತ್ಸವವನ್ನು ಆಚರಿಸುತ್ತಿರುವ ನಾವು ಈ ಜಾಗತೀಕರಣ ಯುಗದಲ್ಲಿ ಅವರು ಹೇಳಿದ ಸರಳ ಜೀವನ, ಗ್ರಾಮ ಸ್ವರಾಜ್ಯ, ಕೋಮು ಸೌಹಾರ್ದ ಮತ್ತು ಅಹಿಂಸೆಯ ತತ್ವಗಳನ್ನು ಪಾಲಿಸದೇ ಹೋದರೆ ನಮ್ಮೆಲ್ಲರ ಬದುಕು ದುರ್ಭರವಾಗುವುದು ಖಂಡಿತ.

–ಡಾ. ಎಂ.ಜಿ. ಈಶ್ವರಪ್ಪ, ದಾವಣಗೆರೆ

ಕೆಲಸಕ್ಕೆ ಹೋಗುವ ನನ್ನ ಪ್ರಯಾಣದ ಸಮಯದಲ್ಲಿಯೇ 'ಹೊಸ ಮನುಷ್ಯ'ನನ್ನು ಓದುತ್ತಾ ಅದರ ನಿಷ್ಠಾವಂತ ಓದುಗನಾಗಿ ನಾನು ಮುಂದುವರೆದಿರಲು ಕಾರಣ, ಅದು ನಮ್ಮ ಬದುಕಿಗೆ ಸಂಬಂಧಿಸಿದ ಪ್ರತಿ ಮುಖ್ಯ ವಿಷಯದ ಬಗ್ಗೆ ತನ್ನ ಅನನ್ಯ ಸ್ಪಂದನಗಳನ್ನು ನೀಡುತ್ತಿರುವುದು. ಹಾಗೇ ಪತ್ರಿಕೆಯು ಉಸಿರುಗಟ್ಟಿಸುವ ಅತಿರೇಕಗಳ ವ್ಯಾವಹಾರಿಕ ಮತ್ತು ಯಾಂತ್ರಿಕ ಜಗತ್ತಿನಲ್ಲಿ ಸರಳ ಬದುಕಿನ ಮಾನವೀಯತೆಯ ಒಂದು ಕೊಂಡಿಯಾಗಿ ನಾವು ನಮ್ಮ ತನವನ್ನು ಉಳಿಸಿಕೊಂಡು ಮನುಷ್ಯರಾಗಿ ಬಾಳಲು ನೆರವಾಗುತ್ತಾ ನಮ್ಮನ್ನು ಒಂದುಗೂಡಿಸಿದೆ.

–ಆರ್. ಶಾಂತಮೂರ್ತಿ, ತುಮಕೂರು

ಕಳೆದ ಎರಡು ಮೂರು ವರ್ಷಗಳಿಂದ 'ಹೊಸ ಮನುಷ್ಯ' ಹಾಗೂ ಡಿಎಸ್ನೆಸ್‌ರವರ ಬರಹಗಳನ್ನು ಓದುತ್ತಾ, ಬಂದ ನನಗೆ ಆ ಓದು ಎಲ್ಲ ಒಣ ವೈಚಾರಿಕತೆಯಿಂದಾಚೆಗಿನ ಬದುಕಿನ ಸೂಕ್ಷ್ಮತೆಗಳನ್ನು ಗ್ರಹಿಸಲು ಸಹಾಯ ಮಾಡಿದೆ. ಅಕ್ಟೋಬರ್ ಸಂಚಿಕೆಯ ಗಾಂಧಿ ಕುರಿತ ಎಲ್ಲ ಲೇಖನಗಳು ಗಮನಸೆಳೆಯುತ್ತವೆ. ಐನ್‌ಸ್ಟೀನ್, ಫುಕೊವೊಕರಂತಹ ದಾರ್ಶನಿಕ ವಿಜ್ಞಾನಿಗಳಿಗೆ ಮಹತ್ವದ ವ್ಯಕ್ತಿಯಾಗಿ ಕಂಡ ಗಾಂಧಿ ನಮಗೆ ಮಹತ್ವದವರಾಗಿ ಕಾಣದಿರುವುದು ನಮ್ಮ ದುರಂತವೇ ಸರಿ.

–ಸಂಜಯ್‌ಕುಮಾರ್, ಬೊಕ್ಕೆಪುರ(ಚಾಮರಾಜನಗರ)

ಅಕ್ಟೋಬರ್ ಸಂಚಿಕೆಯ ಸಂಪಾದಕರ ಟಿಪ್ಪಣಿಗಳು ಎಂದಿನಂತೆ ವಸ್ತುನಿಷ್ಠವೂ, ನಿಷ್ಠುರವಾಗಿಯೂ ಇದ್ದು ನಮ್ಮ ಇಂದಿನ ವಾಸ್ತವವನ್ನು ಅರಿಯಲು ದಾರಿದೀಪವಾಗಿದೆ. ಹಾಗೆ ಪ್ರತಿ ಸಂಚಿಕೆಯೂ ಸಂಗ್ರಹಯೋಗ್ಯವಾಗಿದೆ.

–ಎಸ್.ವಿ. ದ್ಯಾವಲಾಪುರ, ಧಾರವಾಡ

ನೀವು ಬರೆಯುತ್ತಿರುವ ಗಾಂಧಿ ಜೀವನ ಚರಿತ್ರೆ 'ಗಾಂಧಿ ಕಥನ'ದ ಆಯ್ದ ಭಾಗಗಳನ್ನು ಅಕ್ಟೋಬರ್ ಸಂಚಿಕೆಯಲ್ಲಿ ಓದಿ ಮನಸ್ಸು ತುಂಬಿಬಂತು. ಪುಸ್ತಕ ಬೇಗ ಪೂರ್ಣವಾಗಿ ಗಾಂಧೀಜಿಯ ೧೫೦ನೇ ಜನ್ಮೋತ್ಸವದ ಸಂದರ್ಭದಲ್ಲೇ ಹೊರಬರಲಿ.

–ಎಂ. ಪರಶುರಾಮ, ಕಲಬುರಗಿ


'ಗಾಂಧಿ ಕಥನ'ದಲ್ಲಿ ಸೆರೆಮನೆಯಿಂದ ಗಾಂಧಿ ತಮ್ಮ ಮಗ ಮಣಿಲಾಲನಿಗೆ ಬರೆದ ಪತ್ರದಲ್ಲಿ ಬರುವ 'ಬಡತನದ ಪ್ರಯೋಜನಗಳು ಶ್ರೀಮಂತಿಕೆಯವಕ್ಕಿಂತ ಹೆಚ್ಚು ಸವಿಯಾಗಿರುತ್ತವೆ' ಎಂಬ ಮಾತು ಸದಾ ನನ್ನ ಮನಸ್ಸಿನಲ್ಲಿ ಅನುರಣಿಸುತ್ತಿರುತ್ತದೆ

–ಪ್ರೊ. ಎನ್ ಬೋರಲಿಂಗಯ್ಯ, ಮೈಸೂರು

ಸೆಪ್ಟಂಬರ್ ಸಂಚಿಕೆಯಲ್ಲಿನ ನಿಮ್ಮ ಸಾಹಿತ್ಯ–ಸಂಸ್ಕೃತಿ ಕುರಿತ ಟಿಪ್ಪಣಿಗಳಲ್ಲಿನ ಕುವೆಂಪು v/s ಅಂಬೇಡ್ಕರ್ ಬರಹ ಓದಿದೆ. ಇದು ನಾನೂ ಅನೇಕ ಬಾರಿ ಎದುರಿಸಿರುವ ಸಾಮಾನ್ಯ ಅನುಭವ. 'ಹೊಸ ಮನುಷ್ಯ' ಚೆನ್ನಾಗಿ ಮೂಡಿ ಬರುತ್ತಿದ್ದು ಇಂದಿನ ಕೆಲವೇ ಉತ್ತಮ ಪತ್ರಿಕೆಗಳಲ್ಲಿ ಒಂದು.

–ಡಾ. ಮೀನಾ ದೇಶಪಾಂಡೆ, ಬೆಂಗಳೂರು

ಮೈಸೂರಿನಲ್ಲಿ 'ಮಲೆಗಳಲ್ಲಿ ಮದುಮಗಳು-೫೦' : ಒಂದು ವರದಿ



ಕುವೆಂಪು ಅವರ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯನ್ನು ಓದುತ್ತಾ ಹೋದರೆ ಈಗಲೂ ಅದು ಕನ್ಯೆಯಂತೆ ಮತ್ತು ಚಿರಯೌವ್ವನೆಯಂತೆ ಕಂಗೊಳಿಸುತ್ತದೆ. ಅದು ಕನ್ನಡಕ್ಕೆ ಮಾತ್ರವಲ್ಲ ಇಡೀ ಭಾರತದ ಸಂದರ್ಭದಲ್ಲೂ ಶತಮಾನದ ಕಾದಂಬರಿ ಎಂದು ಸಾಹಿತಿ ದೇವನೂರು ಮಹಾದೇವ ಹೇಳಿದರು. ಅವರು ಮಲೆಗಳಲ್ಲಿ ಮದುಮಗಳು ಕಾದಂಬರಿಗೆ ೫೦ ವರ್ಷಗಳು ತುಂಬಿದ ಸಂದರ್ಭದಲ್ಲಿ ಬೆಂಗಳೂರಿನ ಕುವೆಂಪು ವಿಚಾರ ವೇದಿಕೆ, ಶಿವಮೊಗ್ಗದ ಲೋಹಿಯಾ ಜನ್ಮಶತಾಬ್ದಿ ಪ್ರತಿಷ್ಠಾನ, ಮತ್ತು ಮೈಸೂರು ವಿಶ್ವವಿದ್ಯಾನಿಲಯ ಒಟ್ಟು ಸೇರಿ ಇದೇ ಅಕ್ಟೋ. ೧೮ರಂದು ಮೈಸೂರಿನಲ್ಲಿ ಆಯೋಜಿಸಿದ್ದ ವಿಚಾರ ಸಂಕಿರಣ ಹಾಗೂ ನಾಟಕ ಪ್ರದರ್ಶನ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

ಈ ಕಾದಂಬರಿಯನ್ನು ನಾನು ಬಿ ಎ ಪದವಿ ಸಂದರ್ಭದಲ್ಲಿ ಓದಿದ್ದೆ, ಆಗ ನವ್ಯರ ಕಾಲ. ಈ ಸಾಹಿತ್ಯ ವಲಯದಲ್ಲಿ ದನ್ನು ಕತ್ತರಿಸಿ ತುಂಡು ತುಂಡು ಮಾಡುತ್ತಿದ್ದರು. ಆಗ ನಾನು ಮುಗ್ದವಾಗಿ ಕನ್ನಡದ ಇತರ ಶ್ರೇಷ್ಠ ಕೃತಿಗಳನ್ನೆಲ್ಲ ಒಟ್ಟಿಗಿಟ್ಟು ತೂಗಿದರೂ 'ಮಲೆಗಳಲ್ಲಿ ಮದುಮಗಳು'ವೇ ಹೆಚ್ಚಿಗೆ ತೂಗುತ್ತದೆ ಎಂದು ಸಮರ್ಥಿಸುತ್ತಿದ್ದೆ. ಅದು ಈಗಲೂ ಸರಿ ಎಂದೇ ನನ್ನ ಅಭಿಪ್ರಾಯ ಎಂದು ಅವರು ಹೇಳಿದರು

ಕಾರ್ಯಕ್ರಮದ ಆಶಯ ಮಾತುಗಳನ್ನಾಡಿದ ಲೋಹಿಯಾ ಜನ್ಮಶತಾಬ್ದಿ ಪ್ರತಿಷ್ಠಾನದ ಅಧ್ಯಕ್ಷ ಡಿ.ಎಸ್.ನಾಗಭೂಷಣ ಕುವೆಂಪು ಮತ್ತು ಲೋಹಿಯಾ ವಿಚಾರಗಳ ಮಧ್ಯೆ ಇರುವ ಸಾಮ್ಯತೆಗಳನ್ನು ಗುರುತಿಸುತ್ತಾ, 'ಮಲೆಗಳಲ್ಲಿ ಮದುಮಗಳು' ಭಾರತದ ಮಾತ್ರವಲ್ಲ ಶ್ರೇಷ್ಠ ಜಾಗತಿಕ ಕಾದಂಬರಿಗಳ ಸಾಲಿನಲ್ಲಿ ನಿಲ್ಲಬಲ್ಲ ಕೃತಿ ಎಂದರು. ಏಕೆಂದರೆ ಇದು ಕಾದಂಬರಿ ಎಂದರೇನು ಎಂಬ ಆವರೆಗಿನ ಕಲ್ಪನೆಯನ್ನೇ ಬದಲಿಸಿತು ಮತ್ತು ಕಾದಂಬರಿಗಳನ್ನು ಕಟ್ಟುತ್ತಿದ್ದ ವಾಸ್ತವತಾವಾದಕ್ಕೆ ಹೊಸ ಆಯಾಮಗಳನ್ನೇ ನೀಡಿತು ಎಂದರು. ಈ ಕಾಂದಬರಿ ಪಶ್ಚಿಮದ ಆಧುನಿಕತೆಯನ್ನು ಮುಖಾಮುಖಿ ಮಾಡಿಕೊಳ್ಳುವ ರೀತಿ ಇಂದಿನ ಹಿಂದುತ್ವ ರಾಜಕಾರಣದ ಹಿನ್ನೆಲೆಯಲ್ಲಿ ನಮ್ಮೆಲ್ಲರ ಗಮನ ಸೆಳೆಯಬೇಕು ಎಂದೂ ಅವರು ನುಡಿದರು.

ಮುಖ್ಯ ಅಥಿತಿಯಾಗಿದ್ದ ಮೈಸೂರು ವಿಶ್ವವಿದ್ಯಾನಿಲಯದ ರಿಜಿಸ್ಟ್ರಾರ್ ಡಾ.ಆರ್.ರಾಜಣ್ಣ ಮಾತನಾಡಿ ಈ ಕಾರ್ಯಕ್ರಮಕ್ಕೆ ಕುವೆಂಪು ಅವರು ಕುಲಪತಿಗಳಾಗಿದ್ದ ತಮ್ಮ ವಿಶ್ವವಿದ್ಯಾನಿಲಯ ಸಹಯೋಗ ನೀಡುತ್ತಿರುವುದು ಹೆಮ್ಮೆಯ ವಿಷಯವಾಗಿದೆ ಎಂದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಹಿರಿಯ ವಿಮರ್ಶಕ ಜಿ.ಹೆಚ್.ನಾಯಕ ಮಾತನಾಡಿ, ಇದೊಂದು ಐತಿಹಾಸಿಕ ಕಾರ್ಯಕ್ರಮವಾಗಿದ್ದು, ಕುವೆಂಪು ಇಲ್ಲದಿದ್ದರೆ ನಮ್ಮ ನವೋದಯ ಸಾಹಿತ್ಯ ಇಷ್ಟು ಸಮೃದ್ದವಾಗಿ ಇರುತ್ತಿರಲಿಲ್ಲವೆಂದು ಅಭಿಪ್ರಾಯಪಟ್ಟರು. ಕೇವಲ 'ಮಲೆಗಳಲ್ಲಿ ಮದುಮಗಳು'ವಿಗೆ ಮಾತ್ರವಲ್ಲ ಇಡೀ ಕುವೆಂಪು ಸಾಹಿತ್ಯಕ್ಕೆ ಕನ್ನಡ ವಿಮರ್ಶಾಲೋಕ ಸಮರ್ಥವಾಗಿ ಸ್ಪಂದಿಸಲು ವಿಫಲವಾಗಿದೆ ಎಂದೂ ಅವರು ಹೇಳಿದರು.

ನಂತರ ನಡೆದ ಮೂರು ಗೋಷ್ಠಿಗಳಲ್ಲಿ ಸಾಹಿತಿ ಪ್ರೊ. ಓ. ಎಲ್ ನಾಗಭೂಷಣಸ್ವಾಮಿ 'ಜಾಗತಿಕ ಕಾದಂಬರಿ ಪರಂಪರೆ ಮತ್ತು ಮಲೆಗಳಲ್ಲಿ ಮದುಮಗಳು', ಡಾ. ಕೆ.ವೈ ನಾರಾಯಣಸ್ವಾಮಿ 'ಮಲೆಗಳಲ್ಲಿ ಮದುಮಗಳು– ಸಾಮಾಜಿಕ ವಿನ್ಯಾಸಗಳು' ಮತ್ತು ಡಾ. ಸಬಿತಾ ಬನ್ನಾಡಿ 'ಮಲೆಗಳಲ್ಲಿ ಮದುಮಗಳು : ಗಂಡು–ಹೆಣ್ಣಿನ ಸಂಬಂಧಗಳು' ವಿಷಯವಾಗಿ ಪ್ರಬಂಧಗಳನ್ನು ಮಂಡಿಸಿದರು.

ಸಂಜೆ ಕಾರ್ಯಕ್ರಮದ ಸಮಾರೋಪ ನುಡಿಗಳನ್ನಾಡಿದ ಪ್ರೊ. ಎನ್. ಬೋರಲಿಂಗಯ್ಯನವರು 'ಮಲೆಗಳಲ್ಲಿ ಮದುಮಗಳು ೫೦ ವರ್ಷಗಳ ನಂತರ ಮಾತ್ರವಲ್ಲ, ನೂರು ವರ್ಷಗಳ ನಂತರವೂ ಹೀಗೇ ಜೀವಂತವಾಗಿರಬಲ್ಲ ಸತ್ವಯುತ ಕಾದಂಬರಿ ಎನ್ನುತ್ತಾ ಕಾದಂಬರಿಯ ಗುತ್ತಿ ಮತ್ತು ಸುಬ್ಬಣ್ಣ ಹೆಗ್ಗಡೆ ಪಾತ್ರಗಳ ವಿನ್ಯಾಸವನ್ನು ವಿವರಿಸುತ್ತಾ ತಮ್ಮ ಮಾತನ್ನು ಸಮರ್ಥಿಸಿಕೊಂಡರು. ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕ ಎನ್. ಆರ್. ವಿಶುಕುಮಾರ್ ಅಧ್ಯಕ್ಷತೆ ವಹಿಸಿದ್ದರು.


ನಂತರ ಶಿವಮೊಗ್ಗದ 'ಸಹ್ಯಾದ್ರಿ ರಂಗತರಂಗ' ತಂಡದಿಂದ ಕ ಕುವೆಂಪು ಅವರ 'ಜಲಗಾರ' ನಾಟಕ ಪ್ರದರ್ಶನಗೊಂಡಿತು.

(ವರದಿ : ಬಿ.ವಿ.ಸುರೇಂದ್ರ)

ನುಡಿನಮನ

ಅಗಲಿದ ಎರಡು ಹಿರಿಯ ಜೀವಗಳು

ಗಂಗೆಯ ನಿಜಪುತ್ರ ಜಿ.ಡಿ. ಅಗರ್‌ವಾಲ್



ಗಂಗಾ ನದಿಯ ಶುದ್ಧೀಕರಣಕ್ಕಾಗಿ ಒತ್ತಾಯಿಸಿ ಅಮರಣಾಂತ ಉಪವಾಸ ಕೈಗೊಂಡಿದ್ದ ಸಾನಂದ ಸ್ವಾಮೀಜಿ ಸರ್ಕಾರದ ನಿರ್ಲಕ್ಷ್ಯಕ್ಕೆ ಒಳಗಾಗಿ ಕಳೆದ ಅಕ್ಟೋ. ೧೨ರಂದು ಗಂಗಾ ತೀರದ ಋಷಿಕೇಶದಲ್ಲಿ ಸಾವನ್ನಪ್ಪಿದ್ದಾರೆ. ಗಂಗೆಯ ಪುತ್ರನೆಂದೂ, ಗಂಗಾಮಾತೆಯೇ ತಮ್ಮನ್ನು ವಾರಾಣಾಸಿಗೆ ಕರೆದು ಗೆಲ್ಲಿಸಿ ಪ್ರಧಾನಮಂತ್ರಿಯನ್ನಾಗಿ ಮಾಡಿರುವಳೆಂದೂ 'ನಮಾಮಿ ಗಂಗಾ' ಎಂಬ ಹೆಸರಿನ ಗಂಗಾ ಶುದ್ಧೀಕರಣದ ಭವ್ಯ ಕಾರ್ಯಕ್ರಮವನ್ನು ಘೋಷಿಸಿದ ನರೇಂದ್ರ ಮೋದಿ ಈ ಅನ್ಯಾಯದ ಸಾವಿಗೆ 'ವಿಷಾದ'ದ ಒಂದು 'ಟ್ವೀಟ್' ಮಾಡಿ ಅಂತಹ ಅನಾಹುತವೇನೂ ಆಗಿಲ್ಲವೆಂಬಂತೆ ತಮ್ಮ ಭವ್ಯ ಅಭಿವೃದ್ಧಿ ಆಡಳಿತವನ್ನು ಮುಂದುವರೆಸಿದ್ದಾರೆ.


ಇದು ನಿಜವಾಗಿಯೂ ಕೆಟ್ಟ ಕಾಲ. ಏಕೆಂದರೆ, ಐಐಟಿಯಲ್ಲಿ ಇಂಜಿನಿಯರಿಂಗ್ ಪದವಿ ಪಡೆದು ಕ್ಯಾಲಿಫೋರ್ನಿಯಾ ವಿಶ್ವವಿದ್ಯಾನಿಲಯದಿಂದ ಡಾಕ್ಟೋರೇಟ್ ಪಡೆದು ಬಂದು ಗಂಗಾ ನದಿಯನ್ನೇ ಕೇಂದ್ರವಾಗಿಟ್ಟುಕೊಂಡು ವ್ಯಾಪಕ ಸಂಶೋಧನೆ ನಡೆಸಿ ಸಹಸ್ರಾರು ವರ್ಷಗಳಿಂದ ದೇಶದ ಕೋಟ್ಯಾಂತರ ಜನರ ಬದುಕು ಮತ್ತು ಸಂಸ್ಕೃತಿಗಳನ್ನು ಕಟ್ಟುತ್ತಾ ಬಂದು ಅವರ ಆರಾಧ್ಯ ದೈವವೇ ಆಗಿರುವ ಈ ಮಹಾನದಿಯ ಜೀವ ಉಳಿಸಲು ತಮ್ಮ ಬದುಕನ್ನೇ ಅರ್ಪಿಸಿಕೊಂಡಿದ್ದ ಜಿ.ಡಿ ಅಗರ್‌ವಾಲ್ ಅದಕ್ಕಾಗಿ ಸಂನ್ಯಾಸ ದೀಕ್ಷೆ ಪಡೆದು ಸಾನಂದ ಸ್ವಾಮಿಯಾಗಿದ್ದರು. ಎಂಬತ್ತಾರು ವರ್ಷಗಳ ಈ ಹಿರಿಯ ವಿಜ್ಞಾನಿ-ಸಂನ್ಯಾಸಿಯು ತನ್ನ ಗುರಿ ಸಾಧನೆಗಾಗಿ ೧೧೦ ದಿನಗಳ ಸತತ ಉಪವಾಸದ ಪರಿಣಾಮವಾಗಿ ಸಾವು ಬದುಕುಗಳ ನಡುವೆ ತುಯ್ದಾಡುತ್ತಿದ್ದಾಗ ಅಲ್ಲಾಡದೆ ಸರ್ಕಾರ ಕೂತಿತ್ತೆಂದರೆ ಅದರ ಅರ್ಥವಾದರೂ ಏನು? ಇನ್ನು ನಮ್ಮ 'ರಾಷ್ಟ್ರೀಯ' ಮಾಧ್ಯಮಗಳಾದರೂ ಏನು ಮಾಡುತ್ತಿದ್ದವು? ಇವುಗಳ ಪ್ರಕಾರವೂ ಈಗ 'ರಾಷ್ಟ್ರ' ಅಂದರೆ ಸರ್ಕಾರ ಎಂದೇ ಆಗಿಬಿಟ್ಟಿರುವಂತಿದೆ!

ಅಭಿವೃದ್ಧಿಯ ದೆವ್ವ ಬಡಿದಿರುವ ನಮ್ಮ ಸರ್ಕಾರಗಳಿಗೆ ಉತ್ತರಾಖಂಡ, ಶ್ರೀನಗರ, ಚೆನ್ನೈ ಮತ್ತು ಇತ್ತೀಚಿನ ಕೇರಳ-ಕೊಡಗು ದುರಂತಗಳೂ ಕಣ್ಣು ತೆರೆಸಿಲ್ಲ. ತಮ್ಮ ಪಕ್ಷಕ್ಕೆ ತೆರೆಮರೆಯಲ್ಲಿ ಲೆಕ್ಕವಿಲ್ಲದ ದೇಣಿಗೆ ನೀಡುವ ಉದ್ಯಮಪತಿಗಳಿಗೆ ಮತ್ತು ಗುತ್ತಿಗೆದಾರರಿಗೆ ತಮ್ಮನ್ನು ಮಾರಿಕೊಂಡಿರುವ ಈ ಸರ್ಕಾರಗಳು ಈ 'ಅಭಿವೃದ್ಧಿ'ಯ ಮೂಲಕ ದೇಶವನ್ನು ಬಲಿಷ್ಠಗೊಳಿಸುತ್ತಿರುವುದಾಗಿ ಎದೆ ತಟ್ಟಿಕೊಂಡು ಹೇಳುತ್ತಾ ಇನ್ನಷ್ಟು, ಮತ್ತಷ್ಟು ಎಂದು ತಣಿಯದ ಸುಖಸೌಕರ್ಯಗಳ ದಾಹಕ್ಕೆ ಸಿಕ್ಕಿರುವ ಜನರ ಕಣ್ಣಿಗೆ ಸುಲಭವಾಗಿ ಮಣ್ಣೆರೆಚುತ್ತಿದ್ದಾರೆ. ಎಲ್ಲರೂ ಸೇರಿ ರಾಷ್ಟ್ರದ ಆತ್ಮಸಾಕ್ಷಿಯನ್ನು ಕೊಲ್ಲುತ್ತಿರುವ ಮಹಾ ದುರಂತದ ವಿಕಟ ದೃಶ್ಯವಿದು.

ತಮ್ಮ ಸಂಶೋಧನೆಗಳ ಮೂಲಕ ಜನರ ಪಾರಂಪರಿಕ ನಂಬಿಕೆಯಾಗಿದ್ದ ಗಂಗೆಯ ನೀರಿಗೆ ವಿಶಿಷ್ಟ ಶಕ್ತಿಯಿದೆ ಎಂಬುದಕ್ಕೆ ಅಗರ್‌ವಾಲರು ಪುರಾವೆ ಕಂಡುಕೊಂಡಿದ್ದರು. ಗಂಗಾ ನೀರನ್ನು ರೋಗನಿರೋಧಕವಾಗಿಸಿರುವ ಕೆಲವು ವಿಶಿಷ್ಟ ಸೂಕ್ಷ್ಮಾಣು ಜೀವಿಗಳು ಬದುಕುಳಿಯಲು ನದಿಯ ಹರಿವು ನಿರಂತರವಾಗಿರಬೇಕಿದ್ದು, ಇದಕ್ಕೆ ಅಡ್ಡಿಯಾಗುತ್ತಿರುವ ಜಲವಿದ್ಯುತ್ ಉದ್ದೇಶದ ಅಣೆಕಟ್ಟುಗಳನ್ನು ನದಿಯ ಬಾಲ್ಯದ ಘಟ್ಟವಾದ ಹಿಮಾಲಯ ಶ್ರೇಣಿಯಲ್ಲಾದರೂ ನಿಷೇಧಿಸಬೇಕೆಂಬುದು ಅವರ ಆಗ್ರಹವಾಗಿತ್ತು. ಇದರ ಕೊನೆಯ ಪ್ರಯತ್ನವಾಗಿ ಉಪವಾಸ ಕೂತಿದ್ದರು. ಹೀಗೆ ಈ 'ನಮಾಮಿ ಗಂಗಾ' ಪಕ್ಷದ ನಿರ್ಲಕ್ಷಕ್ಕೆ ಅಗರ್‌ವಾಲರು ಮೊದಲ ಬಲಿಯೇನಲ್ಲ. ಗಂಗೆಯ ಒಡಲ ಮರಳಿನ ಲೂಟಿಯ ವಿರುದ್ಧ ಉಪವಾಸ ಕೂತ ಸ್ವಾಮಿ ನಿಗಮಾನಂದರೂ ಹೀಗೇ ಸರ್ಕಾರದ ಅಲಕ್ಷ್ಯಕ್ಕೆ ಈಡಾಗಿ ಕೊನೆಯುಸಿರೆಳೆದಿದ್ದರು

ಅಗರ್‌ವಾಲರು ಯುಪಿಎ ಸರ್ಕಾರವಿದ್ದಾಗಲೂ ಇಂಥದೇ ಕಾರಣಗಳಿಗಾಗಿ ಎರಡು ಬಾರಿ ಉಪವಾಸ ಕೈಗೊಂಡಿದ್ದರು. ಎರಡು ಬಾರಿಯೂ ಮನಮೋಹನಸಿಂಗ್ ಸರ್ಕಾರ ಕೊಸರಾಡಿಯಾದರೂ ಅವರ ಆಗ್ರಹಗಳ ಪರಿಶೀಲನೆಯ ಆಶ್ವಾಸನೆ ನೀಡಿ ಅವರ ಪ್ರಾಣವನ್ನು ರಕ್ಷಿಸಿತ್ತು ಮತ್ತು ಅವರ ಕೆಲವು ಬೇಡಿಕೆಗಳನ್ನೂ ಈಡೇರಿಸಿತ್ತು. ಆದರೆ 'ಹಿಂದುತ್ವ'ದ ಅಬ್ಬರದ ಪ್ರಸ್ತುತ ಸರ್ಕಾರ ನಿಜವಾದ ಗಂಗಾಪುತ್ರನನ್ನು ಬಲಿ ತೆಗೆದುಕೊಂಡಿದೆ. ಈ ಬಲಿದಾನ ವ್ಯರ್ಥವಾಗುವುದಿಲ್ಲ ಎಂದು ಭಾವಿಸೋಣ.

ಮಾದರಿ ಮಠಾಧೀಶ ಸಿದ್ಧಲಿಂಗ ಸ್ವಾಮೀಜಿ



ಕೆಲವು ದಿನಗಳ ಹಿಂದಷ್ಟೇ ಹಠಾತ್ತಾಗಿ ನಮ್ಮನ್ನು ಅಗಲಿಹೋದ ಗದುಗಿನ ತೋಂಟದ ಸಿದ್ಧಲಿಂಗ ಸ್ವಾಮೀಜಿ ಓರ್ವ ಅಪರೂಪದ ಮಠಾಧೀಶರಾಗಿದ್ದರು. ನಮ್ಮ ಒಂದೊಂದು ಮಠವೂ ಒಂದೊಂದು ಜಾತಿ-ಉಪಜಾತಿಗಳ ಆಶ್ರಯದಾಣಗಳಾಗಿ ಆಯಾ ಸಮುದಾಯಗಳ ಸಂಕುಚಿತ ಹಿತಾಸಕ್ತಿಗಳನ್ನು ರಕ್ಷಿಸುವ ಶಕ್ತಿಕೇಂದ್ರಗಳಂತೆ ವರ್ತಿಸುತ್ತಿದ್ದಾಗ ಇವರ ಮಠ ಎಲ್ಲ ಜಾತಿ-ಧರ್ಮಗಳ ಜನರ ಪ್ರೀತಿ-ವಿಶ್ವಾಸಗಳಿಗೆ ಪಾತ್ರವಾಗಿದ್ದ ಒಂದು ಸಾಮಾಜಿಕ-ಸಾಂಸ್ಕೃತಿಕ-ಧಾರ್ಮಿಕ ಕೇಂದ್ರವಾಗಿತ್ತು.

ಕನ್ನಡ ಸಾಹಿತ್ಯ-ಸಂಸ್ಕೃತಿಗಳ ಆಳವಾದ ತಿಳುವಳಿಕೆ ಹೊಂದಿ ಸಾಹಿತ್ಯದಲ್ಲಿ ಸ್ನಾತಕೋತ್ತರ ಪದವಿಯನ್ನೂ ಪಡೆದಿದ್ದ ಸಿದ್ಧಲಿಂಗ ಸ್ವಾಮೀಜಿಯವರು 'ಕನ್ನಡ ಜಗದ್ಗುರು' ಎಂದೇ ಪ್ರಸಿದ್ಧರಾದವರು. . ತಮ್ಮ ಮಠದ ವತಿಯಿಂದಲೇ ಪುಸ್ತಕ ಪ್ರಕಾಶನವನ್ನು ಆರಂಭಿಸಿ ಕರ್ನಾಟಕದ ಇತಿಹಾಸ, ಪರಂಪರೆ ಅಧ್ಯಾತ್ಮಿಕ ವಿಚಾರ ಮತ್ತು ಅಪರೂಪದ ಸಾಧಕರ ಬದುಕನ್ನು ಕುರಿತ ಅನೇಕ ವಿದ್ವತ್ಪೂರ್ಣ ಮತ್ತು ಜನಪ್ರಿಯ ಗ್ರಂಥಗಳನ್ನು ಪ್ರಕಟಿಸಿರುವರು. ಅವರ ಮಠದಲ್ಲಿ ನಡೆಯುತ್ತಿದ್ದ ವಾರದ 'ಶಿವಾನುಭವ' ಗೋಷ್ಠಿ ಜಾತಿ-ಮತ ಸಂಪ್ರದಾಯಗಳಿಂದ ದೂರವಿದ್ದುದಾಗಿತ್ತು. ಇತ್ತೀಚೆಗೆ ಪ್ರಕಟವಾದ 'ಮಹಾತ್ಮ ಗಾಂಧಿ : ರಾಮಮನೋಹರ ಲೋಹಿಯಾ ಅವರು ಕಂಡಂತೆ' ಪುಸ್ತಕದ ಬಗ್ಗೆ ನಡೆದ ಗೋಷ್ಠಿ ಇದಕ್ಕೆ ಉದಾಹರಣೆಯಾಗಿತ್ತು. ಕನ್ನಡಕ್ಕೆ ಕುತ್ತು ಬಂದಾಗಲೆಲ್ಲ ಜನ ಜಾಗೃತಿಗೆ ಮುಂದಾಗಿ ಸರ್ಕಾರಕ್ಕೆ ಎಚ್ಚರಿಕೆ ಕೊಟ್ಟವರು. ಕನ್ನಡ ಮಾಧ್ಯಮದ ವಿರುದ್ಧ ಸರ್ವೋನ್ನತ ನ್ಯಾಯಾಲಯದ ತೀರ್ಪು ಬಂದಾಗ ಅವರು ನೊಂದರು. ಈ ತೀರ್ಪಿನ ಸಂಬಂಧವಾಗಿ ರಾಜ್ಯ ಸರ್ಕಾರ ಏನೂ ಮಾಡುತ್ತಿಲ್ಲವೆಂದು ಪ್ರತಿಭಟಿಸಿ ನಾನು ಕಳೆದ ವರ್ಷ ರಾಜ್ಯೋತ್ಸವ ಪ್ರಶಸ್ತಿಯನ್ನು ಸ್ವೀಕರಿಸಲು ನಿರಾಕರಿಸಿದಾಗ ನನ್ನನ್ನು ಅಭಿನಂದಿಸಿ ಸ್ವಾಮೀಜಿ ದೀರ್ಘ ಪತ್ರ ಬರೆದಿದ್ದರು


ಮಠಾಧೀಶರಾಗಿ ಧಾರ್ಮಿಕ ಸಂಗತಿಗಳಿಗಷ್ಟೇ ತಮ್ಮನ್ನು ಸೀಮಿತಗೊಳಿಸಿಕೊಳ್ಳಲೊಲ್ಲದ ಸ್ವಾಮೀಜಿ ಹಲವು ಜನಾಂದೋಲನಗಳ ನೇತೃತ್ವ ವಹಿಸಿದ್ದಲ್ಲದೆ, ಅನಿವಾರ್ಯವಾದಾಗ ತಾವೇ ಆಂದೋಲನಗಳಿಗೆ ಚಾಲನೆ ನೀಡಿದ್ದೂ ಉಂಟು. ಗೋಕಾಕ ಚಳುವಳಿ, ಪೋಸ್ಕೋ ಭೂ ಸ್ವಾಧೀನ ವಿರೋಧಿ ಚಳುವಳಿ, ಕಪ್ಪತಗುಡ್ಡ ಪರಿಸರ ಸಂರಕ್ಷಣಾ ಚಳುವಳಿಗಳು ಇದಕ್ಕೆ ಉದಾಹರಣೆಗಳು. ಪೊಸ್ಕೋ ವಿರೋಧಿ ಚಳುವಳಿಯ ಸಂದರ್ಭದಲ್ಲಿ ನಮ್ಮ ಪತ್ರಿಕೆ ಅವರನ್ನು ಸಂದರ್ಶಿಸಿತ್ತು. (ಸೆಪ್ಟಂ. ೨೦೧೧) ಆಗ ಪತ್ರಿಕೆಯ ಒಂದು ಪ್ರಶ್ನೆಗೆ ಅವರು ಹೀಗೆ ಉತ್ತರಿಸಿದ್ದರು : 'ಮಠಾಧಿಪತಿಗಳು ನೀರು, ಭೂಮಿ, ಗಾಳಿ, ಬೆಳಕಿನಂತಿರಬೇಕು. ಎಲ್ಲರ ಹಿತ ಕಾಯಬೇಕು. ಭಾರತೀಯ ತತ್ವಜ್ಞಾನದಲ್ಲಿ ಇಹಕ್ಕಿಂತ ಪರಕ್ಕೆ ಲಕ್ಷ್ಯ ಕೊಟ್ಟವರೇ ಹೆಚ್ಚು. ಪರದಷ್ಟೇ ಇಹಕ್ಕೂ ಬೆಲೆ ಕೊಟ್ಟವರು ಬಸವಣ್ಣ. ಆ ಬಸವ ಪರಂಪರೆಯ ವ್ಯಾಪ್ತಿಯಲ್ಲಿಯೇ ನಮ್ಮ ಮಠ ಇರುವುದರಿಂದ ಈ ಚಳುವಳಿಯಲ್ಲಿ ಭಾಗವಹಿಸುವುದು ನನ್ನ ಕರ್ತವ್ಯವಾಯಿತು'

ಬಸವ ಪರಂಪರೆಯ ನಿಷ್ಠುರ ಅನುಯಾಯಿಗಾಗಿ ಅಡ್ಡಪಲ್ಲಕ್ಕಿ, ಕಿರೀಟಧಾರಣೆ, ಪೀಠಾರೋಹಣ ಇತ್ಯಾದಿ ಡಂಭಾಚಾರಗಳನ್ನು ತ್ಯಜಿಸಿದ್ದ ಸ್ವಾಮೀಜಿ ಕಾಯಕ, ದಾಸೋಹ, ಅಕ್ಷರ ಪ್ರಸಾರಗಳ ಸಂಸ್ಕೃತಿಯನ್ನು ಪೋಷಿಸಿದವರು. 'ಹೊಸ ಮನುಷ್ಯ' ಪತ್ರಿಕೆಗೆ ಚಂದಾ ನೀಡಿ ಅದರ ಅಭಿಮಾನದ ಓದುಗರಾಗಿದ್ದ ಸ್ವಾಮೀಜಿ, ಲಿಂಗಾಯತ ಸ್ವತಂತ್ರ ಧರ್ಮ ಚಳುವಳಿಯನ್ನು ಅದರ ಜಾತಿಸಂಕುಚಿತ ರಾಜಕಾರಣಕ್ಕಾಗಿ ನಾನು ವಿರೋಧಿಸಿದಾಗ ಮುನಿಸಿಕೊಂಡದ್ದೂ ಉಂಟು. ಆದರೆ ನನ್ನ ವಿರೋಧವನ್ನು ಅವರಿಗೆ ವೈಯಕ್ತಿಕವಾಗಿ ವಿವರಿಸುವ ಅವಕಾಶ ನನಗೆ ದೊರೆಯುವ ಮುನ್ನವೇ ಅವರು ನಮ್ಮನ್ನು ಅಗಲಿ ಹೋಗಿದ್ದಾರೆ. ಇಂತಹ ಮಾದರಿ ಮಠಾಧೀಶರನ್ನು ಈ ದಿನಗಳಲ್ಲಿ ಜನ ಮತ್ತೆ ಪಡೆಯುವುದು ಕಷ್ಟ.

–ಡಿಎಸ್ಸೆನ್

ತಿಂಗಳ ಚರ್ಚೆ

ಇನ್ನೂ ಒಂದು ರಾಜ್ಯೋತ್ಸವ ಬಂದಿದೆ!



ಇನ್ನೂ ಒಂದು ಕನ್ನಡ ರಾಜ್ಯೋತ್ಸವ ಬಂದಿದೆ. ಕನ್ನಡಿಗರು ರಾಜ್ಯಾದ್ಯಂತ ಕನ್ನಡ ಡಿಂಡಿಮವನ್ನು ಎಲ್ಲರ ಕಿವಿಗಡಚಿಕ್ಕುವಂತೆ ಬಾರಿಸುತ್ತಾರೆ. ಭಾಷಣವೀರರು ವೇದಿಕೆ ಹತ್ತಿ ಕನ್ನಡ ಭಾಷೆ–ಸಂಸ್ಕೃತಿಗಳ ಭವ್ಯ ಪರಂಪರೆಯ ಬಗ್ಗೆ ಭಾಷಣಗಳನ್ನು ಕುಟ್ಟಿ ಹೋಗಲಿದ್ದಾರೆ. ರಾಜ್ಯ ಸರ್ಕಾರ, ಅರ್ಜಿ ಗುಜರಾಸಿಕೊಂಡವರೂ ಸೇರಿದಂತೆ ಹಲವರಿಗೆ ರಾಜ್ಯೋತ್ಸವ ಪ್ರಶಸ್ತಿ ನೀಡಿ ಹೆಮ್ಮೆ ಪಟ್ಟುಕೊಳ್ಳುತ್ತದೆ. ಮಂತ್ರಿ–ಮುಖ್ಯಮಂತ್ರಿಗಳು ಕನ್ನಡ ತಮ್ಮ ಉಸಿರು, ಅದನ್ನು ಕಾಪಾಡುವುದಕ್ಕೆ ತಾವು ಬದ್ಧ ಎಂದು ಇನ್ನೊಮ್ಮೆ, ಮತ್ತೊಮ್ಮೆ, ಮಗದೊಮ್ಮೆ ಘೋಷಿಸುತ್ತಾರೆ!

ಎಂತಹ ಅಮಾಯಕ ದೃಶ್ಯವಿದು! ಒಂದು ಕಡೆ ಕನ್ನಡ ಶಾಲೆಗಳು ನಿರಂತರವಾಗಿ ಮುಚ್ಚುತ್ತಾ, ಜನರ ನಾಲಗೆ ಮೇಲಿನ ಕನ್ನಡ ಬಡವಾಗುತ್ತಾ, ಕೆಲವೆಡೆ ಇಲ್ಲವೇ ಆಗುತ್ತಾ ಇರುವ ಕಾಲಘಟ್ಟದ ಈ ಸಂಭ್ರಮವನ್ನು ಮುಗ್ಧತೆಯೆಂದು ಕರೆಯಬೇಕೋ, ಮೂರ್ಖತನವೆಂದು ಕರೆಯಬೇಕೋ, ಆತ್ಮದ್ರೋಹವೆಂದು ಕರೆಯಬೇಕೋ ಗೊತ್ತಾಗದಾಗಿದೆ. ಇದಕ್ಕೆಲ್ಲ ಜಾಗತೀಕರಣ, ಇಂಗ್ಲಿಷ್ ಜಾಗತಿಕ ಭಾಷೆಯಾಗಿ ಬೆಳೆಯುತ್ತಿರುವುದೇ ಕಾರಣ ಎಂದು ಹೇಳಲಾಗುತ್ತಿದೆ. ಇದಕ್ಕೆ ಪುಷ್ಠಿಯಾಗಿ ಕನ್ನಡ ಮಾಧ್ಯಮ ಕಡ್ಡಾಯವು ಮೂಲಭೂತ ಹಕ್ಕುಗಳಿಗೆ ವಿರುದ್ಧವಾದುದೆಂಬ ಸರ್ವೋನ್ನತ ನ್ಯಾಯಾಲಯದ ತೀರ್ಪನ್ನು ಉಲ್ಲೇಖಿಸಲಾಗುತ್ತದೆ. ಆದರೆ ನ್ಯಾಯಾಲಯ ಮೂಲಭೂತ ಹಕ್ಕುಗಳ ಬಗ್ಗೆ ಮಾತನಾಡುತ್ತಿರುವಾಗ ಅದು ಯಾವ, ಎಂತಹ ಮನುಷ್ಯರ ಮೂಲಭೂತ ಹಕ್ಕುಗಳ ಬಗ್ಗೆ ಮಾತಾಡುತ್ತಿದೆ, ಅದೆಷ್ಟು ಅರ್ಥಹೀನವೆಂದು ಯಾರೂ ಯೋಚಿಸದವರಾಗಿದ್ದಾರೆ. ಏಕೆಂದರೆ ನಾವೆಲ್ಲ ಸಂಸ್ಕೃತಿಯು ನಾಗರಿಕ ಜೀವನದ ಆಧಾರಗಳಲ್ಲೊಂದು ಎಂಬುದನ್ನೇ ಮರೆತು ಬರೇ ಆರ್ಥಿಕ ಬದುಕಿನತ್ತ, ಅದರ ನಿರ್ದಾಕ್ಷಿಣ್ಯ ಸ್ಪರ್ಧಾತ್ಮಕತೆಯತ್ತ ನಮ್ಮ ಕಣ್ನೋಟವನ್ನು ನೆಟ್ಟ ದೇಹಜೀವಿ ಮಾತ್ರದವರಾಗಿ ಕುಬ್ಜಗೊಂಡುಬಿಟ್ಟಿದ್ದೇವೆ. ನಮ್ಮ ದೇಹ ಪ್ರಜ್ಞೆಗೆ ಆಧಾರವಾದ ಆತ್ಮಪ್ರಜ್ಞೆಯನ್ನೇ ದಮನ ಮಾಡಿ ಆತ್ಮಶ್ರೀಯಿಂದ ಚ್ಯುತರಾಗಿದ್ದೇವೆ. ನಮ್ಮ ಭಾಷೆಗೂ ನಮ್ಮ ಆತ್ಮಶ್ರೀಯ ನಿಜತ್ವವನ್ನು ನಿರ್ಧರಿಸುವ ಸಂಸ್ಕೃತಿಗೂ ಇರುವ ಸಂಬಂಧ ಕುರಿತಂತೆ ಮಹಾವಿಸ್ಮೃತಿಗೆ ನಾವು ಒಳಗಾಗಿದ್ದೇವೆ. ಇದೇ, ಒಂದು ದೇಶದ–ಮೂರು ನೂರು ವರ್ಷಗಳ ಹಿಂದೆಯೂ ಸಂಭವಿಸಿ, ಗಾಂಧಿ ದೆಸೆಯಿಂದಾಗಿ ಇತ್ತೀಚೆಗೆ ಪಾರಾದ–ಸಾರ್ವತ್ರಿಕ ಅವನತಿಯ ಆರಂಭ. ಹಾಗಾಗಿಯೇ ಭಾರತೀಯ ಸಂಸ್ಕೃತಿಯ ಬಗ್ಗೆ ಎದೆಬಡಿದುಕೊಂಡು ಕುಣಿದಾಡುವ ಜನಸಮೂಹವಾಗಲೀ, ಅದರ ಬೆಂಬಲದಲ್ಲಿ ರಾಜ್ಯಭಾರ ಮಾಡುವ ಕೇಂದ್ರ ಸರ್ಕಾರವಾಗಲೀ, ಅಥವಾ ಕನ್ನಡಕ್ಕಾಗಿ ಹೋರಾಡುವ ವೀರ ಪ್ರತಿಜ್ಞೈಯ್ಯುವ ನಮ್ಮ ಕನ್ನಡ ಹೋರಾಟಗಾರರಾಗಲೀ ಅಥವಾ ಐದೋ ಆರೋ ಕೋಟಿ ಕನ್ನಡಿಗರ ಹೆಸರಲ್ಲಿ ರಾಜ್ಯವಾಳುವ ಸರ್ಕಾರಿ ಅಧಿಪತಿಗಳಾಗಲೀ, ಸರ್ವೋನ್ನತ ನ್ಯಾಯಾಲಯದ ತೀರ್ಪನ್ನು ದೈವವಾಕ್ಯದಂತೆ ಪರಿಗಣಿಸಿ ಅದರ ದೀರ್ಘಕಾಲಿಕ ಪರಿಣಾಮಗಳಿಂದ ಕಿಂಚಿತ್ತೂ ಚಿಂತಿತರಾಗದೆ ಮೂಲಭೂತ ಹಕ್ಕುಗಳನ್ನು ಕುರಿತ ಅದರ ಸಮೀಪ ದೃಷ್ಟಿದೋಷವನ್ನು ಸರಿಪಡಿಸುವ ಯಾವುದೇ ಪ್ರಯತ್ನಕ್ಕೆ ಮುಂದಾಗದವರಾಗಿದ್ದಾರೆ. ಈ ಸಂಬಂಧವಾಗಿ ಸರ್ಕಾರದ ಮೇಲೆ ಒತ್ತಡ ಹೇರಬೇಕಾದ/ಸಲಹೆ ನೀಡಬೇಕಾದ ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಕನ್ನಡ ಸಾಹಿತ್ಯ ಪರಿಷತ್ತು ಮತ್ತು ಹಂಪಿಯ ಕನ್ನಡ ವಿಶ್ವವಿದ್ಯಾಲಯ ಮುಂತಾದ ಕನ್ನಡದ ಹೆಸರಲ್ಲಿ ಸ್ಥಾಪಿತವಾಗಿರುವ ಸಂಸ್ಥೆಗಳು ನಿರ್ಲಜ್ಜೆಯಿಂದ ಕನ್ನಡಿಗರ ಲಕ್ಷಾಂತರ ರೂಪಾಯಿಗಳ ತೆರಿಗೆ ಹಣದಲ್ಲಿ ಹಿಂಡು ಹಿಂಡಾಗಿ ಹೊರದೇಶಗಳಲ್ಲಿ ಕನ್ನಡದ ಜಯಭೇರಿ ಬಾರಿಸಲು ತಂಡಗಳನ್ನು ಕರೆದೊಯ್ಯುತ್ತಿವೆ. ಜನವರಿಯಲ್ಲಿ ಧಾರವಾಡದಲ್ಲಿ ಕೋಟ್ಯಾಂತರ ರೂಪಾಯಿಗಳ ವೆಚ್ಚದಲ್ಲಿ ಕನ್ನಡಮ್ಮನ 'ಪೂಜೆ' ನಡೆಯಲಿದೆ!

ನಾಡು ಹೀಗೆ ನಿರ್ಲಜ್ಜವಾಗುತ್ತಾ ಹೋದಂತೆ ನುಡಿಯ ಅವನತಿ ಸಹಜವೇ. ಆದರೆ ಸಮಾಜದ ಪ್ರಾಜ್ಞರು ಹೇಳಬೇಕಾದ್ದನ್ನು ತಮ್ಮ ಕರ್ತವ್ಯವೆಂದು ಹೇಳುತ್ತಲೇ ಇದ್ದಾರೆ. 'ಹೊಸ ಮನುಷ್ಯ'ನ ಹಂಬಲದ ನಮ್ಮ ಪತ್ರಿಕೆ ಅಂಥವನ್ನು ಪ್ರಕಟಿಸುವುದು ತನ್ನ ಕರ್ತವ್ಯವೆಂದು ಭಾವಿಸಿ ಪ್ರಕಟಿಸುತ್ತಲೇ ಇದೆ. ಅಂತಹ ಒಂದು ಪ್ರಯತ್ನ ಇಲ್ಲಿದೆ.–ಸಂ.

ಭಾಷಾ ನೀತಿ ಚಿಂತನೆ–೧

ಭಾರತದಲ್ಲಿನ ಇಂಗ್ಲಿಷ್ ಶಿಕ್ಷಣದ ರಾಜಕೀಯ ಸಾಮಾಜಿಕತೆ

–ಡಾ. ದಿಲೀಪ್ ಚವಾಣ್

ಭಾಷೆ ಎನ್ನುವುದು ಮೂಲಭೂತವಾಗಿ ಮತ್ತು ಬಹುಮುಖ್ಯವಾಗಿ ಒಂದು ಸಾಮಾಜಿಕ ವಿದ್ಯಮಾನ ಎಂಬುದನ್ನು ಗಮನದಲ್ಲಿಟ್ಟುಕೊಂಡು ಭಾಷಾ ಅಧ್ಯಯನವನ್ನು ಮಾಡಬೇಕು. ಭಾಷೆ ಎನ್ನುವುದು ಕೇವಲ ಮಾಹಿತಿ ಸಂವಹನ ವ್ಯವಸ್ಥೆಯಷ್ಟೇ ಅಲ್ಲದೆ ಕೆಲ ಸಾಮಾಜಿಕ ಅಗತ್ಯಗಳನ್ನು ಪೂರೈಸುವ ಸಾಧನವೂ ಆಗಿದೆ. ಭಾಷಾಶಾಸ್ತ್ರದ ಬೆಳವಣಿಗೆಯನ್ನು ನೋಡಿದರೆ, ಭಾಷಾ ನಿಯಮಗಳ ಅಮೂರ್ತ ಅಧ್ಯಯನವು ಬದಲಾವಣೆಗೊಳಗಾಗಿ ಸಾಮಾಜಿಕ ಅಂಶಗಳನ್ನು ಗಮನದಲ್ಲಿಟ್ಟುಕೊಂಡ ಭಾಷಾ ಅಧ್ಯಯನಕ್ಕೆ ಹೆಚ್ಚು ಒತ್ತುನೀಡಿರುವುದು ಕಂಡುಬರುತ್ತದೆ. ರಾಜಕೀಯವಾಗಿ ಹೇಳುವುದಾದರೆ, ಭಾಷೆ ಮತ್ತು ಭಾಷಾಶಾಸ್ತ್ರದ ನೀತಿಸಂಹಿತೆಯನ್ನು ಒಂದು ವರ್ಗದ ಮೇಲೆ ಮತ್ತೊಂದು ವರ್ಗ ಪ್ರಾಬಲ್ಯವನ್ನು ಸಾಧಿಸಲು ಬಳಸುವ ಹತಾರಗಳನ್ನಾಗಿ ಮಾಡಿಕೊಳ್ಳಬಹುದು. ಭಾಷೆ, ಸಾಮಾಜಿಕವಾಗಿ ಅನುಕೂಲಸ್ಥ ವರ್ಗಕ್ಕೆ ಇನ್ನೂ ಹೆಚ್ಚಿನ ಅಧಿಕಾರವನ್ನು ಕೊಡುತ್ತದೆ.

'ಅಧಿಪತ್ಯ'(ಹೆಜಮನಿ) ಎಂಬ ಗ್ರಾಮ್ಷಿ ಪರಿಕಲ್ಪನೆಯ ಬೆಳಕಿನಲ್ಲಿ ನಾವು ನಮ್ಮ ಅಧ್ಯಯನವನ್ನು ಮಾಡುತ್ತೇವೆ. ಇಟಲಿಯ ಮಾರ್ಕ್ಸ್‌ವಾದೀ ಚಿಂತಕರಾದ ಗ್ರಾಮ್ಷಿ, 'ಅಧಿಪತ್ಯ' ಎಂಬ ಪರಿಕಲ್ಪನೆಯನ್ನು ರೂಪಿಸಿದ್ದು, ಆಳುವ ವರ್ಗದ ಸಿದ್ಧಾಂತವನ್ನು ಆಳಿಸಿಕೊಳ್ಳುವವರು ಹೇಗೆ ಒಪ್ಪಿಕೊಳ್ಳತೊಡಗುತ್ತಾರೆ ಎಂಬುದರ ಮೇಲೆ ಬೆಳಕು ಚೆಲ್ಲಲು. ಗ್ರಾಮ್ಷಿಯ ಪ್ರಕಾರ, ಒತ್ತಾಯದಿಂದ ಮಾತ್ರವಲ್ಲ, ಸ್ವಇಚ್ಛೆಯಿಂದಲೂ ಅಡಿಯಾಳಾಗುವಂತೆ ಮಾಡುವ ಚಾಣಾಕ್ಷತೆಯ ಮೂಲಕವೂ ಆಳುವ ವರ್ಗ ಜನರ ಮೇಲಿನ ತನ್ನ ಪ್ರಾಬಲ್ಯವನ್ನು ಸಾಧಿಸುತ್ತದೆ. ಇದನ್ನು ಒತ್ತಾಯ ಮತ್ತು ಒಪ್ಪಿಗೆಯ ಮಿಶ್ರಣವಾದ ಸೈದ್ಧಾಂತಿಕ ಹೆಜಮನಿಯ ಮೂಲಕವೇ ಸಾಧಿಸುತ್ತದೆ.

ತುಳಿಯುವ' ವರ್ಗ ಉಪಯೋಗಿಸುವ ಸೈದ್ಧಾಂತಿಕ ಹತಾರಗಳಲ್ಲಿ ಭಾಷೆಯೂ ಒಂದು. ಆಳುವ/ತುಳಿಯುವ ವರ್ಗದ ಸಿದ್ಧಾಂತದ ವಾಹಕವಾಗಿಯೂ ಭಾಷೆ ಕಾರ್ಯನಿರ್ವಹಿಸುತ್ತದೆ. ಗ್ರಾಮ್ಷಿ ಪರಿಕಲ್ಪನೆಯ ಹೆಜೆಮನಿ ಮತ್ತು ಸೈದ್ಧಾಂತಿಕ ಹತಾರವಾಗಿ ಭಾಷೆಯ ಪ್ರಾಮುಖ್ಯತೆಯನ್ನು ನಿರೂಪಿಸಲು ಸಂಸ್ಕೃತ ಭಾಷೆಯ ಉದಾಹರಣೆಯನ್ನು ತೆಗೆದುಕೊಳ್ಳಬಹುದು. ಭಾರತದಂತಹ ದೊಡ್ಡ ದೇಶದಲ್ಲಿ ಭಾಷೆಗಳ ಕೊಂಡಿಯಾಗಿ ಕಾರ್ಯನಿರ್ವಹಿಸಬಲ್ಲ ಒಂದು ದೇಶಭಾಷೆಯ ಅಗತ್ಯ ಯಾವಾಗಲೂ ಇದ್ದೇ ಇತ್ತು. ಒಂದು ವಿಶಿಷ್ಟ ಕಾಲಘಟ್ಟದಲ್ಲಿ ಸಂಸ್ಕೃತವು ಈ ಪಾತ್ರವನ್ನು ನಿರ್ವಹಿಸಿತ್ತು. ಅಂಥ ಕಾಲಘಟ್ಟದಲ್ಲಿ, ಅದು ಆಳುವ ವರ್ಗದ(ವರ್ಣ ಅಥವಾ ಜಾತಿಯ) ಸಿದ್ಧಾಂತದ ವಾಹಕವಾಗಿತ್ತು. ಸ್ವರ್ಗದಲ್ಲಿ ದೇವತೆಗಳ ಭಾಷೆಯಾಗಿ, ಇಹದಲ್ಲಿ ಅವತಾರ ಪುರುಷರ ಭಾಷೆಯಾಗಿ ಸಂಸ್ಕೃತವನ್ನು ಪರಿಗಣಿಸಿದ್ದರಿಂದ, ಅದನ್ನು ಉಚ್ಚವರ್ಣಗಳಾದ ಬ್ರಾಹ್ಮಣ ಮತ್ತು ಕ್ಷತ್ರಿಯ ವರ್ಣಗಳಿಗೆ ಸೀಮಿತಗೊಳಿಸಲಾಗಿತ್ತು.

ವಸಾಹತು ಕಾಲದಲ್ಲಿ ಇಂಗ್ಲಿಷ್ ಶಿಕ್ಷಣ:

ಆಳುವ ವರ್ಗದ ಸಮಕಾಲೀನ ಅಗತ್ಯಗಳಿಗೆ ತಕ್ಕಂತೆ ಶೈಕ್ಷಣಿಕ ನೀತಿಗಳು ಹುಟ್ಟುವಂತೆಯೇ ಭಾಷಾನೀತಿಗಳೂ ಹುಟ್ಟಿಕೊಳ್ಳುತ್ತವೆ. ಗಣ್ಯವರ್ಗದ ಹಿತಾಸಕ್ತಿಗೆ ತಕ್ಕಂತೆ ಅವುಗಳನ್ನು ರೂಪಿಸಲಾಗುತ್ತದೆ. ಭಾರತದಲ್ಲಿ ಬ್ರಿಟಿಷ್ ಆಡಳಿತಗಾರರು ಭಾಷೆಗೆ ಸಂಬಂಧಿಸದ ಗುರಿಗಳನ್ನು ಸಾಧಿಸಲು ಭಾಷೆಯನ್ನು ಬಳಸಿಕೊಂಡಿದ್ದರೆನ್ನುವುದನ್ನು ವಸಾಹತುಕಾಲದ ದಾಖಲೆಗಳು ಹೇಳುತ್ತವೆ. ಭಾರತದಲ್ಲಿ ತಮ್ಮ ಅಧಿಪತ್ಯವನ್ನು ಸ್ಥಾಪಿಸಲು ಇಂಗ್ಲಿಷ್ ಭಾಷೆಯ/ಇಂಗ್ಲಿಷ್ ಶಿಕ್ಷಣದ ಹತಾರವನ್ನು ಅವರು ಬಳಸಿದ್ದಾರೆ. ಭಾಷಾಧಾರಿತ ವಸಾಹತೀಕರಣವು ಆರ್ಥಿಕ ವಸಾಹತೀಕರಣದ ಭಾಗವೇ ಆಗಿತ್ತು. ಮೆಕಾಲೆಯ ಶಿಕ್ಷಣ ನೀತಿಯು ಬಹಳ ಸ್ಪಷ್ಟವಾಗಿ ಹೇಳುವುದೇನೆಂದರೆ, ವಸಾಹತು ಪ್ರಭುತ್ವವು ತನ್ನ ಮತ್ತು ಜನರ ನಡುವೆ ಮಧ್ಯವರ್ತಿಯ ಕೆಲಸವನ್ನು ನಿರ್ವಹಿಸಬಲ್ಲ ವಿದ್ಯಾವಂತ ಮತ್ತು

ಪಾಶ್ಚಾತ್ಯೀಕರಣಗೊಂಡ ವರ್ಗವೊಂದನ್ನು ಸೃಷ್ಟಿಸಲು ಉದ್ದೇಶಿತ್ತು. ಇಂಗ್ಲಿಷ್ ಶಿಕ್ಷಣವು ಸಮಾಜದ ಮೇಲ್ವರ್ಗ/ಮೇಲ್ಜಾತಿಗಳಿಗೆ ಮಾತ್ರ ವೈಯಕ್ತಿಕ ಲಾಭವಾಗುವಂತಹ ಬಹುವಿಧ ಅವಕಾಶಗಳನ್ನು ನೀಡಿದ್ದರಿಂದ, ಆ ಭಾಷೆಯ ಫಲಗಳನ್ನುಣ್ಣಲು ವಿಶೇಷ ಹುಮ್ಮಸ್ಸಿನಿಂದ ಅವರು ಮುಂದೆ ಬಂದರು.

ವಸಾಹತೋತ್ತರ ಕಾಲದಲ್ಲಿ ಇಂಗ್ಲಿಷ್ ಶಿಕ್ಷಣ:

ಸ್ವತಂತ್ರಗೊಂಡ ಭಾರತವು ಒಟ್ಟಾರೆಯಾಗಿ ಶಿಕ್ಷಣದ ಗುರಿಗಳನ್ನು ಮತ್ತು ಆದ್ಯತೆಗಳನ್ನು, ನಿರ್ದಿಷ್ಟವಾಗಿ ಇಂಗ್ಲಿಷ್ ಶಿಕ್ಷಣವನ್ನು ಮರುವ್ಯಾಖ್ಯಾನಿಸಿಕೊಳ್ಳಬೇಕಾಗಿತ್ತು. ಆದರೂ ವಸಾಹತೋತ್ತರ ಭಾರತದ ಇಂಗ್ಲಿಷ್ ಶಿಕ್ಷಣವು ವಸಾಹತುಕಾಲದ ಶೈಕ್ಷಣಿಕ ಅನುಭವದ ಮುಂದುವರಿಕೆ ಮಾತ್ರವೇ ಆಗಿರುವುದು ನಿಜ.

ಸ್ವಾತಂತ್ರ್ಯಾನಂತರ, ಸ್ಥಳೀಯ ಮೇಲ್ಜಾತಿ–ಮೇಲ್ವರ್ಗಗಳು ಕೇಂದ್ರದ ಅಧಿಕಾರ ಸ್ಥಾನಗಳ ಕೀಲಿಕೈಗಳ ಮೇಲಿನ ತಮ್ಮ ಹಿಡಿತವನ್ನು ಬಿಗಿಗೊಳಿಸಿಕೊಂಡವು. ಈ ಗುಂಪು, ರಾಜಕೀಯದ ಉನ್ನತಮಟ್ಟದ ಅಧಿಕಾರವನ್ನು, ಆಡಳಿತ, ಸಶಸ್ತ್ರ ಪಡೆ, ಕಾರ್ಪೊರೇಟ್ ವ್ಯವಹಾರ ಮತ್ತು ವೃತ್ತಿಗಳನ್ನು ನಿಯಂತ್ರಿಸುತ್ತದೆ. ಆದ್ದರಿಂದ ಅದು ಇಂಗ್ಲಿಷನ್ನು ಬಹುಮುಖ್ಯ ಶಿಕ್ಷಣ ಮಾಧ್ಯಮವನ್ನಾಗಿ ಹೊಂದಿದ್ದ ಬ್ರಿಟಿಷ್ ಶಿಕ್ಷಣ ನೀತಿಯನ್ನೇ ಮುಂದುವರೆಸಿತು. ಇಡೀ ದೇಶದ ಮೇಲೆ ಪ್ರಾಬಲ್ಯವನ್ನು ಮೆರೆಯಲು, ಸಾಮಾನ್ಯವಾಗಿ ಶಿಕ್ಷಣ ಮತ್ತು ನಿರ್ದಿಷ್ಟವಾಗಿ ಇಂಗ್ಲಿಷ್ ಶಿಕ್ಷಣವು ಈ ಗಣ್ಯವರ್ಗದ ಕೈಗೆ ಸಿಕ್ಕ ಉಪಯುಕ್ತ ಸಾಧನವಾಯಿತು.

ವಸಾಹತೋತ್ತರ ಶಿಕ್ಷಣ ನೀತಿಯು, ಈಗಾಗಲೇ ಹಲವು ರೀತಿಯಲ್ಲಿ ಶ್ರೇಣೀಕೃತಗೊಂಡಿದ್ದ ಭಾರತದಲ್ಲಿ ಇಬ್ಬಗೆಯ ಶಿಕ್ಷಣ ವ್ಯವಸ್ಥೆಗೆ ನಾಂದಿ ಹಾಡಿತು. ಮೇಲ್ಜಾತಿಯ ಶ್ರೀಮಂತರ ಮಕ್ಕಳಿಗೆ ದುಬಾರಿಯಾದ ಖಾಸಗೀ ಇಂಗ್ಲಿಷ್ ಮಾಧ್ಯಮ ಶಾಲೆಗಳಿದ್ದವು. ಜೊತೆಗೆ ಅಂಥ ಶಾಲೆಗಳಲ್ಲಿ ವಿದ್ಯಾಭ್ಯಾಸ ಮುಗಿದ ನಂತರ ಸುಲಭವಾಗಿ ದೇಶದಲ್ಲಿ ಲಭ್ಯವಿರುವ ಆರಾಮದಾಯಕ, ಲಾಭದಾಯಕ/ಆಕರ್ಷಕ ಉದ್ಯೋಗಗಳನ್ನು ಪಡೆಯುತ್ತಿದ್ದರು. ಅಷ್ಟೇನೂ ಶ್ರೀಮಂತರಲ್ಲದ ಕೆಳಜಾತಿ ಜನರು ಆರ್ಥಿಕವಾಗಿ ಸ್ವಲ್ಪ ಮೇಲಕ್ಕೇರುತ್ತಿದ್ದಂತೆ ಅವರೂ ಕೂಡ ತಂತಮ್ಮ ಮಕ್ಕಳನ್ನು ಈ ಇಂಗ್ಲಿಷ್ ಮಾಧ್ಯಮ ಶಾಲೆಗಳಿಗೆ ಕಳಿಸತೊಡಗಿದರು. ಅದಕ್ಕಾಗಿ ದೊಡ್ಡ ಮೊತ್ತವನ್ನು ಮೀಸಲಿಡಲು ಸಿದ್ಧರಾಗಿದ್ದರು. ಈ ಜಾತಿ ಆಧಾರಿತ ಶಿಕ್ಷಣ ನೀತಿಗಳ ಪರಿಣಾಮವಾಗಿ, ವ್ಯವಸ್ಥೆಯ ಇನ್ನೊಂದು ಮಗ್ಗುಲಲ್ಲಿ ಬಹುಸಂಖ್ಯಾತ ಬಡ ಜನತೆ ಅಶಿಕ್ಷಿತರಾಗಿಯೇ ಉಳಿದುಹೋದರು ಮತ್ತು ಅದರ ಫಲವಾಗಿ ಇಂಗ್ಲಿಷ್ ಶಿಕ್ಷಣದಿಂದಲೂ ವಂಚಿತರಾದರು.

೧೯೭೦ರ ದಶಕದಿಂದೀಚೆಗೆ ಆದ ಹಸಿರು ಕ್ರಾಂತಿ ಮತ್ತು ಪ್ರಜಾತಾಂತ್ರಿಕ ರಾಜಕಾರಣದಿಂದಾಗಿ ದೇಶದಲ್ಲಿ ಪ್ರಾದೇಶಿಕವಾಗಿ ಒಂದು ಹೊಸ ಗಣ್ಯವರ್ಗ ಸೃಷ್ಟಿಯಾಯಿತು. ಈ ವರ್ಗವು ಆಯಾ ರಾಜ್ಯಗಳಲ್ಲಿರುವ ಪ್ರಬಲ ರೈತರ ಜಾತಿಗಳಿಂದ ಹುಟ್ಟಿಕೊಂಡದ್ದು. ಅವರು ತಂತಮ್ಮ ಪ್ರದೇಶಗಳಲ್ಲಿ ಆರ್ಥಿಕವಾಗಿ ಪ್ರಬಲರಾದದ್ದಷ್ಟೇ ಅಲ್ಲದೇ ರಾಜಕೀಯವಾಗಿಯೂ ಪ್ರಭಾವಿಗಳಾದರು. ಅವರು ರಾಷ್ಟ್ರಮಟ್ಟದ ಅಧಿಕಾರ ರಚನೆಯಲ್ಲೂ ಸ್ಥಾನವನ್ನು ಪಡೆಯಲು ಈಗ ಬಹಳವಾಗಿ ಪ್ರಯತ್ನಿಸುತ್ತಿದ್ದಾರೆ.

ಕಳೆದ ಮುವ್ವತ್ತು ವರ್ಷಗಳಲ್ಲಿ, ರಾಷ್ಟ್ರಮಟ್ಟದ ಸ್ಥಾಪಿತ ಗಣ್ಯವರ್ಗವು ಈ ಪ್ರಾದೇಶಿಕ ಗಣ್ಯವರ್ಗವನ್ನು ಕ್ರಮೇಣ ತನ್ನೊಳಗೆ ಸೇರಿಸಿಕೊಳ್ಳುತ್ತಾ ಬಂದಿದೆ. ರಾಷ್ಟ್ರೀಯ ಮತ್ತು ಪ್ರಾದೇಶಿಕ ಗಣ್ಯವರ್ಗಗಳ ನಡುವಿನ ಸಂಬಂಧವು ಪೋಷಕ–ಗ್ರಾಹಕನ ರೀತಿಯದ್ದು. ಹಾಗಾಗಿ ರಾಷ್ಟ್ರೀಯ ಆದಾಯ ಮತ್ತು ನೈಸರ್ಗಿಕ ಸಂಪನ್ಮೂಲಗಳ ಪ್ರಮುಖ ಭಾಗವು ರಾಷ್ಟ್ರೀಯ ಗಣ್ಯವರ್ಗದ ಪಾಲಾಗಿ ಉಳಿದ ಸಣ್ಣ ಭಾಗವನ್ನು ಪ್ರಾದೇಶಿಕ ಗಣ್ಯವರ್ಗದ ಪಾಲಿಗೆ ಬಿಡಲಾಗುತ್ತದೆ. ಇದರ ಬಗ್ಗೆ ಪ್ರಾದೇಶಿಕ ಗಣ್ಯವರ್ಗವು ಸ್ವಲ್ಪ ಅಸಮಾಧಾನವನ್ನು ವ್ಯಕ್ತಪಡಿಸಿದರೂ ಕೂಡ, ರಾಷ್ಟ್ರೀಯ ಗಣ್ಯವರ್ಗದ ನಂತರದ ಎರಡನೇ ಸ್ತರದ ಪಾಲುದಾರರಾಗಿ ಕಾರ್ಯನಿರ್ವಹಿಸುವುದರಿಂದ ಈ ರೀತಿಯ ಸಂಬಂಧದಿಂದ ಲಾಭವೂ ಆಗಿದೆ.

ಆದರೆ ಈ ಪ್ರಾದೇಶಿಕ ಗಣ್ಯವರ್ಗ, ತಂತಮ್ಮ ಪ್ರಾದೇಶಿಕ ಭಾಷೆಗಳಲ್ಲಿರುವ ಶಿಕ್ಷಣಕ್ಕೆ ಉತ್ತೇಜನ ಕೊಟ್ಟಿಲ್ಲ. ಭಾರತೀಯ ಸಮಾಜದಲ್ಲಿ ಇಂಗ್ಲಿಷ್ ಭಾಷೆಯ ಹತಾರವನ್ನು ಉಪಯೋಗಿಸುವ ಮೂಲಕ ತನ್ನ ಅಧಿಪತ್ಯವನ್ನು ಸಾಧಿಸಿಕೊಳ್ಳುವ ರಾಷ್ಟ್ರೀಯ ಗಣ್ಯವರ್ಗದೊಂದಿಗೆ ಇವರು ಕೈಜೋಡಿಸಿದ್ದಾರೆ. ಆದ್ದರಿಂದ, ಈ ಪ್ರಾದೇಶಿಕ ಗಣ್ಯವರ್ಗದ ಹೆಚ್ಚಳದ ಹೊರತಾಗಿಯೂ ಇಂಗ್ಲಿಷ್‌ನ ಮುಂಚಿನ ಪ್ರಾಮುಖ್ಯತೆಯು ಭಾರತದಲ್ಲಿ ಮುಂದುವರಿದೇ ಇದೆ. ರಾಷ್ಟ್ರೀಯವಾಗಿರಲಿ, ಪ್ರಾದೇಶಿಕವಾಗಿರಲಿ, ಒಟ್ಟಿನಲಿ ಭಾರತೀಯ ಗಣ್ಯವರ್ಗವು ಜ್ಞಾನ ಮತ್ತು ಅಧಿಕಾರದ ನಡುವಿನ ಈ ಸಂಬಂಧವನ್ನು ಚೆನ್ನಾಗಿ ಅರ್ಥಮಾಡಿಕೊಂಡಿದೆ. ಅವರು ಪ್ರತ್ಯೇಕೀಕರಣದ ಮತ್ತು



ಸಾಂಸ್ಕೃತಿಕ ಅಧಿಪತ್ಯದ ಸಾಧನವಾಗಿ ಇಂಗ್ಲಿಷನ್ನು ಬಳಸುತ್ತಾರೆ.


ಆದ್ದರಿಂದಲೇ ಇವತ್ತು ಸಾಂಕ್ರಾಮಿಕ ರೋಗದಂತೆ ಹರಡಿರುವ, ಇಂಗ್ಲಿಷ್ ಮಾಧ್ಯಮ ಶಾಲೆಯಿಲ್ಲದ ಒಂದೇ ಒಂದು ಊರಿಲ್ಲ. ಭಾರತದಲ್ಲಿ! ಈ ಭಾಷಾ ನೀತಿಯು ಇಂಗ್ಲಿಷ್‌ಗೆ ತೆರೆದುಕೊಳ್ಳದ ಗ್ರಾಮಾಂತರ ಪ್ರದೇಶದ ಒಂದು ದೊಡ್ಡ ಯುವ ಪೀಳಿಗೆಯನ್ನು ಸೃಷ್ಟಿಸಿದೆ. ಇಂಥ ಗ್ರಾಮಾಂತರ ಪ್ರದೇಶಗಳಲ್ಲಿನ ಇಂಗ್ಲಿಷ್ ಶಿಕ್ಷಕರು ಇಂಗ್ಲಿಷ್ ಕಲಿಸಲು ಸಾಕಷ್ಟು ಸಮರ್ಥರಾಗಿಲ್ಲ. ಆದ್ದರಿಂದಲೇ ಇಷ್ಟು ವರ್ಷದ ಇಂಗ್ಲಿಷ್ ಕಲಿಕೆಯ ನಂತರವೂ ಸುಲಲಿತವಾದ ಮತ್ತು ನಿಖರವಾದ ಇಂಗ್ಲಿಷ್ ಬಳಕೆ ದೂರದ ಮಾತಾಗಿದೆ. ಇದು ಅವರ ನೈತಿಕ ಉತ್ಸಾಹದ ಮೇಲೆ ಪ್ರತಿಕೂಲ ಪರಿಣಾಮವನ್ನು ಬೀರುತ್ತದೆ. ಅವರಲ್ಲಿ ಬಹಳಷ್ಟು ಜನ ವಿದ್ಯಾರ್ಥಿಗಳು ಧೃತಿಗೆಟ್ಟು ಇಂಗ್ಲಿಷ್ ಕಲಿಕೆಯ ಪ್ರಯತ್ನವನ್ನೇ ಬಿಟ್ಟುಬಿಡುತ್ತಾರೆ. ಪ್ರತಿವರ್ಷ ಸಾವಿರಾರು ವಿದ್ಯಾರ್ಥಿಗಳು ಹಿರಿಯ ಪ್ರಾಥಮಿಕ ಮತ್ತು ಹೈಸ್ಕೂಲ್ ಹಂತದ ಪರೀಕ್ಷೆಗಳಲ್ಲಿ ನಪಾಸಾಗುತ್ತಿದ್ದಾರೆ.

ಬ್ರಿಟಿಷ್ ವಸಾಹತುಗಾರರು ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಇಂಗ್ಲಿಷ್ ಕಲಿಕೆಯನ್ನು ಕಡ್ಡಾಯ ಮಾಡುವುದರ ಮೂಲಕ ಅದಕ್ಕೆ ಬಹಳ ಪ್ರಾಮುಖ್ಯತೆಯನ್ನು ಕೊಟ್ಟರು. ಸ್ವಾತಂತ್ರ್ಯಾನಂತರವೂ ಇದೇ ನೀತಿ ಮುಂದುವರೆಯಿತು. ಪ್ರಾದೇಶಿಕ ಭಾಷೆಗಳಲ್ಲಿ ಕಲಿತ ಬಹುಸಂಖ್ಯಾತ ವಿದ್ಯಾರ್ಥಿಗಳು ಇಂಗ್ಲಿಷ್‌ನಲ್ಲಿ ಪರಿಣತಿಯನ್ನು ಪಡೆಯಲು ವಿಫಲರಾಗುತ್ತಾರೆ. ಪರಿಣಾಮವಾಗಿ, ಇಂಗ್ಲಿಷ್ ಶಿಕ್ಷಿತ ನಗರ ಮೇಲ್ವರ್ಗದವರೊಂದಿಗೆ ಸ್ಪರ್ಧಿಸಲಾಗದೇ ಹೋಗುತ್ತಾರೆ. ಹೀಗೆ ಇಂಗ್ಲಿಷ್ ಎಂಬುದು ಅವರ ಸಾಮಾಜಿಕ ಚಲನೆಗೆ ಅಡತಡೆಯಾಗುತ್ತದೆ. ಭಾರತದಲ್ಲಿ ಈ ರೀತಿಯ ಭಾಷಾನೀತಿಯು ಜಾರಿಗೆ ಬಂದಿದ್ದರಿಂದ ಉಂಟಾದ ಒಂದು ರೀತಿಯ ಅನಿವಾರ್ಯ ಪರಿಣಾಮವೇನೆಂದರೆ, ಲಕ್ಷಾಂತರ ಕೆಳ ಜಾತಿ/ವರ್ಗದ ಜನಸಮೂಹಕ್ಕೆ ಇಂಗ್ಲಿಷ್ ಕಲಿಕೆ ಎಂಬುದು ಒಂದು ಮರೀಚಿಕೆಯಾಗಿಯೇ ಉಳಿದದ್ದು.

ನ್ಯಾಯಸಮ್ಮತ ಭಾಷಾ ಶಿಕ್ಷಣದೆಡೆಗೆ:

೧. ನ್ಯಾಯಸಮ್ಮತ ಭಾಷಾ ಶಿಕ್ಷಣಕ್ಕೆ ಪೂರಕವಾಗಿ ಶಿಕ್ಷಣ ವ್ಯವಸ್ಥೆಯು ಆಮೂಲಾಗ್ರವಾಗಿ ಪುನರ್ರಚನೆಯಾಗಬೇಕಾದುದು ಅಗತ್ಯ. ನೂರು ಪ್ರತಿಶತ ಸಾಕ್ಷರತೆ ಸಾಧಿಸಲು ರಾಷ್ಟ್ರೀಯ ಶಿಕ್ಷಣ ವೆಚ್ಚವನ್ನು ಜಿಡಿಪಿಯ ಶೇಕಡಾ ೧೦ರಷ್ಟಕ್ಕೆ ಏರಿಸಬೇಕು.

೨. ವಿಚಾರವಿರುವುದು ಇಂಗ್ಲಿಷನ್ನು ನಿರ್ಮೂಲನೆ ಮಾಡಬೇಕೆಂಬುದರಲ್ಲಲ್ಲ. ಇಂಗ್ಲಿಷ್‌ಗಿದ್ದ ಈ ಮುಂಚಿನ ಪ್ರಾಮುಖ್ಯತೆಯನ್ನು ಕಡಿಮೆ ಮಾಡಬೇಕೆಂಬುದು. ಈ ಮೊದಲಿದ್ದ ಇಂಗ್ಲಿಷ್ ಪ್ರಾಧಾನ್ಯತೆಯು ನಗರಕೇಂದ್ರಿತ–ಶ್ರೀಮಂತ–ಗಣ್ಯವರ್ಗ ಮತ್ತು ಗ್ರಾಮಾಂತರ–ಬಡ–ತಳವರ್ಗದ ನಡುವೆ ದೊಡ್ಡ ಕಂದರವನ್ನು ಸೃಷ್ಟಿಸಿದೆ. ಒಂದಷ್ಟು ಜನ ಮಾತ್ರ ಇಂಗ್ಲಿಷ್ ಮಾಧ್ಯಮದಲ್ಲಿ ಶಿಕ್ಷಣ ಪಡೆಯುವ ಇಬ್ಬಗೆಯ ಶಿಕ್ಷಣ ವ್ಯವಸ್ಥೆಯನ್ನು ಮೊದಲು ಪುನರ್ನಿರ್ದೇಶಿಸುವ ಅಗತ್ಯವಿದೆ.



(ಮಹಾರಾಷ್ಟ್ರದ ನಾಂದೇಡ್‌ನಲ್ಲಿರುವ ಸ್ವಾಮಿ ರಮಾನಂದತೀರ್ಥ ವಿಶ್ವವಿದ್ಯಾನಿಲಯದಲ್ಲಿ ಇಂಗ್ಲಿಷ್ ಸಹ ಪ್ರಾಧ್ಯಾಪಕ ಮತ್ತು ಡಾ. ಅಂಬೇಡ್ಕರ್ ಅಧ್ಯಯನ ಪೀಠದ ನಿರ್ದೇಶಕರೂ ಆಗಿರುವ ಡಾ. ದಿಲೀಪ್ ಚವಾಣ್ ಭಾಷಾ ರಾಜಕಾರಣ ಕುರಿತು ವಿಶೇಷ ಅಧ್ಯಯನ ನಡೆಸಿ ಹಲವು ಕೃತಿಗಳನ್ನು ರಚಿಸಿದ್ದಾರೆ)

(ಕನ್ನಡಕ್ಕೆ : **ರೇಖಾಂಬಾ ಟಿ.ಎಲ್**

ಕೃಪೆ : **ಜನತಾ.** ಸೆಪ್ಟಂ. ೯, ೨೦೧೮)

ಭಾಷಾ ನೀತಿ ಚಿಂತನೆ-೨

ಕನ್ನಡ ಮಾಧ್ಯಮ ಶಿಕ್ಷಣ ಏಕೆ ಬೇಕು?

-ಎಚ್.ಎಸ್. ಶಿವಪ್ರಕಾಶ



ಇಂಗ್ಲಿಷ್ ಮಾಧ್ಯಮಪರಾಯಣರನ್ನು ಟೀಕಿಸುವಾಗ ಅದಕ್ಕೆ ಆಧಾರಭೂತವಾದ ಭೌತಿಕ ತಳರಚನೆಯನ್ನು ನಾವು ಮರೆತೇಬಿಡುತ್ತಿದ್ದೀವೇನೋ ಎಂದು ನನಗೆ ಅನುಮಾನ. ಇಂಗ್ಲಿಷಿನ ಜೊತೆಗೆ ತಳುಕು ಹಾಕಿಕೊಂಡಿರುವ ಹಣ, ಅಧಿಕಾರ ಮತ್ತು ಉದ್ಯೋಗಾವಕಾಶ ಕನ್ನಡಕ್ಕಿಲ್ಲದ ಕಾರಣ ಜನ ಇಂಗ್ಲಿಷಿಗೆ ದುಂಬಾಲು ಬೀಳುತ್ತಾರೆ. ಇಂದಿನ ಗೋಳೀಕರಣ ಪ್ರಕ್ರಿಯೆಗೆ ಇದು ಬೇಕು. ಆದಾಯದ ಏರಿಕೆ, ದುಬಾರಿ ವಸ್ತುಗಳ ಉಪಭೋಗ -ಇವುಗಳನ್ನೇ ಪರಮ ಮೌಲ್ಯಗಳನ್ನಾಗಿ ಸ್ವೀಕರಿಸುವವರೆಗೆ ನಾವೂ ಪರೋಕ್ಷವಾಗಿ ತಾಯಿನುಡಿಯ-ಅರ್ಥಾತ್ ಕನ್ನಡದ-ಎದುರಾಳಿಗಳಾಗಿರುತ್ತೇವೆ.

ಬಡತನದಲ್ಲಿ ಬಿದ್ದು ತಲೆಮಾರುಗಟ್ಟಲೆ ತುಳಿತ, ಹೊಡೆತ, ಒದೆತಗಳನ್ನು ತಿಂದಿರುವ ಜನವರ್ಗಗಳು ಮಾತ್ರವಲ್ಲದೆ ಅಧಿಕಾಂಶ ಲಾಭದ ಐಭೋಗಗಳಲ್ಲಿ ಎರೆಹುಳಗಳೋಪಾದಿಯಲ್ಲಿ ಹೊರಳುತ್ತಿರುವ ಸಡಗರವಿರದ, ಬರೀ ಸಿರಿಗರ ಹಿಡಿದ ಸಿರಿವಂತರು-ಈ ಎರಡೂ ವರ್ಗಗಳಿಗೆ ಗೊತ್ತಾಗದ ವಿಷಯವೊಂದಿದೆ. ಐಹಿಕ ಉಪಭೋಗಿತ್ವವನ್ನು ಪೋಷಿಸುವ ಗೋಳೀಕರಣ ಪ್ರಕ್ರಿಯೆ ಇದೆಯಲ್ಲ, ಅದು ಅದೇ ಸಮಯದಲ್ಲಿ ನಮ್ಮ ಆತ್ಮ ಸಂಪನ್ಮೂಲಗಳನ್ನು ವಿನಾಶಿಸುತ್ತದೆ.

ಗೋಳೀಕರಣದ ಮದ್ದಾನೆಯ ಕಾಲಡಿ ತೊತ್ತಳದುಳಿತದಲ್ಲಿ ಭಗ್ನವಾಗುವ ಸಾಮೂಹಿಕ ಆತ್ಮಸಂಪನ್ಮೂಲಗಳಲ್ಲಿ ಬಹುಮೌಲಿಕವಾದುದು ನಮ್ಮ ಭಾಷಾಶಕ್ತಿ. ಭಾಷಾಶಕ್ತಿಯೆಂಬುದು ನಮ್ಮ ಆಡುಮಾತು, ಕೇಳುಮಾತು, ಓದುಮಾತುಗಳಲ್ಲಿ ವ್ಯಕ್ತವಾಗುವುದಾದರೂ ಈ ಬಾಹ್ಯಕ್ರಿಯೆಗಳಿಗಿಂತ ಆಳವಾದುದು. ನಮ್ಮ ಭಾಷಿಕ ಮತ್ತು ಸಾಂಸ್ಕೃತಿಕ ವಹಿವಾಟುಗಳಿಗೆ ನಮ್ಮತನವನ್ನು ತುಂಬುವಂಥದು. ಬೇರುಸತ್ತರೆ ಹೇಗೆ ಮರ ಬಹಳ ಕಾಲ ಉಳಿಯುವುದಿಲ್ಲವೋ ಹಾಗೆ ಭಾಷಿಕ ಶಕ್ತಿ ಅಳಿದಮೇಲೆ ನಮ್ಮ ಭಾಷಿಕ ವಹಿವಾಟುಗಳು ಮೊದಮೊದಲು ತೊದತೊದಲಾಗಿ ಕೊನೆಕೊನೆಗೆ ಮರೆಯಾಗಿ ಬಲಾಢ್ಯ ಭಾಷಿಕ ಶಕ್ತಿಗೆ ನಾವು ಶರಣಾಗಿ ನಮ್ಮತನವನ್ನು ಇವರುತನದೊಂದಿಗೆ ಸಮೀಕರಿಸಿಕೊಳ್ಳುವ ಅಪರಿಹಾರ್ಯತೆ ಉಂಟಾಗುತ್ತದೆ. ಇದರಿಂದ ನಮ್ಮ ತಂತ್ರಜ್ಞಾನದ ಬಳಕೆಗೆ ಧಕ್ಕೆ ಬಾರದು. ಆದರೆ ನಮ್ಮ ಸಾಮೂಹಿಕ ಉಳಿಕೆ ಹೊರಟು ಹೋಗಿ ನಾವು ಚಿಂತನಾ ಹಾಗೂ ಭಾವಪ್ರಪಂಚಗಳಲ್ಲಿ ನಿರಾವಲಂಬಿಗಳಾಗದೆ ಪರಾವಲಂಬಿಗಳಾಗುತ್ತೇವೆ.


ಯಾಕೆಂದರೆ ಸತ್ಯವಾಗಲಿ ಸತ್ಯಗ್ರಹಣವಾಗಲಿ ಭಾಷಾಮುಕ್ತವಲ್ಲ. ವೇದೋಕ್ತಿಯಂತೆ ಸತ್ಯ ಏಕವಾದರೂ ಅದನ್ನು ಅರಿಯುವ, ಕರೆಯುವ ಬಗೆಗಳು, ಭಾಷೆಗಳು ಭಾಷಿಕ ಶಕ್ತಿಗಳು ಅನೇಕ. ಅವು ಆ ಪ್ರಕ್ರಿಯೆಯಲ್ಲಿ ಅನೇಕವಾಗಿರುವುದರಿಂದಲೇ ನಮ್ಮ ಅನುಭವ ಜಗತ್ತಿಗೆ ಏಳೆಂಟಲ ಏಳುಲಕ್ಷ ಕಾಮನಬಿಲ್ಲುಗಳ ವೈವಿಧ್ಯತೆ ಮತ್ತು ಸೌಂದರ್ಯ. ಆ ಹಲ ರಂಗುಗಳ ಕಾಮನಬಿಲ್ಲಿನ ಲೋಕದಲ್ಲಿ ಕನ್ನಡದ್ದೂ ಒಂದು ಅನನ್ಯ ರಂಗುಗಳ ಸೇರ್ಪಡೆ. ಅದೊಂದು ಮರೆಯಾದರೆ ನಷ್ಟ ನಮಗೆ ಮಾತ್ರವಲ್ಲ ಇಡೀ ಸೃಷ್ಟಿಗೆ.

ನಮ್ಮ ಹಲವು ಸಿನಿಗನ್ನಡ, ಟಿವಿಕನ್ನಡ, ವರ್ತಮಾನ ಕನ್ನಡ ಬಳಕೆಗಳನ್ನು ನೋಡಿದರೆ ಕನ್ನಡಕ್ಕೆ ಕಣ್ಣುಗುರುಂಟಾಗಿರುವುದರ ಭಯ ನಮಗಂಟುತ್ತದೆ.

ಇದು ಸಮೀಪಿಸುತ್ತಿರುವ ಸಾವಿನ ಕುರುಹು. ಇಂಗ್ಲಿಷಿನ ಪ್ರಭಾವವು ಪ್ರಭುತ್ವವೂ ಆಗುತ್ತಿರುವ ವಿಷ ಗಳಿಗೆಯಲ್ಲಿ ಕನ್ನಡ ಮಾಧ್ಯಮದ ಅನಿವಾರ್ಯತೆಯಿದೆ. ಕನ್ನಡ ಭಾಷಾಶಕ್ತಿಯನ್ನು ಉಳಿಸುವ ಬಗೆಗಳಲ್ಲಿ ಇದೇ ಪ್ರಧಾನವಾದುದು. ಇದು ನಮ್ಮ ಅಂತರಂಗ ಶಕ್ತಿಗೆ ಮೂಲ.

ಇನ್ನು ಇಂಗ್ಲಿಷನ್ನು ಬಿಟ್ಟು ನಮ್ಮ ಮಕ್ಕಳನ್ನು ಜಾಗತಿಕ ಜ್ಞಾನದಿಂದ ವಂಚಿತರನ್ನಾಗಿಸೋಣವೆ? ಬೇಡ. ಇಂಗ್ಲಿಷನ್ನೂ ಕಲಿಸೋಣ. ಜೊತೆಗೆ ಇನ್ನೊಂದು ಭಾರತೀಯ, ವಿದೇಶಿ ಭಾಷೆಗಳನ್ನೂ ಕಲಿಸೋಣ. ಕನ್ನಡದ ಜೀರ್ಣಾಗ್ನಿಯಲ್ಲಿ ಇತರ ಭಾಷೆಗಳನ್ನು ಅರಗಿಸಿಕೊಂಡು ಸಮೃದ್ಧರಾಗೋಣ.

ಆದರೆ ಇಂಗ್ಲಿಷಿನ ಜಠರದಲ್ಲಿ ಕನ್ನಡದೊಂದಿಗೆ ನಾವು, ನಮ್ಮತನ ಕರಗಿಹೋಗುವುದು ಬೇಡ.



(ಕನ್ನಡದ ಪ್ರಸಿದ್ಧ ಕವಿ, ನಾಟಕಕಾರ ಮತ್ತು ಚಿಂತಕರಾದ ಡಾ. ಎಚ್.ಎಸ್. ಶಿವಪ್ರಕಾಶ ಅವರು ದೆಹಲಿಯ ಜವಾಹರಲಾಲ್ ನೆಹರೂ ವಿಶ್ವವಿದ್ಯಾನಿಲಯದಲ್ಲಿ ಕಲಾಶಾಸ್ತ್ರವನ್ನು ಬೋಧಿಸುತ್ತಾರೆ)

ಒಂದು ನೇಗಿಲಿನ ಕಣ್ಮರೆ ಅಂದರೆ...



ಒಂದು ಮರದ ನೇಗಿಲಿನಲ್ಲಿ ಮೇಣಿ, ಹಿಡಿಕಾಯಿ, ಮಡಿಕೆ, ಕುಳ, ಜಿಗಣಿಕೊಂಡಿ, ಬುಡ್ಡಗೀಲು, ಬದಿಚಕ್ಕೆ, ಬಾಳೂ, ಈಚು, ನೊಗ, ಮಿಣಿ, ಕ್ವಾಲ್ದಿಗೆ, ಪಟಗಣ್ಣಿ, ಚಲಕಣಿ, ಉಗಳು ಮುಂತಾದ ಹದಿನೈದು ಬಿಡಿಭಾಗಗಳಿರುತ್ತವೆ. ಅಥವಾ ಇವೆಲ್ಲ ಸೇರಿ ಒಂದು ಪರಿಪೂರ್ಣ ನೇಗಿಲು ರೂಪ ತಾಳುತ್ತದೆ.

ಆರಂಬದ ಮುಖ್ಯ ಸಾಧನವಾದ ನೇಗಿಲು ಕಣ್ಮರೆಯ ಜಾಡಿನಲ್ಲಿದೆ. ಹಾಗಾಗಿ ನಮ್ಮ ಹಳ್ಳಿಗಳಲ್ಲಿ ಈ ಪದಗಳ ಬಳಕೆ ಕ್ಷೀಣವಾಗುತ್ತಿದ್ದು, ಕೆಲವೇ ವರ್ಷಗಳಲ್ಲಿ ಇವೆಲ್ಲ ಸಂಪೂರ್ಣ ಕಣ್ಮರೆಯಾಗಬಹುದು. ನಮ್ಮ ಜನ ಈ ಪದಗಳನ್ನು ಕೃಷಿ ಸಂಬಂಧಿಯಾಗಿ ಮಾತ್ರ ಬಳಸದೆ ಬದುಕಿನ ಹಲವು ಸಂದರ್ಭಗಳಲ್ಲಿ ತಮ್ಮ ಅಭಿವ್ಯಕ್ತಿಯನ್ನು ಪರಿಣಾಮಕಾರಿಯೂ, ಸುಂದರವೂ ಆಗಿಸಲು ಸನ್ನೆ-ಸಂಕೇತ-ರೂಪಕಗಳಾಗಿ ಬಳಸುತ್ತಾ ಕನ್ನಡ ಭಾಷೆಗೊಂದು ಹೊಸ ಬೆಡಗನ್ನು ನೀಡುತ್ತಿದ್ದರು. ಈಗ ಭಾಷೆ ಇದರಿಂದೆಲ್ಲ ವಂಚಿತವಾಗಿ ಉಚ್ಚಾರ ಸ್ಪಷ್ಟತೆಯಿಲ್ಲದ ಇಂಗ್ಲಿಷ್ ಪದಗಳನ್ನು ಬಳಸಿ ನಗೆಗೀಡಾಗುತ್ತಿದ್ದಾರಲ್ಲದೆ, ತಮ್ಮ ಭಾಷೆಯ ಬೆಡಗನ್ನೂ ಕಳೆದುಕೊಳ್ಳುತ್ತಿದ್ದಾರೆ. ಬದುಕು ಬದಲಾಗುವುದು ಸಹಜ. ಆದರೆ ಆ ಬದಲಾವಣೆ ನಮ್ಮ ಸಾಂಸ್ಕೃತಿಕ ಅಸ್ತಿಭಾರವನ್ನೇ ನ್ನು ಬುಡಮೇಲು ಮಾಡಬಾರದೆಂಬ ಎಚ್ಚರವೂ ನಮಗಿರಬೇಕು. ಈ ಎಚ್ಚರ ಕಾಣೆಯಾಗಿರುವುದೇ ಇಂದಿನ ನಮ್ಮೆಲ್ಲರ ಭಾಷೆಯ ಮಾತ್ರವಲ್ಲ; ಬದುಕಿನ ಸಂದಿಗ್ಧವೂ ಆಗಿದೆ.

-ಡಿಎಸ್ಸೆನ್ (ಆಕರ : ಮಲ್ಲಿಕಾರ್ಜುನ ಹೊಸಪಾಳ್ಯ)

ಚಂದಾದಾರರಾಗಬಯಸುವವರಿಗೆ

'ಹೊಸ ಮನುಷ್ಯ' ಪತ್ರಿಕೆಗೆ ಚಂದಾದಾರರಾಗಬಯಸುವವರು ಇನ್ನೂರು ರೂ. ಚಂದಾಹಣವನ್ನು ಪತ್ರಿಕೆಯ ಮುಖಪುಟದಲ್ಲಿರುವ ಸಂಪಾದಕರ ವಿಳಾಸಕ್ಕೆ ಎಂ.ಓ. ಮಾಡಬಹುದು ಅಥವಾ ಚೆಕ್ ಕಳಿಸಬಹುದು. ಬ್ಯಾಂಕ್ ಮುಖಾಂತರ ಕಳಿಸಬಯಸುವವರು ಶಿವಮೊಗ್ಗ ಎಸ್,ಬಿ.ಐ.ನ 'ಗೀತಾಕೃಪಾ' ಶಾಖೆಯಲ್ಲಿ (ifsc code : sbin 0040444)ಸಂಪಾದಕರು, ಹೊಸ ಮನುಷ್ಯ ಎಂಬ ಹೆಸರಿನಲ್ಲಿರುವ ಚಾಲ್ತಿ ಖಾತೆ ಸಂಖ್ಯೆ : 64110358330 ಇಲ್ಲಿಗೆ ವರ್ಗಾಯಿಸಿ(ನಗದು ರೂಪದಲ್ಲಿ ಮಾತ್ರ ಬೇಡ) 94492 42284 ಈ ಸಂಖ್ಯೆಗೆ ಕರೆ ಮಾಡಿ/ಸಂದೇಶ ಕಳಿಸಿ ಖಚಿತಪಡಿಸಬೇಕು-ಸಂ.

<u>ಭಾಷಾ ನೀತಿ ಚಿಂತನೆ-೩</u>

ಕನ್ನಡದಲ್ಲಿ ವಿಜ್ಞಾನದ ಬೋಧನೆ ಮತ್ತು ಕಲಿಕೆ ಅಸಾಧುವೆ? ಅವ್ಯಾವಹಾರಿಕವೇ?

–ನಾಗೇಶ ಹೆಗಡೆ


ಈ ಪ್ರಶ್ನೆಯನ್ನು ನಾನು ಕೇಳಿಕೊಂಡಿದ್ದಲ್ಲ. ಸಂಪಾದಕರು ನನಗೆ ಕೇಳಿದ ಪ್ರಶ್ನೆ ಇದು. ಇದಕ್ಕೆ ನನ್ನ ಒಂದೇ ವಾಕ್ಯದ ಉತ್ತರ ಏನೆಂದರೆ, ನಮ್ಮಲ್ಲಿ ವಿಜ್ಞಾನ ಬೋಧನೆಯೇ ಸರಿ ಇಲ್ಲ. ಇಂಗ್ಲೀಷ್‌ನಲ್ಲೂ ಸರಿ ಇಲ್ಲ; ರಾಷ್ಟ್ರದ ಯಾವ ಭಾಷೆಯಲ್ಲೂ ಸರಿ ಇಲ್ಲ!

ಇದನ್ನು ಹೇಳಲು ನನಗಿರುವ ಏಕೈಕ ಅರ್ಹತೆ ಏನೆಂದರೆ ನಾನು ಆಗೊಮ್ಮೆ ಈಗೊಮ್ಮೆ ವಿದ್ಯಾರ್ಥಿಗಳ ಜೊತೆ ಚರ್ಚಿಸುತ್ತೇನೆ, ಪ್ರಶ್ನಿಸುತ್ತೇನೆ. ಉದಾಹರಣೆಗೆ 'ನೀರಿನ ಮೂರು ರೂಪಗಳು ಯಾವವು?' ಎಂದು ೯ನೇ ಕ್ಲಾಸಿನ ವಿಜ್ಞಾನ ವಿದ್ಯಾರ್ಥಿಗಳನ್ನು ಕೇಳಿದಾಗ ಅನೇಕರು ಕೈ ಎತ್ತುತ್ತಾರೆ. 'ನಿನಗೆ ಕೈ ಎತ್ತಲು ಶಕ್ತಿ ಎಲ್ಲಿಂದ ಬಂತು?' ಎಂದು ಕೇಳಿದಾಗ ತಬ್ಬಿಬ್ಬಾಗುತ್ತಾರೆ. ಆಹಾರ, ಸಕ್ಕರೆ, ಪಾನೀಯ, ಧಾನ್ಯ ಹೀಗೆ ಕೆಲವು ಉತ್ತರಗಳು ಬಂದರೂ 'ನಿನ್ನ ಜೀವಕೋಶದ ಯಾವ ಅಂಗಾಂಶದಿಂದ ಬಂತು?' ಎಂದು ಕೇಳಿದರೆ ಯಾರೂ ಉತ್ತರ ಹೇಳುವುದಿಲ್ಲ. ಆದರೆ ಅವರೆಲ್ಲ ಜೀವಕೋಶದ ಒಳರಚನೆಯ ಪಾಠವನ್ನು ಎಂಟನೆಯ ಕ್ಲಾಸಿನಲ್ಲಿ ಓದಿರುತ್ತಾರೆ. ಮೈಟೊಕಾಂಡ್ರಿಯಾ ಎಂಬ ಪದ ಗೊತ್ತಿದೆ ಅವರಿಗೆ. 'ಮೈಟೊಕಾಂಡ್ರಿಯಾವನ್ನು ಜೀವಕೋಶದ ಶಕ್ತಿ ಉತ್ಪಾದನಾ ಕೇಂದ್ರ ಎಂದು ಕರೆಯುವರು' ಎಂಬ ವಾಕ್ಯವನ್ನು ಬಾಯಿಪಾಠ ಕೂಡ ಮಾಡಿರುತ್ತಾರೆ. ಆದರೆ ಅದು ಅವರ ತಲೆಯೊಳಕ್ಕೆ ಇಳಿದಿರುವುದಿಲ್ಲ. ಏಕೆಂದರೆ ಅದನ್ನು ತೀರ ಯಾಂತ್ರಿಕವಾಗಿ ಶಿಕ್ಷಕರು ಹೇಳಿರುತ್ತಾರೆ. ಅದರೊಂದಿಗಿನ ಕೆಲವು ವಿಸ್ಮಯಗಳನ್ನು ಹೇಳಬೇಕಿತ್ತು (೧. ಅದು ತುಂಬಾ ಹಿಂದೆ ಸ್ವತಂತ್ರವಾಗಿ ಜೀವಿಸುತ್ತಿತ್ತು, ಹೇಗೋ ನಮ್ಮೊಳಕ್ಕೆ ತೂರಿಕೊಂಡಿದೆ. ೨. ಅದಕ್ಕೆ ತನ್ನದೇ ಆದ ಸ್ವತಂತ್ರ ಡಿಎನ್‌ಎ ಇದೆ ೩. ಅದು ತಾಯಿಯಿಂದ ಮಾತ್ರ ಮಕ್ಕಳಿಗೆ ಬರುತ್ತದೆ ವಿನಾ ತಂದೆಯಿಂದ ಬರಲಾರದು. ೪. ಅದು ಸ್ನಾಯುಗಳಲ್ಲಿ ಮಾತ್ರ ಇರುತ್ತದೆ ವಿನಾ ರಕ್ತದಲ್ಲಿ ಇರುವುದಿಲ್ಲ). ಏಕೆ ಇಂಥ ವಿಸ್ಮಯದ, ಕೌತುಕದ ಸಂಗತಿಯನ್ನು ಮಕ್ಕಳಿಗೆ ಹೇಳುವುದಿಲ್ಲ? ಏಕೆಂದರೆ, ಪಠ್ಯದಲ್ಲಿ ಅದರ ವಿವರಣೆ ಇಲ್ಲ. ಹಾಗಾಗಿ ಶಿಕ್ಷಕರಿಗೆ ಗೊತ್ತಿಲ್ಲ. ಪಠ್ಯ ರಚಿಸಿದವರಿಗೂ ಅದು ಗೊತ್ತಿರಲಿಕ್ಕಿಲ್ಲ ಅಥವಾ ಅದು ಮಕ್ಕಳ ಆಸಕ್ತಿಯನ್ನು ಕೆರಳಿಸಬಲ್ಲ, ಹೆಚ್ಚಿನ ಓದಿಗೆ ಶಿಕ್ಷಕರನ್ನೂ ಪ್ರೇರೇಪಿಸಬಲ್ಲ ಸಂಗತಿ ಎಂಬ ಗ್ರಹಿಕೆ ಅವರಿಗೆ ಬಂದಿರಲಿಕ್ಕಿಲ್ಲ. ಶಿಕ್ಷಕರು ಇದನ್ನೆಲ್ಲ ಹೇಳುತ್ತ ಕೂತರೆ ಸಿಲೆಬಸ್ ಕವರ್ ಮಾಡಲು ಸಾಧ್ಯವಾಗದು ಎಂಬ ಮನೋಭಾವ ಎಲ್ಲೆಡೆ ಇದೆ. ಈ ಕೊನೆಯ ಮಾತು ಏನಿದೆ, ಸಿಲೆಬಸ್ ಕವರ್ ಮಾಡುವ ಧಾವಂತ –ಅದೇ ವಿಜ್ಞಾನ ಕಲಿಕೆಯನ್ನು ದುರ್ಬಲಗೊಳಿಸುತ್ತದೆ. ಮೊದಲನೆಯದಾಗಿ ಮಕ್ಕಳಲ್ಲಿ ಆಸಕ್ತಿ ಕೆರಳಿಸುವ ಸಂಗತಿಗಳನ್ನು ಹೇಳಬೇಕು. ಎರಡನೆಯದಾಗಿ ಅವರನ್ನು ಪ್ರಯೋಗಕ್ಕೆ ಅಣಿಗೊಳಿಸಬೇಕು. ಮಗುವೊಂದು ಬೆಳೆದು ವಿಜ್ಞಾನಿ ಎನಿಸಿಕೊಳ್ಳಬೇಕಿದ್ದರೆ ಪ್ರಯೋಗ ಮಾಡಬೇಕು. ಸಂಶೋಧನೆ ಮಾಡಬೇಕು. ಅದರ ಫಲಿತಾಂಶವನ್ನು ವ್ಯವಸ್ಥಿತವಾಗಿ ದಾಖಲಿಸಬೇಕು. ಅದನ್ನು ಸರಿಯಾಗಿ ಮಾಡದಿದ್ದರೆ ಯಾರೂ ವಿಜ್ಞಾನಿ ಎನ್ನಿಸಿಕೊಳ್ಳಲು ಸಾಧ್ಯವಿಲ್ಲ. ಹೆಚ್ಚೆಂದರೆ ವಿಜ್ಞಾನದ ಟೀಚರ್ ಅಥವಾ ಪ್ರೊಫೆಸರ್ ಆಗಬಹುದು.


ನನ್ನ ಗೆಳೆಯ ಸಂಜಯ ಹಾವನೂರ (ಇತಿಹಾಸ ತಜ್ಞ ಶ್ರೀನಿವಾಸ ಹಾವನೂರರ ಮಗ) ಅಮೆರಿಕದಲ್ಲಿ ನೆಲೆಸಿ, ತನ್ನ ಮಕ್ಕಳನ್ನು ಅಲ್ಲಿನ ಶಾಲೆಯಲ್ಲಿ ಓದಿಸಿ, ಭಾರತದ ವಿಜ್ಞಾನ ಕಲಿಕೆಯ ಹಳೇ ವಿಧಾನವನ್ನು ತುಂಬ ಚೆನ್ನಾಗಿ ವಿಶ್ಲೇಷಣೆ ಮಾಡಿದ್ದಾರೆ. ಅವರ ಪ್ರಕಾರ, ಈ ಐವತ್ತು ವರ್ಷಗಳಲ್ಲಿ ಭಾರತದಲ್ಲಿ ಸುಧಾರಿಸಿದ (ದುಬಾರಿ) ಶಾಲೆಗಳು ಹುಟ್ಟಿಕೊಂಡಿವೆ, ಪಾಠಗಳು ವಿಸ್ತ್ರತಗೊಂಡಿವೆ. ಆದರೆ "ಮಾಡಿ ತೋರಿಸುವ" ಚಟುವಟಿಕೆಗಳು, ಅದಕ್ಕೂ ಮುಖ್ಯವಾಗಿ ಮಕ್ಕಳಿಂದ ಅವರ ಮನೆಯಂಗಳದಲ್ಲಿಯೇ ಪ್ರಯೋಗ ಕಾಯಕಗಳನ್ನು ಮಾಡಿಸುವುದಕ್ಕೆ ಆದ್ಯತೆ ಕಾಣುತ್ತಿಲ್ಲ. ಏಕೆಂದರೆ ಸಿಲೆಬಸ್ಸನ್ನು ಬರೆಯುವವರ ಸೀಮಿತ ತಿಳುವಳಿಕೆಯಲ್ಲಿ ಯಾವ ಸುಧಾರಣೆಯೂ ಆಗಿಲ್ಲ. "ವೈಜ್ಞಾನಿಕ ಪ್ರಾಜ್ಞತೆಗೆ ಇಂಗ್ಲೀಷ್ ಮೀಡಿಯಂ ಇರುವುದು ಅತ್ಯಗತ್ಯ, ಅದೊಂದು ಇದ್ದರೆ ಬೇರೆ ಯಾವುದೂ ಬೇಕಾಗಿಲ್ಲ ಎಂಬ ಭ್ರಮೆ ಮಾತ್ರ ದಿನದಿನಕ್ಕೆ ದಟ್ಟವಾಗುತ್ತ ನಡೆದಿದೆ" ಎಂದು ಅವರು ಹೇಳುತ್ತಾರೆ.

ವಿಜ್ಞಾನಕ್ಕೆ ಭಾಷೆ ಮುಖ್ಯವಲ್ಲ, ಸಂಶೋಧನೆಗೆ ಬೇಕಾದ ಶಿಸ್ತನ್ನು ಮಗುವಾಗಿದ್ದಾಗಲೇ ರೂಢಿಸಬೇಕಾಗುತ್ತದೆ. ಮಕ್ಕಳಲ್ಲಿ ಮೊದಲು ಕುತೂಹಲವನ್ನು ಕೆರಳಿಸಲು, ಪ್ರಯೋಗದ ಖುಷಿಯನ್ನು ಅನುಭವಿಸಲು ಭಾಷೆ ತೊಡಕಾಗಬಾರದು. ಮಾತೃಭಾಷೆಯಲ್ಲೇ ವಿಜ್ಞಾನವನ್ನು ಕಲಿಯುವ ಜರ್ಮನ್ನರು ೭೩ ನೊಬೆಲ್ ಪ್ರಶಸ್ತಿ ಗಳಿಸಿದ್ದಾರೆ. ಲ್ಯಾಟಿನ್ ಗಂಧಗಾಳಿ ಇಲ್ಲದ ಜಪಾನೀಯರು ತಾಯ್ನುಡಿಯಲ್ಲೇ ವಿಜ್ಞಾನ ಕಲಿತು ೨೧ ನೊಬೆಲ್ ಪಡೆದಿದ್ದಾರೆ. ನಮ್ಮ ದೇಶಕ್ಕೆ ಒಂದೂ ಬಂದಿಲ್ಲ. ನೊಬೆಲ್‌ಗೆ ತೀರ ಸಮೀಪ ಬಂದಿದ್ದ ಸಿಎನ್‌ಆರ್ ರಾವ್ ಮತ್ತು ದಿ. ಇಸಿಜಿ ಸುದರ್ಶನ ಇಬ್ಬರೂ ತಾಯ್ನುಡಿಯಲ್ಲೇ ಓದಿ ವಿಜ್ಞಾನದ ಬಗ್ಗೆ ಆಸಕ್ತಿ ಬೆಳೆಸಿಕೊಂಡವರು. ಉನ್ನತ ಶಿಕ್ಷಣದಲ್ಲಿ ಇಂಗ್ಲಿಷ್ ಅನಿವಾರ್ಯ ಇರಬಹುದು, ಆದರೆ ಬಾಲ್ಯದಲ್ಲಿ ನೀರಿಳಿಯದ ಗಂಟಲಲ್ಲಿ ಕಡುಬು ತುರುಕಿದಂತೆ ಆಗುತ್ತಿದೆ.

ವಿಜ್ಞಾನಕ್ಕೆ ಭಾಷೆ ಮುಖ್ಯವಲ್ಲ, ಸಂಶೋಧನೆಗೆ ಬೇಕಾದ ಶಿಸ್ತನ್ನು ಮಗುವಾಗಿದ್ದಾಗಲೇ ರೂಢಿಸಬೇಕಾಗುತ್ತದೆ. ಮಕ್ಕಳಲ್ಲಿ ಮೊದಲು ಕುತೂಹಲವನ್ನು ಕೆರಳಿಸಲು, ಪ್ರಯೋಗದ ಖುಷಿಯನ್ನು ಅನುಭವಿಸಲು ಭಾಷೆ ತೊಡಕಾಗಬಾರದು. ಮಾತೃಾತೃಭಾಷೆಯಲ್ಲೇ ವಿಜ್ಞಾನವನ್ನು ಕಲಿಯುವ ಜರ್ಮನ್ನರು ೭೩ ನೊಬೆಲ್ ಪ್ರಶಸ್ತಿ ಗಳಿಸಿದ್ದಾರೆ. ಲ್ಯಾಟಿನ್ ಗಂಧಗಾಳಿ ಇಲ್ಲದ ಜಪಾನೀಯರು ತಾಯ್ನುಡಿಯಲ್ಲೇ ವಿಜ್ಞಾನ ಕಲಿತು ೨೧ ನೊಬೆಲ್ ಪಡೆದಿದ್ದಾರೆ. ನಮ್ಮ ದೇಶಕ್ಕೆ ಒಂದೂ ಬಂದಿಲ್ಲ. ನೊಬೆಲ್‌ಗೆ ತೀರ ಸಮೀಪ ಬಂದಿದ್ದ ಸಿಎನ್‌ಆರ್ ರಾವ್ ಮತ್ತು ದಿ. ಇಸಿಜಿ ಸುದರ್ಶನ ಇಬ್ಬರೂ ತಾಯ್ನುಡಿಯಲ್ಲೇ ಓದಿ ವಿಜ್ಞಾನದ ಬಗ್ಗೆ ಆಸಕ್ತಿ ಬೆಳೆಸಿಕೊಂಡವರು. ಉನ್ನತ ಶಿಕ್ಷಣದಲ್ಲಿ ಇಂಗ್ಲಿಷ್ ಅನಿವಾರ್ಯ ಇರಬಹುದು, ಆದರೆ ಬಾಲ್ಯದಲ್ಲಿ ನೀರಿಳಿಯದ ಗಂಟಲಲ್ಲಿ ಕಡುಬು ತುರುಕಿದಂತೆ ಆಗುತ್ತಿದೆ.



ಸಿಎನ್‌ಆರ್ ರಾವ್




ಇಸಿಜಿ ಸುದರ್ಶನ್

ವಿಜ್ಞಾನ ಶಿಕ್ಷಕರಿಗೆ ಉಪನ್ಯಾಸ ಕೊಡುವ ಅವಕಾಶ ನನಗೆ ಅನೇಕ ಬಾರಿ ಬಂದಿತ್ತು. 'ಮಳೆ ಅಳೆಯುವ ವಿಧಾನವನ್ನು ಶಾಲೆಯ/ಮನೆಯ ಅಂಗಳದಲ್ಲೇ ಎಂದಾದರೂ ತೋರಿಸಿದ್ದೀರಾ?' ಎಂದು ಕೇಳಿದಾಗಲೆಲ್ಲ ಸಭೆಯಲ್ಲಿ ಗಾಢ ಮೌನ ಆವರಿಸುತ್ತದೆ. ಮಳೆ ಅಳೆಯುವ ವಿಧಾನವನ್ನು ಕ್ಲಿಷ್ಟ ತಾಂತ್ರಿಕ ಸಲಕರಣೆಯ ಚಿತ್ರದ ಮೂಲಕ ಕ್ಲಾಸಿನಲ್ಲಿ ವಿವರಿಸುತ್ತಾರೆ ವಿನಾ, ಸಾದಾ ಪಾತ್ರೆ ಮತ್ತು ಅಳತೆಪಟ್ಟಿಯಲ್ಲೂ ಅದನ್ನು ಅಳೆಯಬಹುದು ಎಂಬ ವಿಚಾರವೇ ಅನೇಕರಿಗೆ ಹೊಳೆದಿರುವುದಿಲ್ಲ.

ಈಚೆಗೆ ಚಾಮರಾಜನಗರದ ದೀನಬಂಧು ಶಾಲೆಯ ವಿಜ್ಞಾನ ಪ್ರಯೋಗಾಲಯವನ್ನು ನೋಡುವ ಅವಕಾಶ ಲಭಿಸಿತ್ತು. ಲ್ಯಾಬಿನ ಬಾಗಿಲು ತೆರೆಯುತ್ತಲೇ ರಂಗೋಲಿ ಹಾಕಿದಂತೆ, ಕೋನಮಾಪಕದ ಚಿತ್ರವನ್ನು ಹೊಸ್ತಿಲ ಬಳಿ ಬರೆಯಲಾಗಿತ್ತು. ಬಾಗಿಲು ಎಷ್ಟು ಡಿಗ್ರಿ ತೆರೆದುಕೊಂಡಿದೆ ಎಂಬುದನ್ನು ಅದು ಅಲ್ಲೇ ತೋರಿಸುತ್ತಿತ್ತು.

'ರಂಗೋಲಿ' ಎಂಬ ಪದವನ್ನು ಹಿಂದಿನ ವಾಕ್ಯದಲ್ಲಿ ಬಳಸಿದೆ. ಇಂಗ್ಲಿಷ್ ಮಾಧ್ಯಮದಲ್ಲಿ ಓದುವ ಹಳ್ಳಿಯ ಮಕ್ಕಳ ಪಾಲಿಗೆ ರಂಗೋಲಿ ಇಲ್ಲ. ಚಾಪೆ ಇಲ್ಲ; ಚಪ್ಪರ ಇಲ್ಲ. ಒಲೆ ಇಲ್ಲ. ನೆಲ್ಲಿಕಾಯಿ, ಸುರಗಿ ಹೂವು, ಕೆಸುವಿನ ಗಡ್ಡೆ, ಇಂಬಳ, ತಾರಿಕಾಯಿ ಯಾವುದೂ ಇಲ್ಲ. ಕಾಲಡಿಗೇ ಇದ್ದರೂ ಅದನ್ನು ಗುರುತಿಲಾಗದ ಹೊಸಬಗೆಯ ಅಂಧತ್ವನ್ನು ಇಂಗ್ಲಿಷ್ ಪಠ್ಯಕ್ರಮ ಕಲಿಸುತ್ತಿದೆ. ತಾಯ್ನುಡಿಯಲ್ಲಿ ವಿಜ್ಞಾನ ಬೋಧನೆ ಇರಲಿ, ಸ್ಥಳೀಯ ಯಾವ ಜ್ಞಾನದ ಬೋಧನೆಯೂ ಅದಕ್ಕೆ ಅವ್ಯಾವಹಾರಿಕವಾಗಿಯೇ ಕಾಣುತ್ತದೆ.



(ವಿಜ್ಞಾನದಲ್ಲಿ ಉನ್ನತ ಶಿಕ್ಷಣ ಪಡೆದಿರುವ ನಾಗೇಶ ಹೆಗಡೆಯುವರು ಕನ್ನಡದಲ್ಲಿ ವಿಜ್ಞಾನ ವಿಷಯಗಳನ್ನು ಬರೆಯುವ ಹಿರಿಯ ಲೇಖಕರು ಮತ್ತು ಖ್ಯಾತ ವಿಜ್ಞಾನ ಅಂಕಣಕಾರರು)

ಯುವ ಲಹರಿ

ನಮ್ಮ ಕಾಲೇಜು ಶಿಕ್ಷಣದ ವಿರೋಧಾಭಾಸಗಳು

–ಕೆ. ಅರವಿಂದ ಮಿತ್ರ

ಕಾಲೇಜೊಂದರ ವಾರ್ಷಿಕೋತ್ಸವದಲ್ಲಿ ಅತಿಥಿಗಳೊಬ್ಬರ ಹಿತನುಡಿ: "ವಿದ್ಯಾರ್ಥಿಗಳೇ, ಕಾಲೇಜು ನಿಮ್ಮ ಜೀವನದ ಬಹುಮುಖ್ಯ ಘಟ್ಟ. ಈ ಮೂರು ನಾಲ್ಕು ವರ್ಷಗಳಲ್ಲಿ ನೀವು ಚೆನ್ನಾಗಿ ಓದಿದರೆ, ಒಳ್ಳೆಯ ಉದ್ಯೋಗ ಪಡೆದು ಸಮಾಜದಲ್ಲಿ ಗೌರವಯುತ ಸ್ಥಾನವನ್ನು ಪಡೆಯಬಹುದು..." ಇದಕ್ಕೆ ಪ್ರತಿಯಾಗಿ ವಿದ್ಯಾರ್ಥಿಗಳ ಗುಸುಗುಸು: "ಏಯ್ ಎಷ್ಟೊತ್ತು ಕುಯ್ತಾನೋ? ನಮಗೆ ಇರೋ ಮೇಷ್ಟ್ರುಗಳೆಲ್ಲಾ ಪಾರ್ಟ್ಟೈಂನೋರು, ಮಂತ್ಲೀ ಹನ್ನೆರೆಡು ಇಲ್ಲಾ ಹದಿನೈದು ಸಾವಿರ ಅಷ್ಟೇ! ಇಷ್ಟು ಸ್ಯಾಲರೀ ತಗೊಳ್ಳೋಕೆ ಡಬ್ಬಲ್ ಡಿಗ್ರಿ ಪಿಎಚ್ಡಿ ಎಲ್ಲಾ ಯಾಕ್ ಮಾಡಬೇಕು? ಮಿಕ್ಕಿದ ಕೆಲಸಕ್ಕೆಲ್ಲಾ ಲಂಚ ಕೊಡಬೇಕು ಯಾವುದಾದ್ರು ಮಾಲ್ ಸೇರ್ಕ್ಕೊಂಡ್ರೆ ಅದಕ್ಕಿಂತ ಜಾಸ್ತಿ ಸಿಗುತ್ತೆ..."

ಈ ಮಾತುಗಳು ದೇಶದ ಉನ್ನತ ಶಿಕ್ಷಣ ವ್ಯವಸ್ಥೆಗೆ ಹಿಡಿದ ಕೈಗನ್ನಡಿಯಾಗಿದೆ ಎಂದರೆ ಅತಿಶಯೋಕ್ತಿಯಲ್ಲ. ಸರಿ ಸುಮಾರು ೧೨,೦೦೦ಕ್ಕಿಂತ ಹೆಚ್ಚು ಕಾಲೇಜುಗಳು, ಸಹಸ್ರ ವಿಶ್ವವಿದ್ಯಾನಿಲಯಗಳು ಹಾಗು ಖಾಸಗಿ ವಿಶ್ವವಿದ್ಯಾನಿಲಯಗಳೂ ಇವೆ. ಈ ಎಲ್ಲಾ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳನ್ನು ಹಾಗು ಶಿಕ್ಷಕರನ್ನು ಬೆಸೆಯುವ ತಂತು ನೋಟ್ಸ್ ಮಾತ್ರ! ಇಬ್ಬರ ಮಧ್ಯೆ ಅನೇಕ ಭಿನ್ನಾಭಿಪ್ರಾಯಗಳಿದ್ದು, ಸಮನ್ವಯವೇ ಇಲ್ಲದಂತಾಗಿದೆ.

ಈ ಅಂತರಕ್ಕೆ ಕಾರಣಗಳು ಹಲವು. ಸಹಸ್ರ ವರ್ಷಗಳ ಕಾಲ ಅನೇಕ ಸಮುದಾಯಗಳು ವಿದ್ಯೆಯಿಂದ ವಂಚಿತರಾಗಿದ್ದವು. ವಸಹಾತುಶಾಹಿಯ ನಂತರದ ಶಿಕ್ಷಣ ವ್ಯವಸ್ಥೆಯು ಇಲ್ಲಿನ ಪರಿಸ್ಥಿತಿಗೆ ತಕ್ಕಂತೆ ಪಠ್ಯವನ್ನು ರಚಿಸಿದಂತೆ ಕಾಣುವುದಿಲ್ಲ. ಇನ್ನು ವಿವಿಧ ಸಂಸ್ಕೃತಿಯ ಹಿನ್ನಲೆಯಿಂದ ಬರುವ ವಿದ್ಯಾರ್ಥಿಗಳು ತಮ್ಮ ನಾಡಿಗೆ ಸಂಬಂಧಪಡದ ಅನೇಕ ವಿಷಯಗಳನ್ನು ತಮಗೆ ಅರಿವೇ ಇರದ ಭಾಷೆಯಲ್ಲಿ ಕಲಿಯಬೇಕಾದ ವಿರೋಧಾಭಾಸದ ಪರಿಸ್ಥಿತಿ!. ಇಂಗ್ಲೀಷ್ ಸಾಹಿತ್ಯ ಬೋಧಿಸುವ ನನಗೆ ಈ ಗೊಂದಲ ನಿತ್ಯ ಸಂಗಾತಿಯಾಗಿದೆ. ಇಂಗ್ಲೆಂಡ್, ಐರ್‌ಲ್ಯಾಂಡ್ ಹಾಗು ಐರೋಪ್ಯ ದೇಶಗಳ ಸಾಂಸ್ಕೃತಿಕ ಪರಿಸರಗಳನ್ನು ಅರಿಯದೇ ಅಲ್ಲಿ ಸೃಜಿಸಲಾದ ಪಠ್ಯಗಳನ್ನು ಅರ್ಥೈಸುವುದಾದರೂ ಹೇಗೆ? ಹಾಗೆಯೇ, ಈ ಪಠ್ಯಗಳನ್ನು ಓದಿ ಪಡೆಯಬಹುದಾದ ಜ್ಞಾನದ ಅಗತ್ಯವಾದರೂ ಎಷ್ಟು ಎಂಬ ಹಲವು ಪ್ರಶ್ನೆಗಳಿಗೆ ಉತ್ತರವೇ ಸಿಗುವುದಿಲ್ಲ. ಅನೇಕ ವಿದ್ಯಾರ್ಥಿಗಳು ಪಠ್ಯ ಕಲಿಯುವುದಿರಲಿ, ಇಂಗ್ಲೀಷ್ ಕಲಿಯುವುದರಲ್ಲೇ ತಮ್ಮ ವಿದ್ಯಾರ್ಥಿ ಜೀವನವನ್ನು ಕಳೆಯುತ್ತಾರೆ.


ಆಡಳಿತ ಮಂಡಳಿ ಹಾಗು ಒಂದು ಸಂಸ್ಥೆಯ ಆರ್ಥಿಕ ಮತ್ತು ರಾಜಕೀಯ ಶಕ್ತಿಯ ಮೇಲೆ ಕಾಲೇಜಿನ ಅಸ್ತಿತ್ವ ಅವಲಂಬಿತವಾಗಿರುತ್ತದೆ. ಮಠಮಾನ್ಯಗಳು ನಡೆಸುವ ಅನೇಕ ಕಾಲೇಜುಗಳು ಹಾಗು ಡೀಮ್ಡ್ ವಿವಿಗಳು ಸರ್ಕಾರದಿಂದ ಸರ್ಕಾರಿ ಕಾಲೇಜುಗಳಿಗಿಂತ ಹೆಚ್ಚು ಸೌಲಭ್ಯವನ್ನು ಪಡೆಯುತ್ತವೆ! ಇಲ್ಲಿನ ಎಲ್ಲಾ ಆಡಳಿತ ವಿಷಯಗಳಲ್ಲಿ ಮಠಗಳು ನಂಬಿರುವ ತತ್ವ ಮತ್ತು ಜಾತಿಗಳ ವಾಸನೆ ಹೊಡೆಯುತ್ತಿರುತ್ತವೆ. ಷಹರಗಳಲ್ಲಿ ಇರುವ ಕಾಲೇಜುಗಳ ಸ್ಥಿತಿ ಉತ್ತಮ ಎನ್ನಬಹುದಾದರೂ, ಹೋಬಳಿಗಳಲ್ಲಿನ ಕಾಲೇಜುಗಳಲ್ಲಿ ಹಣದ ಕೊರತೆಯ ಸಮಸ್ಯೆ ಒಂದೆಡೆಯಾದರೆ, ಅಲ್ಲಿನ ವಿದ್ಯಾರ್ಥಿಗಳ ಹಾಜರಾತಿ ಅವರು ಮಾಡುವ ಬೇರೆ ಬೇರೆ ಕೆಲಸಗಳ ಮೇಲೆ ನಿರ್ಧಾರಿತವಾಗಿರುತ್ತದೆ. ಒಟ್ಟಾರೆಯಾಗಿ, ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳ ಫಲಿತಾಂಶ ಆಶಾದಾಯಕವಾಗಿದ್ದರೂ, ಅದರ ಆಧಾರದ ಮೇಲೆ ಅವರ ಕಲಿಕಯನ್ನು ನಿರ್ಧರಿಸಲಾಗದು ಎಂದು ಹೇಳಬಹುದು.

ಭಾರತೀಯ ಶಿಕ್ಷಣ ವ್ಯವಸ್ಥೆಗೂ ಉದ್ಯೋಗ ಕ್ಷೇತ್ರಕ್ಕೂ ನೇರ ಸಂಬಂಧವಿಲ್ಲವೆಂಬುದು ಈಗಿನ ನಿರುದ್ಯೋಗ ಸಮಸ್ಯೆಗಳೇ ಸಾರಿ ಹೇಳುತ್ತಿವೆ. ತಾಂತ್ರಿಕ ಕ್ಷೇತ್ರಕ್ಕೆ ಸಂಬಂಧಿಸಿದ ಕೋರ್ಸ್‌ಗಳಿಗಿಂತ ಭಿನ್ನವಾದ ರೀತಿಯಲ್ಲಿ ಬಹುರಾಷ್ಟ್ರೀಯ ಕಂಪನಿಗಳ ಕೆಲಸಗಳಿದ್ದರೆ, ಮಾನವಿಕ ಹಾಗು ಸಾಮಾಜಿಕ ವಿಷಯಗಳನ್ನು ಓದಿದವರಿಗೆ ಮಾಸ್ತರಿಕೆ ಬಿಟ್ಟರೆ ಬೇರೆ ಕೆಲಸವೇ ಇಲ್ಲವೆಂಬಂತಾಗಿದೆ. ಸರ್ಕಾರದ ಹಲವು ನೇಮಕಾತಿಗಳಿಗೆ ಲಂಚವೆಂಬ ಪಿಡುಗು ಹರಡಿದ್ದು, ಸಾಮಾನ್ಯ ಸ್ಥಿತಿಯ ಪ್ರತಿಭಾವಂತರಿಗೆ ಕೆಲಸ ಸಿಗುವುದು ದುಸ್ತರವೇ ಆಗಿದೆ. ಮೀಸಲಾತಿ ಹಂಚಿಕೆಯಲ್ಲಿ ಅನೇಕ ಗೊಂದಲಗಳಿದ್ದು, ಕೋರ್ಟ್ ಕಲಾಪಗಳಿಂದ ಅನೇಕ ಸರ್ಕಾರಿ ನೇಮಕಾತಿಗಳು ನೆನೆಗುದಿಗೆ ಬಿದ್ದಿವೆ. ಇವುಗಳು ವಿದ್ಯಾರ್ಥಿಗಳ ಸಮಸ್ಯೆಗಳಾದರೆ, ಶಿಕ್ಷಕರ ಅಥವಾ (ಅ)ಸಹಾಯಕ ಪ್ರಾಧ್ಯಾಪಕರಿಗೆ ಇರುವ ಸವಾಲುಗಳು ಹಲವು.

ಯಾವುದೇ ನೇಮಕಾತಿಗಳಿಲ್ಲದೆ ಅಲ್ಪ ಸಂಬಳಕ್ಕೆ ಕೆಲಸ ಮಾಡುವ ಗೋಳು ಹಲವು ಅತಿಥಿ ಉಪನ್ಯಾಸಕರದಾದರೆ, ವೇತನ ಆಯೋಗದ ಶಿಫಾರಸ್ಸಿನಂತೆ ಹೆಚ್ಚು ಸಂಬಳ ಪಡೆಯುವ ಖಾಯಂ ನೌಕರರದು ಹಣ ದ್ವಿಗುಣ, ತ್ರಿಗುಣಗೊಳಿಸುವ ಚಿಂತೆ. ವಿಶ್ವವಿದ್ಯಾನಿಲಯಗಳಲ್ಲಿ ಪ್ರಾಧ್ಯಾಪಕರುಗಳ ಅಹಂ, ಪ್ರಚಾರ ಪ್ರತಿಷ್ಠೆ ಮತ್ತು ಒಳಜಗಳಗಳು ಮಾಧ್ಯಮಗಳಿಗೆ ಆಹಾರವಾಗಿದೆಯಷ್ಟೇ. ಧನ ಸಹಾಯ ಆಯೋಗವು ಪ್ರಾಧ್ಯಾಪಕರ ಆಯ್ಕೆಗೆ ಅನೇಕ ಮಾನದಂಡಗಳನ್ನು ರಚಿಸುತ್ತಿದ್ದು ಕಾಲಕಾಲಕ್ಕೆ (ಸರ್ಕಾರ ಬದಲಾದಂತೆ) ಅವುಗಳನ್ನು ಬದಲಿಸುತ್ತಿರುತ್ತದೆ. ರಾಷ್ಟ್ರ ಹಾಗು ರಾಜ್ಯ ಅರ್ಹತಾ ಪರೀಕೆಗಳನ್ನು ಪಾಸು ಮಾಡುವುದು, ನಿಯತಕಾಲಿಕೆಗಳಲ್ಲಿ ಸಂಶೋಧನಾ ಲೇಖನಗಳನ್ನು ಪ್ರಕಟಿಸುವುದು, ಕಮ್ಮಟಗಳನ್ನು ಆಯೋಜಿಸಿ, ಭಾಗವಹಿಸುವುದು ಹೀಗೆ ಅನೇಕ ಮಾನದಂಡಗಳನ್ನು ಆಯೋಗವು ಪ್ರಾಧ್ಯಾಪಕರನ್ನು ಆಯ್ಕೆ ಮಾಡಲು ರಚಿಸಿದೆಯಾದರೂ ಇವುಗಳು ಪ್ರಾಂತೀಯ ಭೇದವನ್ನು ಗುರುತಿಸಲು ಸೋಲುತ್ತವೆ. ಹಾಗೇಯೇ, ಮಾನವಿಕ ಹಾಗೂ ವಿಜ್ಞಾನ ವಿಷಯಗಳಿಗೆ ಏಕರೂಪದ ಮಾನದಂಡಗಳನ್ನು ನಿಗದಿ ಪಡಿಸಿರುವುದು ಎಷ್ಟು ಸರಿ ಎಂಬುದು ಪ್ರಶ್ನೆಯಾಗಿಯೇ ಉಳಿದಿದೆ.

ಇವೆಲ್ಲಾ ಸಮಸ್ಯೆಗಳ ಪರಿಣಾಮ ಇಂದಿನ ನಿರುದ್ಯೋಗ, ಪ್ರಾಧ್ಯಾಪಕರ ಹಾಗು ವಿದ್ಯಾರ್ಥಿಗಳ ನಡುವಿನ ಅಂತರ ಮತ್ತು ವಿದ್ಯಾರ್ಥಿಗಳಲ್ಲಿ ಉನ್ನತ ಶಿಕ್ಷಣದ ಬಗೆಗಿನ ಅಸಡ್ಡೆ. ಇವುಗಳಿಗೆ ಪರಿಹಾರ ಮಾರ್ಗೋಪಾಯಗಳನ್ನು ಕಂಡುಕೊಳ್ಳುವುದು ಭಾರತದಂತಹ ಬಹು ಸಂಸ್ಕೃತಿಯ ದೇಶದಲ್ಲಿ ದುಸ್ತರವೇ ಸರಿ.

ಕೆಲವು ಕೇಂದ್ರೀಯ ವಿಶ್ವವಿದ್ಯಾನಿಲಯಗಳು ಹೊಸ ಪಠ್ಯಕ್ರಮವನ್ನು ರಚಿಸಿದ್ದಲ್ಲದ್ದೇ, ಪರೀಕ್ಷಾ ಪದ್ಧತಿಯ ಬದಲು ಸಂಶೋಧನಾ ಪ್ರಬಂಧವನ್ನು ರಚಿಸುವ ಕ್ರಮವನ್ನು ಮೌಲ್ಯಮಾಪನಾ ಮಾನದಂಡವನ್ನಾಗಿ ಬಳಸುತ್ತಿವೆ. ಹಲವೆಡೆ ಈ ಮಾದರಿಗೆ ಮೆಚ್ಚುಗೆ ವ್ಯಕ್ತವಾಗುತ್ತಿದೆಯಾದರೂ ಕೆಲವು ಸಮಸ್ಯೆಗಳು ಈ ಮಾದರಿಯನ್ನೂ ಬಿಟ್ಟಿಲ್ಲ. ನೇಮಕಾತಿ ಮಾನದಂಡಗಳನ್ನು ವಿಷಯವಾರು ಹಾಗು ಪ್ರಾಂತ್ಯಕ್ಕೆ ಅನುಗುಣವಾಗಿ ನಿರ್ಧರಿಸುವುದು ಒಳಿತು. ಕೆಲವು ಖಾಸಗಿ ವಿಶ್ವವಿದ್ಯಾನಿಲಯಗಳು ಪ್ರಾಯೋಗಿಕವಾಗಿ ಹಲವು ಹೊಸ ಬಗೆಯ ಕೋರ್ಸ್‌ಗಳನ್ನು ಅಭ್ಯಸಿಸುತ್ತಿದ್ದರೂ, ದುಬಾರಿ ಶುಲ್ಕ ಹಾಗು ಈ ಕೋರ್ಸ್‌ಗಳಿಗೆ ಉದ್ಯೋಗ ಭದ್ರತೆ ಇಲ್ಲದ ಕಾರಣ ವಿದ್ಯಾರ್ಥಿಗಳು ಹೆಚ್ಚು ಆಕರ್ಷಿತರಾದಂತೆ ಕಾಣುವುದಿಲ್ಲ. ಇವುಗಳೊಂದಿಗೆ ಸರ್ಕಾರವು ಉನ್ನತ ಶಿಕ್ಷಣ ಇಲಾಖೆಗೆ ಹೆಚ್ಚು ಸಂಪನ್ಮೂಲ ನಿಗದಿ ಪಡಿಸುವದರೊಂದಿಗೆ, ಪಠ್ಯಕ್ರಮವನ್ನು ಆಮೂಲಾಗ್ರವಾಗಿ ಬದಲಾಯಿಸುವ ನಿಟ್ಟಿನಲ್ಲಿಯೂ ಯೋಚಿಸಬೇಕಾಗಿದೆ. ಇವೆಲ್ಲಾ ವಿಷಯಗಳನ್ನು ದಾಖಲಿಸಬೇಕಾದರೆ ನನ್ನದೇ ಅನುಭವವೊಂದು ಕಾಡುತ್ತಿದೆ. ಪ್ರಾಧ್ಯಾಪಕನಾಗಿ ಕೆಲಸ ಸಿಕ್ಕ ಹೊಸತು, ಓದಿರುವುದು ಇಂಗ್ಲೀಷ್ ಸಾಹಿತ್ಯ ಬೇರೆ. ಭಿನ್ನ ರೀತಿಯಲ್ಲಿ ಪಾಠ ಮಾಡಿ ಎಲ್ಲರಿಗೂ ಇಂಗ್ಲೀಷ್ ಕಲಿಸಲೇಬೇಕೆಂಬ ಉದ್ದೇಶದಿಂದ (ಭ್ರಮೆ?) ಹೋಬಳಿಯ ಕಾಲೇಜಿಗೆ ತೆರಳಿ ಒಂದು ಗಂಟೆಯಷ್ಟು ಕಾಲ ಗೊತ್ತಿದ್ದನ್ನೆಲ್ಲಾ ವದರಿದೆ. ಹುಡುಗರು ಹೆಚ್ಚು ಸಂಖ್ಯೆಯಲ್ಲಿ ಇರಲಿಲ್ಲವಾದುದರಿಂದ, ಯಾರು ಏನು ಮಾತನಾಡಲಿಲ್ಲ. ಪಾಠದ ಅಂತ್ಯಕ್ಕೆ, ನಿಮಗೆ ಅನುಮಾನಗಳಿವೆಯೇ ಎಂದಾಗ, ಹುಡುಗಿಯೊಬ್ಬಳು, ಕೇಳಿದ್ದು : "ಸಾರ್, ನೀವು ಇಷ್ಟೊತ್ತೂರೆಗೂ ಏನು?"



(ಲೇಖಕ ಅರವಿಂದ ಮಿತ್ರ ನಾಪೋಕ್ಲುವಿನ ಸರ್ಕಾರಿ ಪ್ರ. ದ. ಕಾಲೇಜಿನಲ್ಲಿ ಇಂಗ್ಲಿಷ್ ಸಹಾಯಕ ಪ್ರಾಧ್ಯಾಪಕರೂ ಭರವಸೆಯ ಯುವ ಸಾಹಿತ್ಯ ಚಿಂತಕರೂ ಆಗಿದ್ದಾರೆ)

ಆದಿವಾಸಿ ಸಂಸ್ಕೃತಿಯ ಕಿರು ದರ್ಶನ

ಭಾಷಾ ಸಂಸ್ಕೃತಿ ತಜ್ಞ ಪ್ರೊ. ಗಣೇಶ್ ಎನ್. ದೇವಿಯವರೊಡನೆಯ ಸಂದರ್ಶನ

(ಮೂರನೆಯ ಹಾಗೂ ಕೊನೆಯ ಭಾಗ)

ಸಂದರ್ಶಕರು: ಡಾ. ಎಸ್. ಸಿರಾಜ್ ಅಹಮದ್



"ನಾನು ಕಾರ್ಲ್ ಮಾರ್ಕ್ಸ್ ಅವರನ್ನು ಓದುವಾಗ ಗಾಂಧಿಯವರನ್ನು ಒಂದು ತಮಾಶೆ ಎಂದುಕೊಂಡಿದ್ದೆ. ದಲಿತ ಸಾಹಿತ್ಯವನ್ನು ಓದುವಾಗ ಹಾಸ್ಯಾಸ್ಪದ ವ್ಯಕ್ತಿ ಎಂದುಕೊಂಡಿದ್ದೆ. ನನ್ನನ್ನು ನಾನು ವಿದ್ವಾಂಸ ಅಂದುಕೊಳ್ಳುವಾಗ, ಅವರು ಎಲ್ಲವನ್ನೂ ಹೇಗೆ ಸರಳೀಕರಿಸಿ ನೋಡುತ್ತಾರೆ ಎಂದು ವ್ಯಂಗ್ಯವಾಡಿದ್ದೆ. ಆಧುನಿಕತೆಯ ಬಗ್ಗೆ ಚಿಂತಿಸುವಾಗ ಗಾಂಧಿಯವರು ಹೇಗೆ ಎಲ್ಲವನ್ನೂ ಖಚಿತವಾಗಿ ಗ್ರಹಿಸಬಲ್ಲರು ಅನ್ನಿಸಿತು... ಈಗ...... ಎಂಥ ಬಗೆಯ ಹೋರಾಟದ ಮೂಲಕ ಅವರು 'ಗಾಂಧಿಯಾದರು' ಎಂಬುದು ಅರಿವಾಗುತ್ತಿದೆ. ಅವರು ನಾವು ಅರಿತುಕೊಳ್ಳಲಾಗದ ಎಷ್ಟೋ ವಿಷಯಗಳ ಕುರಿತು ದೊಡ್ಡ ಬೆಳಕು ಚೆಲ್ಲಿದ್ದಾರೆ."

(ಸೆಪ್ಟಂಬರ್ ಸಂಚಿಕೆಯಿಂದ ಮುಂದುವರೆದುದು)

ಇನ್ನು ನೀವು ಬುಡಕಟ್ಟು/ಆದಿವಾಸಿ ಸಮುದಾಯಗಳ ನಡುವೆ ಮಾಡಿದ ಕೆಲಸ–ಅಧ್ಯಯನಗಳ ಹಿನ್ನೆಲೆಯಲ್ಲಿ ಮಾತಾಡುವುದಾದರೆ ಅದು ಭಾಷೆ ಮತ್ತು ಸಾಹಿತ್ಯಗಳ ಕುರಿತಾದ ಸ್ಥಾಪಿತ ನಂಬಿಕೆಗಳನ್ನು ಅಲ್ಲಾಡಿಸುವಂತಿದೆ. ಆದಿವಾಸಿ ಸಾಹಿತ್ಯ ಮತ್ತು ಭಾಷೆಗಳಲ್ಲಿರುವ ಅಪಾರ ವೈವಿಧ್ಯ, ಅದರ ಬಗ್ಗೆ ನಮಗಿರುವ ಅಜ್ಞಾನಗಳನ್ನು ನೀವು ಪ್ರಸ್ತಾಪಿಸುತ್ತ ನೀವು ಅದನ್ನು 'ಜನಪದ' ಸಾಹಿತ್ಯ ಎಂದು ಕರೆಯದೆ "ಸಾಹಿತ್ಯ" ಎನ್ನಬೇಕು– ಆದಿವಾಸಿ ಭಾಷೆಗಳನ್ನು 'ಉಪಭಾಷೆಗಳು' ಎನ್ನದೆ 'ಭಾಷೆಗಳು' ಎಂದು ಕರೆಯಬೇಕು ಎನ್ನುತ್ತೀರಿ. ಈ ಕುರಿತು ಇನ್ನಷ್ಟು ಹೇಳಿ.

ಸುಮಾರು ೧೯೨೦ರಲ್ಲಿ ವೆರಿಯರ್ ಎಲ್ವಿನ್ ಅವರು ಭಾರತಕ್ಕೆ ಬಂದು ಗಾಂಧಿಯವರ ಸೂಚನೆಯ ಮೇರೆಗೆ ಬಸ್ತರ್‌ಗೆ ಬಂದು ಅಲ್ಲಿನ ಆದಿವಾಸಿಗಳ ಜೊತೆ ಕೆಲಸ ಮಾಡಲು ತೊಡಗಿ ಅಲ್ಲಿನ ವೈವಿಧ್ಯಮಯ ಸಾಹಿತ್ಯವನ್ನು ಸಂಗ್ರಹಿಸಿದರು. ನಂತರ ಮಾನವಶಾಸ್ತ್ರಜ್ಞರು ಆದಿವಾಸಿ ಸಾಹಿತ್ಯವನ್ನು ಸಂಗ್ರಹಿಸಿದರೂ ಅದನ್ನು ಜನಪದ ಅಥವಾ ಮೌಖಿಕ ಸಾಹಿತ್ಯ ಎಂದು ಕರೆಯುವ ಪರಿಪಾಠ ಜಾರಿಯಲ್ಲಿತ್ತು. ನಾನು ಗುಜರಾತ್ ರಾಜಸ್ತಾನದ ಗರಾಸಿಯಾ ಭಿಲ್ಲರ ಜೊತೆ ಕೆಲಸ ಮಾಡಲು ಆರಂಭಿಸಿದಾಗ ಅವರಲ್ಲಿ ಅಪಾರ ಭಾಷಿಕ ಮತ್ತು ಕಾವ್ಯ ವೈವಿಧ್ಯದಿಂದ ತುಂಬಿದ, ಬಹಳ ಸಂಕೀರ್ಣ ಕಥಾನಕವುಳ್ಳ ಮಹಾಭಾರತದ ಭಿತ್ತಿಯ ನಾಲ್ಕು ಮಹಾಕಾವ್ಯಗಳಿರುವುದನ್ನು ಕಂಡೆ. ಅಲ್ಲಿ ಅರ್ಜುನನ ಬದಲಾಗಿ ವಾಸುಕಿ ನಾಯಕ. ವಾಸುಕಿಯ ಶಕ್ತಿಗೆ ಅರ್ಜುನ ಬೆದರಿಬಿಟ್ಟಿದ್ದಾನೆ. ವಾಸುಕಿಗೆ' ದ್ರೌಪದಿಯ ಜೊತೆ ಬಹಳ ರಮ್ಯವಾದ–ಉತ್ಕಟವಾದ ಕೆಳೆತನ ಇದೆ. ಮಹಾಭಾರತ ಯುದ್ಧವನ್ನು ಕೃಷ್ಣನಲ್ಲ, ಭೀಷ್ಮ ಮುನ್ನಡೆಸಿದ್ದಾನೆ. ವ್ಯಾಸರ ಬದಲಾಗಿ ಗಣೇಶ ಇದ್ದಾನೆ.... ಗರಾಸಿಯಾ ಜನಾಂಗದಲ್ಲಿ ನಾಲ್ಕು ಮಹಾಭಾರತಗಳಿದ್ದರೆ, ಬಂಜಾರರಲ್ಲಿ ಅವರದೇ ಆದ ರಾಮಾಯಣವಿದೆ. ಹಿಮಾಚಲದ ವನಗುಜ್ಜರರು ಸುಮಾರು ೬–೭ ಸಾವಿರ ಹಾಡುಗಳನ್ನು ನೆನಪಿನಿಂದ ಹಾಡಬಲ್ಲರು. ಬಂಜಾರರ ಗುಂಪಿಗೆ ಸೇರಿದ ಲೆಂಗಿಗಳಲ್ಲಿ, ನಾಯಕರಲ್ಲಿ, ಬ್ರೆಕ್ಟ್‌ನನ್ನೂ ಮೀರಿಸಬಲ್ಲ ತಂತ್ರಗಳಿರುವ ನಾಟಕಗಳಿವೆ....ಇದಲ್ಲವನ್ನು ನೋಡಿ ನಾನು ಅನಂತಮೂರ್ತಿಯವರು ಸಾಹಿತ್ಯ ಅಕಾಡೆಮಿಯಲ್ಲಿದ್ದಾಗ ಆದಿವಾಸಿಗಳ ಸಾಹಿತ್ಯವನ್ನು ಪ್ರಕಟಿಸಬೇಕೆಂಬ ಯೋಜನೆಯನ್ನು ಪ್ರಸ್ತಾಪಿಸಿದೆ. ಅದರಂತೆ ೧೮ ಸಂಪುಟಗಳಲ್ಲಿ ಆದಿವಾಸಿ ಸಾಹಿತ್ಯವನ್ನು ಸಂಪಾದಿಸಿ ಪ್ರಕಟಿಸಿದೆ... ನಂತರ ರಮಾಕಾಂತರಥರ ಕಾಲದಲ್ಲಿ ಸಾಹಿತ್ಯ ಅಕಾಡೆಮಿಯ ದಿಕ್ಕು–ಧೋರಣೆಗಳು ಬದಲಾದವು.......

ಆದಿವಾಸಿಗಳ ಕುರಿತಾದ ಕೆಲಸಕ್ಕೆ ಹೊಂದಿಕೊಂಡೇ ನೀವು ಹೇಳುವ ಅಭಿವೃದ್ಧಿಯ ಪರಿಕಲ್ಪನೆಯನ್ನು ಗಮನಿಸಿದರೆ– ಸಮುದಾಯಗಳು ತಾವು ನೆಲೆಸಿರುವ ಕಡೆಯಲ್ಲಿಯೇ ಸ್ವಯಂಪೂರ್ಣ ಬದುಕಿನ ಕ್ರಮವನ್ನು ಕಂಡುಕೊಳ್ಳಬೇಕು ಎನ್ನುತ್ತ ಸ್ವಾವಲಂಬನೆಯ ಮಾರ್ಗವನ್ನು ಎತ್ತಿಹಿಡಿಯುತ್ತೀರಿ. ಮುಖ್ಯವಾದ ಪ್ರಶ್ನೆಯೇನೆಂದರೆ, ನೀವು ಗಾಂಧಿಯವರನ್ನು ತೇಜಗಡದಲ್ಲಿ ಹೊಸದಾಗಿ ರೂಪಿಸಿಕೊಂಡಿರೋ ಅಥವಾ ಅವರು ನಿಮ್ಮ ಚಿಂತನೆ ಕೆಲಸಗಳಲ್ಲಿ ಮೊದಲಿನಿಂದ ಜೊತೆಗಿದ್ದರೋ?

ಗಾಂಧಿಯವರನ್ನು ನೀವು ಹೇಗೆ ಕಂಡುಕೊಂಡಿರಿ?

ಗಾಂಧಿಯವರನ್ನು ನಾನು ಕಂಡುಕೊಂಡದ್ದು ಸುಮಾರು 15 ಜನ ಆದಿವಾಸಿಗಳ ಜೊತೆ ಎರಡುವರ್ಷಗಳ ಕಾಲ ದೀರ್ಘವಾದ ವಿಚಾರವಿಮರ್ಶೆ–ಸಂವಾದದಲ್ಲಿ ತೊಡಗಿಕೊಂಡಿದ್ದಾಗ. ಅವರಿಗಾಗಿ ನಾನೊಂದು ಡಿಪ್ಲೋಮಾ ಕೋರ್ಸ್‌ಅನ್ನು ರೂಪಿಸಿದ್ದೆ. ಅದರ ವಿಶೇಷತೆ ಏನೆಂದರೆ–ಅಲ್ಲಿ ಅವರು ಮಾತಾಡಬೇಕು, ನಾನು ಕೇಳಿಸಿಕೊಳ್ಳಬೇಕು. ಅಲ್ಲಿ ಯಾವ ಕ್ಲಾಸ್ ರೂಮುಗಳೂ ಇರಲಿಲ್ಲ. ನಾವು ಹೊರಗೆ–ಯಾಕೆಂದರೆ ಆಗ ಅಲ್ಲಿ ವಿದ್ಯುತ್ತಿನ ಸೌಲಭ್ಯ ಇರಲಿಲ್ಲ–ಬಂಡೆಗಳ ಮೇಲೆ ಮರಗಳ ಕೆಳಗೆ ಕೂತು ಕೆಲವೊಮ್ಮೆ ರಾತ್ರಿ ೨–೩ಗಂಟೆಯವರೆಗೂ ವಿಚಾರ ವಿಮರ್ಶೆ ನಡೆಸುತ್ತಿದ್ದೆವು. ಆ ದಿನಗಳಲ್ಲಿ ನಾನು ಟ್ರೈಬಲ್ ಅಕಾಡೆಮಿಯನ್ನು ಆರಂಭಿಸಿದ್ದೆ. ಎರಡು ವರ್ಷಗಳ ಚರ್ಚೆ ಸಂವಾದದ ನಂತರ 'ನಮಗೀಗ ಆದಿವಾಸಿಗಳಿಗೆ ಏನು ಬೇಕು ಎಂದು ಗೊತ್ತಿರುವುದರಿಂದ, ಪಕ್ಕ ಇರುವ ಹಳ್ಳಿಗೆ ಹೋಗಿ ಅವರ ಜೊತೆ ನಾವು ಯಾಕೆ ಕೆಲಸ ಮಾಡಬಾರದು?' ಎಂದು ನಾನು ಹೇಳಿದೆ. ಈ ಪ್ರಸ್ತಾವ ಆದಿವಾಸಿ ಯುವಕರ ಕಡೆಯಿಂದಲೇ ಬಂದಿತ್ತು. ನಾಲ್ಕು ವರ್ಷಗಳಲ್ಲಿ ನಾವು ಮಾಡಿದ ಕೆಲಸ'ು ಲಕ್ಷಾಂತರ ಆದಿವಾಸಿಗಳನ್ನೊಳಗೊಂಡ ಇಪ್ಪತ್ತೆರಡು ಸಾವಿರ ಹಳ್ಳಿಗಳಿಗೆ ಹರಡಿತು.

ಹಾಗೆ ನೋಡಿದರೆ ಗಾಂಧಿಯವರನ್ನು ನಾನು ಕಂಡುಕೊಂಡಿದ್ದು ಬೇರೆ ಬೇರೆ ರೂಪಗಳಲ್ಲಿಯೇ. ಮೊದಲಿನಿಂದ ಅವರ ಜೊತೆಗೆ ನಾನು ಇರಲಿಲ್ಲ. ಗಾಂಧಿಯವರ ಪ್ರಾಮುಖ್ಯತೆ ನನಗೆ ಗೊತ್ತಾಗಿದ್ದು ೧೯೬೭ರಲ್ಲಿ. ನಾನು ಸಮುದಾಯಗಳ ಜೊತೆ ಕೆಲಸ ಆರಂಭಿಸಿದಾಗ. ಆಗ ನಾನು ಗಾಂಧಿಯವರ ಆತ್ಮಕಥೆಯನ್ನು ಮತ್ತೊಮ್ಮೆ ಓದಿದೆ. ಯಾಕೆಂದರೆ ಅವರು ಸಾಬರಮತಿ ಆಶ್ರಮವನ್ನು ಶುರುಮಾಡಿದ ಮೇಲೆ ಅದರ ಮ್ಯಾನೇಜರ್ ಆಗಿ ಹೇಗೆ ನಡೆಸಿದರು ಎಂಬುದನ್ನು ತಿಳಿದುಕೊಳ್ಳಬೇಕಿತ್ತು. ಅದರಿಂದ ನಾನು ಬಹಳ ಕಲಿತೆ.

ಗಾಂಧಿಯವರು ಬಹಳ ದೊಡ್ಡ ಶಿಕ್ಷಕ. ಅವರ ವ್ಯಕ್ತಿತ್ವ ಎಂಥದೆಂದರೆ ಅವರು ಜೀವನದ ಹಲವು ಸಂದರ್ಭಗಳಲ್ಲಿ ನಮಗೆ ಕಲಿಸುತ್ತಲೇ ಇರುತ್ತಾರೆ. ನನ್ನ ಕೆಲಸವನ್ನು ಹೇಗೆ ಮುನ್ನಡೆಸಬೇಕು ಎಂದು ತಿಳಿಯದ ಕಷ್ಟದ ಗಳಿಗೆಗಳಲ್ಲಿ ಅವರು ಬಹಳ ಕಲಿಸಿದ್ದಾರೆ. ಆದರೆ ಅವರ ಜೊತೆಗಿನ ನನ್ನ ಸಂಬಂಧ ಬಹಳ ಸಮಸ್ಯಾತ್ಮಕವಾದುದು. ಮಗನೊಬ್ಬ ತಂದೆಯನ್ನು ದ್ವೇಷಿಸುತ್ತಲೇ ಪ್ರೀತಿಸುವ ಬಗೆಯಲ್ಲಿ ನಾನು ಅವರನ್ನು ಅರ್ಥಮಾಡಿಕೊಂಡಿದ್ದೇನೆ... ಫ್ರಾಯ್ಡ್ ಹೇಳುವ ಹಾಗೆ ತಂದೆಯನ್ನು ದ್ವೇಷಿಸುವ ಮೂಲಕವೇ ಮಗನ ಬೆಳವಣಿಗೆ ಶುರುವಾಗುತ್ತದೆ. ಆದರೆ ನಿಜವಾದ ಪ್ರಬುದ್ಧತೆ ಬರುವುದು ದ್ವೇಷಿಸುವ ಮಗ, ಮತ್ತೆ ತಂದೆಯನ್ನು ಅರಿತು ಪ್ರೀತಿಸಲು ಶುರುಮಾಡಿದಾಗ ಅನಿಸುತ್ತದೆ. ಹಾಗಾಗಿ ನಾನು ಕಾರ್ಲ್ ಮಾರ್ಕ್ಸ್ ಅವರನ್ನು ಓದುವಾಗ ಗಾಂಧಿಯವರನ್ನು ಒಂದು ತಮಾಶೆ ಎಂದುಕೊಂಡಿದ್ದೆ. ದಲಿತ ಸಾಹಿತ್ಯವನ್ನು ಓದುವಾಗ ಹಾಸ್ಯಾಸ್ಪದ ವ್ಯಕ್ತಿ ಎಂದುಕೊಂಡಿದ್ದೆ. ನನ್ನನ್ನು ನಾನು ವಿದ್ವಾಂಸ ಅಂದುಕೊಳ್ಳುವಾಗ, ಅವರು ಎಲ್ಲವನ್ನೂ ಹೇಗೆ ಸರಳೀಕರಿಸಿ ನೋಡುತ್ತಾರೆ ಎಂದು ವ್ಯಂಗ್ಯವಾಡಿದ್ದೆ. ಆಧುನಿಕತೆಯ ಬಗ್ಗೆ ಚಿಂತಿಸುವಾಗ ಗಾಂಧಿಯವರು ಹೇಗೆ ಎಲ್ಲವನ್ನೂ ಖಚಿತವಾಗಿ ಗ್ರಹಿಸಬಲ್ಲರು

ಅನ್ನಿಸಿತು...ಈಗ...... ಎಂಥ ಬಗೆಯ ಹೋರಾಟದ ಮೂಲಕ ಅವರು 'ಗಾಂಧಿಯಾದರು' ಎಂಬುದು ಅರಿವಾಗುತ್ತಿದೆ. ಅವರು ನಾವು ಅರಿತುಕೊಳ್ಳಲಾಗದ ಎಷ್ಟೋ ವಿಷಯಗಳ ಕುರಿತು ದೊಡ್ಡ ಬೆಳಕು ಚೆಲ್ಲಿದ್ದಾರೆ.

ಮುಖ್ಯವಾಗಿ ಗಾಂಧಿಯವರು ನಮಗೆ ಭಯವಿಲ್ಲದೆ ಬದುಕುವುದನ್ನು ಕಲಿಸಿದರು. ಎರಡನೆಯದಾಗಿ ದುರಾಸೆಯಿಲ್ಲದ ಜೀವನ ಹಾಗೂ ದ್ವೇಷವಿಲ್ಲದೆ ಬದುಕುವುದನ್ನು ಕಲಿಸಿದರು. ಕೋಮು ದ್ವೇಷ, ಧರ್ಮಾಂಧತೆಯ ಕರಿನೆರಳುಗಳು ದಟ್ಟವಾಗಿ ಎಲ್ಲ ಕಡೆ ಹರಡಿರುವಾಗ ದ್ವೇಷವಿಲ್ಲದೆ ಬದುಕುವುದು ಇಂದಿನ ಬಹು ದೊಡ್ಡ ಅಗತ್ಯವಾಗಿದೆ. ಬಂಡವಾಳಶಾಹಿಗಳ ದುರಾಸೆಯ ನಡುವೆ ಸರಳ ಜೀವನ ನಡೆಸುವುದೂ ಸಹ ಅಷ್ಟೇ ದೊಡ್ಡದು. ಎಲ್ಲ ಬಗೆಯ ಪ್ರಭುತ್ವಗಳು ಪ್ರಜೆಗಳ ಪರಮವಿರೋಧಿಯಾಗಿ ಬೆಳೆಯುತ್ತಿರುವುದರಿಂದ ಇಂಥ ಪ್ರಭುತ್ವಗಳನ್ನು ಭಯವಿಲ್ಲದೆ ಪ್ರಶ್ನಿಸುವುದೂ ಸಹ ಅನಿವಾರ್ಯವಾದ ತತ್ವವಾಗಿದೆ. ಬಂಡವಾಳಶಾಹಿ, ಪ್ರಭುತ್ವ ಹಾಗೂ ಧರ್ಮಾಂಧತೆಗಳ ವಿರುದ್ಧ ತಿರುಗಿಬೀಳುವ ಬಹುದೊಡ್ಡ ತತ್ವಗಳನ್ನು ಗಾಂಧಿಯವರು ನಮಗೆ ಕಲಿಸಿಕೊಟ್ಟಿದ್ದಾರೆ. ಇಂಥ ತತ್ವಗಳು ಬೇರೆ ಬೇರೆ ದೊಡ್ಡ ಚಿಂತಕರಿಂದಲೂ ನಮ್ಮ ಕಡೆ ಹರಿದುಬಂದಿವೆ. ಆದರೆ ಈ ಮೂರು ತತ್ವಗಳು ಗಾಂಧಿಯವರಿಗೆ ಮುಖ್ಯವಾಗಿರುವಂತೆ ನಮಗೂ ಈಗ ಅಷ್ಟೇ ಮುಖ್ಯವಾಗಿವೆ. ಗಾಂಧಿಯರನ್ನು ನಾನು ಕಂಡುಕೊಳ್ಳುವುದು ಈ ಮೂರು ನೆಲೆಯಲ್ಲಿಯೇ.

ಇಲ್ಲಿಯೇ ಇನ್ನೊಂದು ಚಿಕ್ಕ ಪ್ರಶ್ನೆ. ನಿಮಗೆ ಪ್ರಸನ್ನ ಅವರ ಜೊತೆ ಮೊದಲಿನಿಂದಲೂ ಬಹಳ ಆತ್ಮೀಯವಾದ ಸಂಬಂಧವಿದೆ. ಇತ್ತೀಚೆಗೆ ನಿಮ್ಮ 'ದಕ್ಷಿಣಾಯಣ'ವೂ ಸಹ ಪ್ರಸನ್ನರ ಜೊತೆ ಕೈಜೋಡಿಸಿದೆ. ಅವರ ಗಾಂಧಿವಾದಿ ಪ್ರಯೋಗಗಳ ಕುರಿತು ಹೇಳಿ.

ಪ್ರಸನ್ನ ಅವರು ಕರ್ನಾಟಕದ ಅತ್ಯಂತ ಪ್ರತಿಭಾಶಾಲಿ ರಂಗ ನಿರ್ದೇಶಕರು. ನನಗೆ ಅವರ ಬಗ್ಗೆ ಅಪಾರ ಗೌರವವಿದೆ ಯಾಕೆಂದರೆ ಹಲವು ಬಗೆಯ ವೈಯುಕ್ತಿಕ ಏಳುಬೀಳುಗಳ ನಡುವೆಯೂ ಅವರು ಅಚಲವಾದ ಬದ್ಧತೆಯಿಂದ ಕೆಲಸ ಮಾಡುತ್ತಿದ್ದಾರೆ. ಅವರು ತಮ್ಮ 'ಚರಕ'ದ ಚಟುವಟಿಕೆಗಳನ್ನು ಯಾವುದೇ ಬಗೆಯ ಮಾರ್ಗದರ್ಶನವಿಲ್ಲದೆ, ಯಾವ ಬಗೆಯ ನಿಯಮಿತ ಸರ್ಕಾರದ ಅನುದಾನವೂ ಇಲ್ಲದೆ, ಯಾವ ರಾಜಕೀಯ ಪಕ್ಷಗಳ ಆಶ್ರಯವನ್ನೂ ಅವಲಂಬಿಸದೆ ನಿರಂತರವಾಗಿ ನಡೆಸುತ್ತ ಬಂದಿದ್ದಾರೆ. ಅವರು ಒಂದು ಪಕ್ಷಮಹಾರಾಷ್ಟ್ರದಲ್ಲಿ ಇದ್ದಿದ್ದರೆ ಅಣ್ಣಾ ಹಜಾರೆ ಅಥವಾ ಬಾಬಾ ಆಮ್ಟೆಯವರಿಗೆ ಸಿಕ್ಕ ಪ್ರಾಶಸ್ತ್ಯವ್ವೇವರಿಗೆ ದೊರಕುತ್ತಿತ್ತು. ಮೂವತ್ತು ವರ್ಷಗಳ ಹಿಂದೆ ಪರಿಚಯವಾದ ಅವರ ಬಗ್ಗೆ ನನಗೆ ಇಂದಿನವರೆಗೂ ಒಂದಿಷ್ಟೂ ಗೌರವ ಕಡಿಮೆಯಾಗಿಲ್ಲ.

ಆದಿವಾಸಿಗಳ ನಡುವೆ ನೀವು ಮಾಡಿರುವ ಕೆಲಸ ಇಂಡಿಯಾದ ಬಹುತ್ವವನ್ನು ಗಟ್ಟಿಗೊಳಿಸುವ ಪ್ರಯತ್ನವೇ ಆಗಿದೆ. ಆದರೆ ಈಚಿನ ದಿನಗಳಲ್ಲಿ ಆದಿವಾಸಿ ಸಮುದಾಯಗಳು ಕೋಮುವಾದಿ ರಾಜಕಾರಣಕ್ಕೆ ತುತ್ತಾಗಿವೆ. ಗುಜರಾತಿನ ದಂಗೆಗಳ ಸಂದರ್ಭದಲ್ಲಿ ನೀವು ಕೆಲಸ ಮಾಡಿದ ಆದಿವಾಸಿ ಪ್ರದೇಶಗಳಲ್ಲಿ ಕೋಮುದ್ವೇಷ ಚೆಲ್ಲಾಡಿದ್ದನ್ನು ನೋಡಿ ನಿಮಗೆ ಏನು ಅನ್ನಿಸಿತು?

ಶೀತಲಯುದ್ಧದ ಸಂದರ್ಭದಲ್ಲಿ ಬಹಳಷ್ಟು ಆಫ್ರಿಕನ್ ದೇಶಗಳು ಒಂದು ಇನ್ನೊಂದರೊಡನೆ ಕಾದಾಡಿದವು. ಇಂಥ ಕದನಗಳ ಹಿಂದೆ ಅಮೇರಿಕಾದ ಒತ್ತಾಸೆ ಇತು. ಹಾಗೇ ರಷ್ಯಾದ ಹಿತಾಸಕ್ತಿಯೂ ಸಹ. ನಾನು ಆದಿವಾಸಿ ಪ್ರದೇಶಗಳಲ್ಲಿ ನಡೆದ ಕೋಮುಸಂಘರ್ಷವನ್ನು ಬೇರೆ ರೀತಿಯಲ್ಲಿ ನೋಡುತ್ತೇನೆ. ಈ ಪ್ರದೇಶಗಳಲ್ಲಿ ೮೫% ಆದಿವಾಸಿಗಳು, ೧೦% ಹಿಂದುಗಳು, ೫% ಮುಸ್ಲಿಮರಿದ್ದಾರೆ. ಆದಿವಾಸಿಗಳನ್ನು ಹಿಂದೂ ಮುಸ್ಲಿಮರ ದಂಗೆಗಳಲ್ಲಿ ಭಾಗಿಯಾಗಲು ಪ್ರಚೋದಿಸಲಾಯಿತು. ಆಫ್ರಿಕಾದ ದೇಶಗಳು ಅಮೇರಿಕದ ಮೇಲೆ ಅವಲಂಬಿತವಾಗಿದ್ದಂತೆ, ಆದಿವಾಸಿಗಳನ್ನು ಸರ್ಕಾರದ ಅನುದಾನಗಳ ಮೇಲೆ ಅವಲಂಬಿತರಾಗಿರುವಂತೆ ಮಾಡಲಾಗಿತ್ತು. ಮುಖ್ಯವಾಗಿ ಆದಿವಾಸಿ ಪ್ರದೇಶಗಳಲ್ಲಿ ಸ್ವಾವಲಂಬನೆಯ ದಾರಿಗಳನ್ನು ತೋರಿಸಿದರೆ ಹಲವು ಅಪಾಯಗಳಿಂದ ದೂರವಾಗಬಹುದು. ನನ್ನ 'ನೊಮ್ಯಾಡ್ ಕಾಲ್ಡ್ ಥೀಫ್'(ಕಳ್ಳನೆಂದು ಕರೆಯಲಾಗುವ ಅಲೆಮಾರಿ) ಪುಸ್ತಕದಲ್ಲಿ ಬರೆದಿರುವಂತೆ, ಗುಜರಾತಿನ ದಂಗೆಗಳ ಹೊತ್ತಿನಲ್ಲಿ ಗುಜರಾತಿನ ಸರ್ಕಾರವು ಅಲ್ಲಿನ ಸ್ವಸಹಾಯ ಗುಂಪುಗಳನ್ನು ಮುಚ್ಚುವಂತೆ ಮಾಡಿತ್ತು. ಯಾಕೆಂದರೆ ಅವು ಸ್ವಾವಲಂಬನೆಯ ದಾರಿಗಳನ್ನು ಅವರಿಗೆ ತೋರಿಸಿದ್ದವು. ಹಿಂದೂ, ಮುಸ್ಲಿಮರು–ಆದಿವಾಸಿಗಳ ನಡುವಿನ ಕದನವನ್ನು ಗಮನವಿಟ್ಟು ನೋಡಿದರೆ ಅದು ನಿಜವಾಗಿ ಸ್ವಾವಲಂಬನೆಯ ವಿರುದ್ಧ ಸರ್ಕಾರ ಹಾಗೂ ರಿಲಯನ್ಸ್ ಕಂಪನಿಗಳು ನಡೆಸಿದ ಕೂಡುಯುದ್ಧ ಎನ್ನಿಸುತ್ತದೆ.... ೧೯ನೇ ಶತಮಾನದಲ್ಲಿ ಬ್ರಿಟಿಶರ ಒಡೆದು ಆಳುವ ನೀತಿಯ ಕಾರಣದಿಂದ ಹಿಂದೂ ಮುಸ್ಲಿಮರ ನಡುವಿನ ದಂಗೆಗಳು ನಡೆದ ಹಾಗೆ ಇಲ್ಲಿಯೂ ದಂಗೆಗಳು ನಡೆದವು. ಹಾಗಾಗಿ ನಾನು ಕೇವಲ ಆದಿವಾಸಿಗಳನ್ನು ದೂರಲಾರೆ. ಆದರೆ ಇಂಥ ಬೆಳವಣಿಗೆಗಳನ್ನು ಖಂಡಿತಾ ಒಪ್ಪಲಾರೆ.

ದಂಗೆಗಳ ನಂತರವಾದರೂ ಆದಿವಾಸಿಗಳು ಕೂಡುಜೀವನದಲ್ಲಿ ನಂಬಿಕೆ ಇಟ್ಟುಕೊಂಡಿದ್ದಾರೆಯೇ?

ಆದಿವಾಸಿಗಳು ಮುಖ್ಯಧಾರೆಯ ರಾಜಕೀಯಕ್ಕಿಂತ ಭಿನ್ನವಾಗಿರುವವರು. ಅವರಿಗೆ ವ್ಯವಸ್ಥೆಯ ಬಗ್ಗೆ ಸಿಟ್ಟೂ ಇಲ್ಲ ಸಂತೋಷವೂ ಇಲ್ಲ. ಅವರು ಇವೆಲ್ಲವುಗಳಿಂದ ನಿರ್ಲಿಪ್ತವಾಗಿ ಉಳಿದಿದ್ದಾರೆ, ಇನ್ನೂ ಮುಂಬರುವ ಕೆಲವು ಕಾಲದವರೆಗೆ ಅವರು ಹೀಗೆಯೇ ಇರುತ್ತಾರೆ. ಅವರ ಗುಣವೇ ಭಿನ್ನವಾಗಿರುವಂಥದ್ದು. ಅವರ ಜೀವನ ಕ್ರಮ, ಆರ್ಥಿಕ ದೃಷ್ಟಿಕೋನ ಬಹಳ ಭಿನ್ನವಾಗಿದೆ. ಸುಮಾರು ೭೦ವರ್ಷಗಳ ಅವಧಿಯಲ್ಲಿ, ಸುಮಾರು ೭೦,೦೦೦ ದಷ್ಟು ನೆಲೆಗಳಲ್ಲಿರುವ ಅಲ್ಲಿನ ಆದಿವಾಸಿಗಳು ಹತ್ತಿರವಿರುವ ಪಟ್ಟಣವೊಂದಕ್ಕೆ ನುಗ್ಗಿ ದಾಂಧಲೆ ಮಾಡಿದ್ದೊಂದು ಉದಾಹರಣೆಯನ್ನು ನಾನು ಇದುವರೆಗೂ ನೋಡಿಲ್ಲ. ಅವರು ಮೂಲತಃ ಅಹಿಂಸೆಯಲ್ಲಿ ನಂಬಿಕೆಯುಳ್ಳವರು. ಯಾಕೆಂದರೆ ಅವರಿಗೆ ನಮ್ಮಂಥ ದುರಾಸೆಗಳಿಲ್ಲ. ದುರಾಸೆಯೇ ಎಲ್ಲ ಬಗೆಯ ಹಿಂಸೆಗಳಿಗೆ ಜನ್ಮ ನೀಡುತ್ತದೆ. ಹಾಗೆಯೇ ಭಯವೂ ಸಹ ಎಲ್ಲ ಬಗೆಯ ರಾಜಕಾರಣಕ್ಕೆ ನಾಂದಿ ಹಾಡುತ್ತದೆ. ಆದ್ದರಿಂದ ಆದಿವಾಸಿಗಳು ನನ್ನ ಪ್ರಕಾರ ಎಲ್ಲ ಬಗೆಯ ರಾಜಕಾರಣದಿಂದ ದೂರನಿಂತವರು. ಹಾಗೇ ಹಿಂಸೆ ಹಾಗೂ ದುರಾಸೆಗಳಿಂದ ಮಾರುದೂರ ನಿಲ್ಲುವವರು.

ಭಾರತವನ್ನು ಒಂದು ಭಾಷಿಕ ಪ್ರಜಾಪ್ರಭುತ್ವ ಎಂದು ಕರೆಯಲಾಗುತ್ತದೆ. ನಮ್ಮ ಪ್ರಜಾಪ್ರಭುತ್ವವನ್ನು ಉಳಿಸಿದ ಹಾಗೆಯೇ ನಮ್ಮ ಭಾಷೆಗಳನ್ನು ಸಹ ನಾವು ಉಳಿಸಬೇಕಾಗಿದೆ. ದುರದೃಷ್ಟವೇನೆಂದರೆ, ಸಂವಿಧಾನದಲ್ಲಿ ನಾವು ಮಾಡಿರುವ ಭಾಷೆಗಳ ವರ್ಗೀಕರಣದ ಕಾರಣದಿಂದ, ಭಾಷಾವಾರು ಪ್ರಾಂತ್ಯಗಳ ರಚನೆಯ ಕಾರಣದಿಂದ ಆದಿವಾಸಿ ಭಾಷೆಗಳು ಮೂಲೆಗುಂಪಾಗುತ್ತಿವೆ. ಹೀಗಿರುವಾಗ ಸಂವಿಧಾನದ ಮೂಲಕ ಆದಿವಾಸಿ ಭಾಷೆಗಳನ್ನು ಹೇಗೆ ರಕ್ಷಿಸಬಹುದು?

ಲಿಪಿಯಲ್ಲಿರುವ ಎಲ್ಲ ಭಾಷೆಗಳಿಗೆ ರಕ್ಷಣೆಯನ್ನು ನೀಡುವ ದೃಷ್ಟಿಯಿಂದ ಸಂವಿಧಾನದ ೮ನೇ ಪರಿಚ್ಛೇದವನ್ನು ರಚಿಸಲಾಯಿತು. ಅದರಂತೆ ಲಿಪಿಯಿರುವ ಭಾಷೆಗಳಿಗೆ ಪ್ರಾಶಸ್ತ್ಯ ನೀಡಲಾಯಿತು. ಆದರೆ ಕಾಲಕ್ರಮೇಣ ನಾವು ಈ ಪರಿಚ್ಛೇದಕ್ಕೆ ಹೊಸ ಭಾಷೆಗಳನ್ನು –ಲಿಪಿಯಿರಲಿ ಬಿಡಲಿ–ಸೇರಿಸಬೇಕಾಗಿತ್ತು. ಇದು ಆಗುತ್ತಿಲ್ಲ. ಬರಲಿರುವ ದಿನಗಳಲ್ಲಿ ಸಂವಿಧಾನದಿಂದ ಮಾನ್ಯತೆ ಪಡೆದಿರುವ ಭಾಷೆಗಳು ಹಾಗೂ ಮಾನ್ಯತೆ ಪಡೆಯದಿರುವ ಭಾಷೆಗಳ ನಡುವಿನ ಕಂದರ ದೊಡ್ಡದಾಗುವ ಲಕ್ಷಣಗಳಿವೆ. ಇವುಗಳ ನಡುವೆ ಅಸಹನೆ, ಅನುಮಾನ, ರೋಷ ಆವೇಶಗಳು ಹೆಚ್ಚಾಗಿ ಭಾರತದ ಹಲವಾರು ಪ್ರಜೆಗಳಿಗೆ ಸಹಜವಾಗಿ ದೊರಕಿರುವ ಭಾಷಿಕ ಪೌರತ್ವವನ್ನೇ ನಿರಾಕರಿಸಿದಂತಾಗುತ್ತದೆ. ಉದಾಹರಣೆಯ ಮೂಲಕ ಹೇಳುವುದಾದರೆ, ಈಚೆಗೆ ನಡೆದ ಜನಗಣತಿಯಲ್ಲಿ ಭಾರತದ ಜನಸಂಖ್ಯೆಯನ್ನು ಮಾನ್ಯತೆ ಹೊಂದಿದ ಅಥವಾ ಇಲ್ಲದ ಭಾಷೆಗಳ ಆಧಾರದ ಮೇಲೆ ಸಮೀಕ್ಷೆ ನಡೆಸಿ ಸುಮಾರು ೬೦ಲಕ್ಷ ಜನರನ್ನು ಭಾರತೀಯ ನಾಗರಿಕರೆಂಬ ಪಟ್ಟಿಯಿಂದಲೇ ತೆಗೆದುಹಾಕಿದ್ದರು. ಅವರಿಗೆ ಭಾಷಿಕ ಪೌರತ್ವವನ್ನು ನಿರಾಕರಿಸಲಾಗಿತ್ತು. ಹಾಗಾಗಿ ಮುಂಬರುವ ದಿನಗಳಲ್ಲಿ ಬಹುಪಾಲು ಭಾರತೀಯರು ಭಾಷಿಕ ನೆಲೆಯಲ್ಲಿ ಬಹು ದೊಡ್ಡ ಅಪಾಯ ಹಾಗೂ ಅನುಮಾನವನ್ನು ಎದುರಿಸಬೇಕಾದ ತೊಂದರೆ ಇದೆ. ಇದು ಪ್ರಜಾಪ್ರಭುತ್ವ ವ್ಯವಸ್ಥೆಗೆ ಬಹು ದೊಡ್ಡ ಕಂಟಕವನ್ನು ಸೃಷ್ಟಿಸಬಲ್ಲದು.

ಆರಾಮವಾಗಿ ವಿಶ್ರಾಂತ ಜೀವನವನ್ನು ಕಳೆಯಬೇಕಾದ ನೀವು ಕಲ್ಬುರ್ಗಿಯವರ ಹತ್ಯೆಯ ನಂತರವೂ ಧಾರವಾಡಕ್ಕೆ ನೆಲೆ ಹುಡುಕಿಕೊಂಡು ಬಂದಿರಿ. ಮೊದಲಿನಿಂದಲೂ ನೀವು ಒಣ ಸಿದ್ಧಾಂತಿಗಳಾಗದೆ ಬೀದಿಗೆ ಇಳಿದು ಅಲ್ಲಿಂದ ಮಾತಾಡುವವರ ಜಾಯಮಾನಕ್ಕೆ ಸೇರಿದವರು. ಅದಕ್ಕಾಗಿಯೇ ನಿಮ್ಮ ಪ್ರೊಫೆಸರ್ ಹುದ್ದೆಯನ್ನು ಬಿಟ್ಟು ಆದಿವಾಸಿ ಪ್ರದೇಶಗಳ ಕಡೆ ನಡೆದಿರಿ. ಇದು ನಿಮ್ಮ ಬೌದ್ಧಿಕ ಅನ್ವೇಷಣೆಯ ಮಾದರಿಯೇ?

ಇರಬಹುದು. ನನ್ನ ವಿಚಾರಗಳಿಗೂ ನನಗೂ ಹೆಚ್ಚು ಅಂತರವಿರಬಾರದು ಎಂಬುದು ನನ್ನ ನಂಬಿಕೆ. ನನ್ನ ವಿಚಾರಗಳಿಗೆ ಅನುಗುಣವಾಗಿ ನಾನು ನಡೆದುಕೊಳ್ಳುತ್ತೇನೆ ಹಾಗೇ ನನ್ನ ವಿಚಾರಗಳನ್ನೂ ಸಹ ನನ್ನ ನಡೆಯ ಮೂಲಕವೇ ಸ್ಪಷ್ಟಪಡಿಸಿಕೊಳ್ಳುತ್ತೇನೆ. ಸೆಮಿನಾರೊಂದರಲ್ಲಿ ಒಂದು ರೀತಿ ಮಾತನಾಡಿ ಮರುದಿನ ಬೇರೊಂದು ರೀತಿ ನಡೆದುಕೊಳ್ಳಲು ನನಗೆ ಆಗುವುದಿಲ್ಲ. ಇದು ಬಹಳ ದೊಡ್ಡ ಗುಣವೆಂದು ಹೇಳಲಾರೆ. ಆದರೆ ನಾನು ಇರುವುದು ಹೀಗೆಯೇ.

ಕೊನೆಯದಾಗಿ, ನೀವು ನಮ್ಮ ಭಾಷಿಕ ಸಮುದಾಯಗಳಲ್ಲಿರುವ ವೈವಿಧ್ಯತೆ ಕಾಣೆಯಾಗುತ್ತಿರುವುದರ ಕುರಿತು ಆತಂಕ ವ್ಯಕ್ತಪಡಿಸಿದ್ದೀರಿ. ಹಾಗೆ ನೋಡಿದರೆ, ಮನುಷ್ಯ ನಾಗರಿಕತೆಯ ಇತಿಹಾಸದಲ್ಲಿಯೇ ಅತಿ ಹೆಚ್ಚು ವಾಚಾಳಿಗಳಾಗಿರುವವರು

ನಿರುತ್ತರರಾದ ಗಣೇಶ್ ದೇವಿ!



. ಗಣೇಶ್ ಎನ್. ದೇವಿಯವರ ಸಂದರ್ಶನದ ಮೊದಲ ಭಾಗದಲ್ಲಿನ(ಆಗಸ್ಟ್ ಸಂಚಿಕೆ) ಅವರ ಒಂದು ಮಾತು ಇಂದಿನ ಶಿಕ್ಷಣ ಮಾಧ್ಯಮ ಚರ್ಚೆಗಳ ಸಂದರ್ಭದಲ್ಲಿ ನನಗೆ ಅವ್ಯವಹಾರಿಕ ಮತ್ತು ಗೊಂದಲಕಾರಿಯಾಗಿ ಮಾತ್ರವಲ್ಲ, ಅಪಾಯಕಾರಿಯಾಗಿಯೂ ಕಂಡಿತು. ಹಾಗಾಗಿ ನಾನು ಅವರಿಗೆ ಆಗಸ್ಟ್ ೩ರಂದು ಈ ಬಗ್ಗೆ ಒಂದು ಪತ್ರ ಮೇಲ್ ಮಾಡಿದೆ. ಉತ್ತರ ಬಾರದಿರಲು ಅದೇ ತಿಂಗಳ ೨೨ರಂದು ನೆನಪು ಮಾಡಿದೆ. ಸಂದರ್ಶಕ ಸಿರಾಜ್ ಅವರ ಬಳಿ ಮಾತಾಡುತ್ತಾ ಅವರು ನನ್ನ ಪತ್ರಕ್ಕೆ ಉತ್ತರಿಸುವುದಾಗಿ ಹೇಳಿದ್ದರಿಂದ ಮತ್ತೆ ಅಕ್ಟೋಬರ್ ೧೦ರಂದು ಮೇಲ್ ಮೂಲಕ ನೆನಪಿಸಿದೆ. ಉಹುಂ ಅವರಿಂದ ಉತ್ತರವಿಲ್ಲ! ಹಾಗಾಗಿ ಅಂತಿಮ ತೀರ್ಮಾನವನ್ನು ಓದುಗರಿಗೇ ಬಿಟ್ಟು ನಾನು ಬರೆದ ಪತ್ರದ ಕನ್ನಡಾನುವಾದವನ್ನುನ್ನು ಇಲ್ಲಿ ಪ್ರಕಟಿಸುತ್ತಿರುವೆ.–ಸಂ.

ಪ್ರಿಯಶ್ರೀ ದೇವಿಯವರೇ,

ನಮ್ಮ ಪತ್ರಿಕೆಗಾಗಿ ಮಿತ್ರ ಡಾ. ಎಸ್. ಸಿರಾಜ್ ಅಹಮದ್ ಅವರಿಗೆ ನೀವು ನೀಡಿದ ವಿಸ್ತೃತ ಸಂದರ್ಶನ ಕುತೂಹಲಕಾರಿಯಾಗಿದೆ. ಅದಕ್ಕಾಗಿ ನಿಮಗೆ ಧನ್ಯವಾದಗಳು

ಈ ಸಂದರ್ಶನದಲ್ಲಿ ತಾವು ಶಿಕ್ಷಣದ ಉದ್ದೇಶ ನಿಜವಾಗಿ ಸಫಲವಾಗುವುದು ಅದು ಮಕ್ಕಳಿಗೆ ಮಾತೃಭಾಷೆಯಲ್ಲಿ ದೊರಕಿದಾಗ ಎಂದು ಸರಿಯಾಗಿಯೇ ಹೇಳಿದ್ದೀರಿ. ಆದರೆ ಯಾವುದೇ ಒಂದು ಭಾಷೆಯನ್ನು ಶಿಕ್ಷಣ ಮಾಧ್ಯಮವಾಗಿ ಕಡ್ಡಾಯಗೊಳಿಸುವುದನ್ನು ನೀವು ವಿರೋಧಿಸುತ್ತಾ ಒಂದು ತರಗತಿಯಲ್ಲಿರುವ ಎಲ್ಲ ವಿದ್ಯಾರ್ಥಿಗಳಿಗೆ ಅವರವರ ಮಾತೃಭಾಷೆಗಳಲ್ಲಿ ಶಿಕ್ಷಣ ನೀಡಬೇಕು ಎನ್ನುತ್ತೀರಿ. ಇದು ಅಸಾಧ್ಯ ಮತ್ತು ಅವ್ಯವಹಾರಿಕ ಮಾತ್ರವಲ್ಲದೆ ನಮ್ಮ ಎಲ್ಲ ಮಕ್ಕಳಿಗೆ ಇಂಗ್ಲಿಷ್‌ನ್ನು ಸಾಮಾನ್ಯ ಶಿಕ್ಷಣ ಮಾಧ್ಯಮವಾಗಿ ಜಾರಿಗೆ ತರಲು ಒಂದು ನೆಪವಾಗಿಬಿಟ್ಟಿದೆ. ಇದೊಂದು ಅಪಾಯಕಾರಿ ಸಾಮಾಜಿಕ ಬೆಳವಣಿಗೆಯೇ ಸರಿ.

ನಾನು ಭಾಷಾ ಅಲ್ಪಸಂಖ್ಯಾತರು ಗಣನೀಯ ಸಂಖ್ಯೆಯಲ್ಲಿರುವೆಡೆಗಳ ಹೊರತಾಗಿ ಕರ್ನಾಟಕದಲ್ಲಿ ಎಲ್ಲ ಶಾಲೆಗಳಲ್ಲಿ (ಕನಿಷ್ಟ ಏಳನೇ ತರಗತಿಯವರೆಗಾದರೂ) ಶಿಕ್ಷಣ ಮಾಧ್ಯಮ ಕನ್ನಡವಾಗಿರಬೇಕೆಂದು ಭಾವಿಸಿರುವವನು ಮತ್ತು ಇದೇ ಸರಿಯಾದ ಶಿಕ್ಷಣ ಮಾಧ್ಯಮ ನೀತಿ ಎಂದು ನಂಬಿರುವವನು. ರಾಜ್ಯದಲ್ಲಿ ಒಂದು ಕನ್ನಡೇತರ ಮಾತೃಭಾಷಾ ಮಾಧ್ಯಮದ ಶಾಲೆ ತೆರೆಯಲು ಆ ಊರಿನ. ನೆರೆಹೊರೆಯ ಒಟ್ಟು ಜನಸಂಖ್ಯೆಯಲ್ಲಿ ಆ ಕನ್ನಡೇತರ ಭಾಷೆಯ ಜನರ ಶೇಕಡಾವಾರು ಸಂಖ್ಯೆ ಅಥವಾ ಕನಿಷ್ಠ ಸಂಖ್ಯೆ ಎಷ್ಟಿರಬೇಕೆಂಬುದನ್ನು ಸರ್ಕಾರ ನಿರ್ಧರಿಸಲಿ. ಹಾಗೆ ನೋಡಿದರೆ, ಕರ್ನಾಟಕದಲ್ಲಿ ಇಂತಹ ಅನೇಕ ಕನ್ನಡೇತರ ಶಾಲೆಗಳಿದ್ದವು. ಅವುಗಳಲ್ಲಿ ಬಹುಪಾಲು ಶಾಲೆಗಳು ಕನ್ನಡ ಮಾಧ್ಯಮ ಶಾಲೆಗಳಂತೆಯೇ ನೀವು ಪ್ರತಿಪಾದಿಸುವಂತಹ ಅವ್ಯಾವಹಾರಿಕ ಮತ್ತು ಗೊಂದಲಮಯ ಶಿಕ್ಷಣ ಮಾಧ್ಯಮ ನೀತಿಯಿಂದಾಗಿ ಇಂಗ್ಲಿಷ್ ಶಾಲೆಗಳಾಗಿ ಪರಿವರ್ತಿತವಾಗಲು ಪ್ರೇರೇಪಣೆ ಒದಗಿಸಿದೆ ಎಂದು ಹೇಳಲು ಇಚ್ಛಿಸುತ್ತೇನೆ.

ಹಾಗಾಗಿ ನಾವಿಂದು 'ನೆರೆಹೊರೆಯ ಭಾಷೆ' ಎಂಬ ಹೊಸ ಭಾಷಾ ವಿಂಗಡಣೆಯನ್ನು ರೂಪಿಸಿಕೊಳ್ಳಬೇಕೆಂಬುದು ನನ್ನ ಅಭಿಪ್ರಾಯ. ಇದನ್ನು ಕರ್ನಾಟಕದಲ್ಲಿನ ಶಿಕ್ಷಣ ಮಾಧ್ಯಮ ಕುರಿತ ಚರ್ಚೆಗಳಲ್ಲಿ 'ಪರಿಸರ ಭಾಷೆ' ಎಂದು ಕರೆಯುತ್ತೇವೆ. ಇದನ್ನು ಕೆಲವರು 'ಬೀದಿ ಭಾಷೆ' ಎಂದೂ ಕರೆಯುತ್ತಾರೆ. ಈ ಪರಿಸರ/ಬೀದಿ ಭಾಷೆಯಾಗಿರುವ ಕನ್ನಡವು ಮನೆಯಲ್ಲಿ ಮಾತ್ರ ಕನ್ನಡೇತರ ಭಾಷೆ ಮಾತಾಡುವ ಜನರ ದತ್ತು ಅಥವಾ ಎರಡನೇ ಮಾತೃಭಾಷೆಯಾಗಿರುತ್ತದೆ.

ಶಾಲಾ ಶಿಕ್ಷಣ ನಿಧಾನವಾಗಿ ಮತ್ತು ನಿರ್ಣಾಯಕವಾಗಿ ಖಾಸಗಿಯವರ ಕೈವಶವಾಗುವವರೆಗೆ ನಮ್ಮ ರಾಜ್ಯದಲ್ಲಿ ಶಿಕ್ಷಣ ಮಾಧ್ಯಮ ನೀತಿಯ ಬಗ್ಗೆ ಯಾವುದೇ ಗೊಂದಲ/ಸಮಸ್ಯೆ ಇರಲಿಲ್ಲ. ಇಂದಿನ ಎಲ್ಲ; ಗೊಂದಲಗಳೂ ಶಿಕ್ಷಣದ ವಾಣಿಜ್ಯೀಕರಣ ಮತ್ತು ಅದರ ಉದ್ದೇಶಗಳ ಪಲ್ಲಟದ ಫಲಗಳೇ ಆಗಿವೆ. ಇದಕ್ಕೆ ಬಹುಭಾಷಿಕತೆಯ ಸಮರ್ಥನೆಯಾಗಿ ಒಡ್ಡಲಾಗುತ್ತಿರುವ ಒಣವಾದಗಳು ಇಂಗ್ಲಿಷ್‌ನ ಏಕಪ್ರಭುತ್ವಕ್ಕೆ ಪೋಷಣೆ ನೀಡುವುದರಲ್ಲಿ ಕೊನೆಗೊಳ್ಳುತ್ತಿವೆ.

ಈ ನನ್ನ ಅಭಿಪ್ರಾಯಗಳನ್ನು ಕುರಿತ ನಿಮ್ಮ ಪ್ರತಿಕ್ರಿಯೆಯನ್ನು ತಿಳಿಯಲು ನಾನು ಕಾತುರನಾಗಿದ್ದೇನೆ

ಶಿವಮೊಗ್ಗ **ಡಿ.ಎಸ್. ನಾಗಭೂಷಣ**

ನಾವು. ದಿನಕ್ಕೆ ಇಪ್ಪತ್ತನಾಲ್ಕು ಗಂಟೆಗಳನ್ನೂ ಸಹ ಮಾತಾಡಿಯೋ ಅಥವಾ ಬೇರೆಯವರು ಮಾತಾಡುವುದನ್ನೋ ಕೇಳಿಯೋ ಬದುಕುವ ನಮ್ಮಲ್ಲಿ ವೈವಿಧ್ಯತೆಯಿಲ್ಲ ಎಂಬುದು ದೊಡ್ಡ ದುರಂತದ ಸಂಗತಿ. ನಮ್ಮ ಕಾಲದಲ್ಲಿ ಕೇವಲ ಜನಾಂಗೀಯ ಹತ್ಯೆಗಳು ಮಾತ್ರ ನಡೆಯುತ್ತಿಲ್ಲ 'ಫೋನೋಸೈಡ್' (ಪದಹತ್ಯೆ/ಧ್ವನಿಹತ್ಯೆ) ಸಹ ನಿರಂತರವಾಗಿ ನಡೆಯುತ್ತಿವೆ ಎಂಬುದು ಯಾಕೆ ನಮ್ಮ ಅರಿವಿಗೆ ಬರುತ್ತಿಲ್ಲ?


ನಾಗರಿಕತೆಗಳ ವಿಕಾಸ ಬಹಳ ನಿಧಾನವಾಗಿ ನಡೆಯುವ ಪ್ರಕ್ರಿಯೆ. ಅದರಲ್ಲಿ ವೈವಿಧ್ಯತೆಯ ಪಾತ್ರ ಬಹಳ ದೊಡ್ಡದು. ಎಲ್ಲಿ ವೈವಿಧ್ಯತೆ ನಾಶವಾಗುತ್ತದೆಯೋ ಅಲ್ಲಿ ವಿಕಾಸದ ಪ್ರಕ್ರಿಯೆ ಕುಂಠಿತವಾಗುತ್ತದೆ. ಇದರಿಂದ ಅಲ್ಲಿ ಬದುಕುವ ಪ್ರಾಣಿ ಪಕ್ಷಿ ವೃಕ್ಷ ಸಂಕುಲಗಳು ವಿನಾಶದ ಸುಳಿಯಲ್ಲಿ ತಾವೇ ಹೋಗಿ ಸಿಲುಕಿಕೊಳ್ಳುತ್ತವೆ. ವಿಕಾಸದ ಹಾದಿಯಲ್ಲಿ ನಡೆಯಲು ವೈವಿಧ್ಯತೆಯೇ ದಾರಿದೀಪ. ನಮ್ಮ ಸಮಸ್ಯೆ ಭಾಷೆಗಳು ಕಣ್ಮರೆಯಾಗುತ್ತಿರುವುದು ಮಾತ್ರವೇ ಅಲ್ಲ. ಭಾಷೆಗಳ ಒಡಲಲ್ಲಿ ಇರುವ ಪದಗಳೂ ಸಹ ಕ್ರಮೇಣ ಕಾಣೆಯಾಗುತ್ತಿವೆ ಅಥವಾ ನಿರುಪಯೋಗಿಯಾಗುತ್ತಿವೆ. ಎಲ್ಲ ಭಾಷೆಗಳಲ್ಲೂ ಪದಗಳಿಗೆ ಇರುವ ಹಲವಾರು ಅರ್ಥಸಾಧ್ಯತೆಗಳೂ ಕಾಣೆಯಾಗುತ್ತಿವೆ. ನಮ್ಮ ತಂದೆ, ತಾತ ಮುತ್ತಾತ ಮೊದಲಾದವರು ತಮ್ಮ ದೈನಂದಿನ ಮಾತುಕತೆಗಳಲ್ಲಿ ಹಲವು ಗಾದೆ ನುಡಿಗಟ್ಟುಗಳನ್ನು ಬಳಸುತ್ತಿದ್ದರು. ನಾನೀಗ ಸಂಜೆಯ ವೇಳೆಗೆ ದಣಿದರೆ 'ಸುಸ್ತಾಯಿತು' ಎನ್ನುತ್ತೇನೆ. ನನ್ನ ತಂದೆ ಅಷ್ಟನ್ನು ಹೇಳಲು ತನ್ನ ಆಕಳನ್ನೋ ಕರುವನ್ನೋ ಯಾರೋ ಕದ್ದುಬಿಟ್ಟಿದ್ದಾರ ಎಂದು ಹೇಳುತ್ತಿದ್ದ. ಇಂಗ್ಲಿಶಿನಲ್ಲಿ ನಾನು ಆತಂಕಗೊಂಡಿದ್ದೇನೆ / ಗಲಿಬಿಲಿಗೊಂಡಿದ್ದೇನೆ ಎನ್ನಲು 'ಬಟರ್‌ಫ್ಲೈಸ್ ಇನ್ ದ ಸ್ಟಮಕ್' ಎನ್ನುತ್ತಾರಲ್ಲ ಅದರ ಬದಲು ನಾವೀಗ ಐ ಆಮ್ ಟೆರಿಫೈಯ್ಡ್ ಎಂದು ಬಿಡುತ್ತೇವೆ. ನಮ್ಮ ಹುಡುಗರು ಏನನ್ನಾದರೂ ಬೈಯಲೂ ಸಹ ಒಂದು ವಾಕ್ಯವನ್ನೋ ಪದವನ್ನೋ ಬಳಸದೆ ಕೇವಲ 'ಶಿಟ್' ಎಂದು ಬಿಡುತ್ತಾರೆ ನೋಡಿ ಹಾಗೆ. ಅವರಿಗೆ 'ಶಿಟ್' ಎಂಬುದನ್ನು ಪದಶಃ ವಿವರಿಸುವುದನ್ನು ಬಿಟ್ಟರೆ ಅದನ್ನು ಬೇರೆ ರೀತಿಯಲ್ಲಿ ಹೇಳಲೂ ಸಹ ಆಗದಷ್ಟು ಭಾಷಿಕ ದಾರಿದ್ರ್ಯ ಆವರಿಸಿದೆ. ಇಂಥ ದಾರಿದ್ರ್ಯ ನಮ್ಮ ವಿದ್ಯಾವಂತ ಪೀಳಿಗೆಯನ್ನು ಆವರಿಸಿರುವುದು ನಿಜವಾದ ಆತಂಕದ ಸಂಗತಿ.

ಈಗ ಸದ್ಯ ತೇಜಗಡದಲ್ಲಿ–ನೀವು ಅಲ್ಲಿಂದ ಬಂದ ಮೇಲೆ– ಏನಾಗುತ್ತಿದೆ?

೨೦೦೬ರಲ್ಲಿಯೇ ನಾನು ೨೦೧೬ಕ್ಕೆ ಅಲ್ಲಿಂದ ಹೊರಡಲು ನಿರ್ಧರಿಸಿದ್ದೆ. ಹತ್ತುವರ್ಷಗಳ ಅವಧಿಯಲ್ಲಿ ಅಲ್ಲಿನ ಯುವಕರಿಗೆ ತರಬೇತಿ ನೀಡಿ ಅವರಿಗೆ ಹಲವು ಬಗೆಯ ಜವಾಬ್ದಾರಿಗಳನ್ನು ನೀಡಿ ಸಜ್ಜುಗೊಳಿಸಿದೆ. ಅದೀಗ ಭಾಷಾ ಅಕಾಡೆಮಿಯ ರೂಪದಲ್ಲಿ ಕೆಲಸಮಾಡುತ್ತಿದೆ. ಅಲ್ಲಿನ ಯುವಕರು ತಮಗೆ ಬೇಕಾದ ಅಭಿವೃದ್ಧಿಯ ಮಾದರಿಯನ್ನು ತಾವೇ ರೂಪಿಸಿಕೊಂಡಿದ್ದಾರೆ. ೨೦೧೬ರಲ್ಲಿ ನಾನು ಅಲ್ಲಿಂದ ಹೊರಟಾಗ ಯಾರೂ ಅಳಲಿಲ್ಲ. ಮುಂದೇನು ಮಾಡಬೇಕೆಂದು ಕೇಳಲಿಲ್ಲ. ನನ್ನ ಬದುಕಿನ ಉಳಿದ ಸಮಯವನ್ನು ಅಸ್ಸಾಮಿನ ತೇಜಪುರದಲ್ಲಿ ಕಳೆಯಲು ನಿರ್ಧರಿಸಿದ್ದೆ. ಆದರೆ ಕಲ್ಬುರ್ಗಿಯವರ ಘೋರ ಹತ್ಯೆಯ ನಂತರ ಧಾರವಾಡಕ್ಕೆ ಬರಬೇಕೆನಿಸಿ ಬಂದು ನೆಲೆಸಿದೆ.

ಹಾಗೆಯೇ ಪಿಎಸ್‌ಎಲ್‌ಐನ ಯೋಜನೆಯ ಎಲ್ಲಾ ಸಂಪುಟಗಳು ೨೦೨೦ಕ್ಕೆ ಪ್ರಕಟಗೊಳ್ಳುತ್ತವೆ. ೨೦೨೧ಕ್ಕೆ ಇನ್ನೊಂದು ಸುತ್ತಿನ ಭಾಷಾಗಣತಿಯನ್ನು ನಡೆಸಲು ಸಮರ್ಥ ತಂಡವೊಂದಕ್ಕೆ ತರಬೇತಿ ನೀಡಿ ಈಗಾಗಲೇ ಸಜ್ಜುಗೊಳಿಸಲಾಗಿದೆ. ಇದರ ನಂತರ ೨೦೩೧ಕ್ಕೆ ಸುಮಾರು ೩೦ವರ್ಷ ವಯೋಮಾನದ ಯುವಕರ ತಂಡವೊಂದಕ್ಕೆ ಕಳೆದ ಆರು ವರ್ಷಗಳಿಂದ ತರಬೇತಿ ನೀಡಿ ಭಾಷಾಗಣತಿಯ ಕಾರ್ಯವನ್ನು ಸ್ವಯಂಪೂರ್ಣ ವ್ಯವಸ್ಥೆಯಂತೆ ಕೆಲಸ ನಿರ್ವಹಿಸಲು ಸಾಧ್ಯವಾಗುವಂತೆ ಪ್ರಯತ್ನ ನಡೆದಿದೆ.

ನಾವು ಸಾಕಷ್ಟು ವಿಷಯಗಳ ಬಗ್ಗೆ ಮಾತಾಡಿದ್ದೇವೆ, ಇಷ್ಟು ಬಿಡುವು ಮಾಡಿಕೊಂಡು ಉತ್ತರಗಳನ್ನು ನೀಡಿದ್ದಕ್ಕಾಗಿ ನಿಮಗೆ ಧನ್ಯವಾದಗಳು



ನನಗೂ ಸಂತೋಷವಾಗಿದೆ. ನಮಸ್ಕಾರ.

(ಸಂದರ್ಶಕ ಸಿರಾಜ್ ಅಹಮದ್ ಶಿವಮೊಗ್ಗದ ಸಹ್ಯಾದ್ರಿ ಕಾಲೇಜಿನ ಇಂಗ್ಲಿಷ್ ಸ್ನಾತಕೋತ್ತರ ವಿಭಾಗದಲ್ಲಿ ಸಹ ಪ್ರಾಧ್ಯಾಪಕರಾಗಿದ್ದು, ಭರವಸೆಯ ಸಾಹಿತ್ಯ ವಿಮರ್ಶಕರೂ ಆಗಿದ್ದಾರೆ)

ನವಿಲುಗರಿ

ಎಳೆದಿನದ ಪ್ರತಿಬಿಂಬ



ಕೊಳ ಬತ್ತಿದರೂನು ತಳದಲ್ಲಿ ಅಚ್ಚೊತ್ತಿದೆ
ನಮ್ಮ ಎಳೆತನದ ಪ್ರತಿಬಿಂಬ.

ತುಂಬುವುದು ಕೊಳ ಬತ್ತುವುದು
ನಡೆದಿದೆ ಎರಡೂ
ಕಾಲದಿಂದಲೇ ಆಗಿದೆ ಕಾಲಾಂತರವೂ.

ಎಳೆದೆಳೆದು ಬಂದು ನಿಲ್ಲುತ್ತದೆ ಮನಸ್ಸು
ಆ ದಿನಗಳ ಬಳಿಗೇನೇ,
ಕುಂಟೋಬಿಲ್ಲೆ 'ಅಮಟೆ ಅಮಟೆ',
ಕೋಳಿಗೂಡು 'ಕ್ವಾ ಕ್ವಾ...'
ಹಂದಿಒಡ್ಡು ಎಷ್ಟು ಬೆರಗುಗಣ್ಣು, ಅಷ್ಟೊಂದು ಮುದ್ದುಮೂತಿ!

ಎಷ್ಟೊಂದು ಶಬ್ದಗಳು ಏನೆಲ್ಲ ಭಾಷೆ
ಆಡಿದ್ದೆಲ್ಲ ಮನ್ವಂತರದ ಹೊಸ್ತಿಲ ಮೇಲೆ ಕುಳಿತೇ,
ಮನದ ಹಿತ್ತಿಲಲ್ಲೆಲ್ಲೋ ಆಡಿಕೊಂಡಿರುತ್ತವೆ ಅವೆಲ್ಲ ನೆನಪುಗಳು
ಝುಳಕ್ಕನೆ ಮೇಲೆದ್ದು ತೇಲುತ್ತವೆ ನೀರ ಮೇಲಿನ ತಾವರೆಯ ಹಾಗೆ
ಜಡಿ ಮಳೆಗಾಲದಲ್ಲಿ ಮೂಡುವ ಮುಂಬಿಸಿಲೂ ಹಾಗೆ.



ನಿನ್ನೆಗಳ ನೀರೋಟದೊಳಗೆ ನಿನ್ನೆಗಳೇ ಹರಿದು ಬಂದು
ಇಂದೆನ್ನುವುದು ಏನಿಷ್ಟು ಹೊಸತು!
ಬತ್ತಿದ ಕೊಳದ ತಳಮಣ್ಣಲ್ಲಿ ಅಚ್ಚೊತ್ತಿದೆ ಬಾಲ್ಯದ ಹಚ್ಚೆ

–ಜ.ನಾ ತೇಜಶ್ರೀ

ಗೊಂಬೆ ಮದುವೆ



ಮುಡುಕುತೊರೆಯ ಜಾತ್ರೆಯಲಿ ಕೊಂಡ
ಬಂಗಾರದ ಬಣ್ಣದ ಬೊಂಬೆಯ ತಂದು
ಹಸೆಯ ಮೇಲೆ ಜರಿಯ ಸೀರೆ ಹೊದಿಸಿ
ಕಂಕಣ ಕಟ್ಟಿ ಕೈಗೆ, ಅರಿಶಿನವ ಬಳಿದು ಮೈಗೆ
ಎಕ್ಕದ ಕಡ್ಡಿ ಬೆನ್ನಿಗಾನಿಸಿ ಕೂರಿಸಿ, ಮಲ್ಲಿಗೆ
ಮೊಗ್ಗಿನ ಹಾರವಿಟ್ಟು, ಸೊಲ್ಲುಬಾರದ ಸೋಬಾನೆ
ಬಾಯೊಳಗೆ ನಿಂತು ಕಣ್ಣೊಳಗೆ ತುಂಬಿ ಬಂತು.

ಹೆಪ್ಪುಗಟ್ಟಿದ ರಕ್ತದ ಕೊರೆವ ತಣ್ಣನೆ ಮಂಜಿನ ಮೈ
ಬೆಳಕಿನ್ನೆಂದೂ ಮುಟ್ಟದ ರೆಪ್ಪೆ ಮುಚ್ಚಿದ ಕಣ್ಣು
ಉರಿಯದ ಉಸಿರು ನಿಂತು ಒಡಲೊಳಗೆ ಸ್ತಬ್ದ ;
ಮಿಡಿಯದ ಹೃದಯದೊಳಗೆ ಅವಿತ ಕನಸುಗಳು

ಅಯ್ಯೋ!
ನಡುಮಧ್ಯೆ ರಸ್ತೆಯೊಳಗೆ ಅಭ್ಯಂಗನವು
ಹಿಡಿದ ನಾಲ್ವರ ನಡುವೆ ವರನ ಅರಿಶಿನದೋಕುಳಿ
ನಗುವಿಲ್ಲ, ನರ್ತನವಿಲ್ಲ, ಬಿಕ್ಕುವ ಭಿಕಾರಿ ದನಿ ಬಿಟ್ಟು
ಸದ್ದು ಸಂಭ್ರಮವಿಲ್ಲ ಅಂಗಳದೊಳಗೆ ಇನಿತೂ..

ಹೂದಂಡೆ, ಧೂಪದೀಪ, ಅಕ್ಕಿಕಾಳು, ಅಗರುಬತ್ತಿ
ಎಲ್ಲೆಲ್ಲೂ ಚೆಲ್ಲಿ, ಬೇಡುವವರಿಲ್ಲ ಯಾರೂ ಭಕ್ತರು,
ಇಲ್ಲಿ ಹೊರಟವನ ಬಗ್ಗೆ ಬರೀ ಹೂ ಮಾತುಗಳು.



ಎತ್ತಿದಳು ತಾಯಿ ಚರಿಗೆ ನೀರು ಮಗನ ಮೇಲೆ
ಹೊರಟನೆಂದು ಹೋಗಲಾರದ ಹೊರಲೋಕಕೆ
ಕಣ್ಣೊಳಗೆ ಕಡಲ ಅಡಗಿಸಿ ಬಿಸಿ ಹನಿಯ ನುಂಗಿ,
ಕೆಂಪಂಚಿನ ಪಂಚೆ ಉಡಿಸಿ, ಉಡುದಾರ ಕಿತ್ತು
ತಲೆಗೊಂದು ರುಮಾಲು ಕಟ್ಟಿ ಹಣೆಗೆ ತಿಲಕವಿಟ್ಟು
ಎತ್ತಿದನು ಹೆಗಲ ಮೇಲ ಮಗನ, ಅಪ್ಪ ನಡುಗುತ್ತಾ
ಆಗಷ್ಟೇ ಹುಟ್ಟಿದ ಮಗುವಂತೆ!

ಹಸೆಯ ಮೇಲೆ ಮಗ, ಉಸಿರಿರದ ಹುಸಿಯಾದ ಮಗ
ಕಪ್ಪುಮೈ, ಬಲಿತ ಬಾಹು, ದಪ್ಪ ತೊಡೆ, ಮುದ್ದುಮುಖ
ಅಲ್ಲೆ ಕಿತ್ತು ಕಟ್ಟಿ ಕೊರಳಿಗಿತ್ತ ಎಳೆಯ ತುಳಸಿಮಾಲೆ..
ಎಷ್ಟು ಸಂಕಟ, ಎಷ್ಟು ದುಗುಡ, ಎಷ್ಟೆಷ್ಟು ದುಮ್ಮಾನ.

ಪರದೆ ಬಿಟ್ಟ ಮೇಲೆ ಎಸೆದ ಜೀರಿಗೆ, ಜೀವ ತರಲಿಲ್ಲ
ಕಟ್ಟಿಸಿದ ತಾಳಿ ಬೊಂಬೆಯನೂ ಉಳಿಸಲಿಲ್ಲ ;
ಊರು ದಾರಿಯ ಮೆಟ್ಟಿ ನಡೆದು ಕಾಡಿನ ಸರಹದ್ದು
ಎರಡು ಬೊಂಬೆಗಳ ಉರಿವ ಕಿಚ್ಚಿಗೆ ಒಪ್ಪಿಸಿದರಯ್ಯ
ಊರೆಲ್ಲಾ ಮಂಜಿನ ಕಿಚ್ಚಲಿ ಬೇಯುತ್ತಿರಲಾಗಿ...

–ರಾಜೇಂದ್ರ ಪ್ರಸಾದ್

(ಹಳೇ ಮೈಸೂರು ಭಾಗದಲ್ಲಿ ಮದುವೆಗೆ ಮೊದಲೇ ಸತ್ತ ಮಗನಿಗೆ ಬೊಂಬೆಯ ಜೊತೆ ಮದುವೆ ಮಾಡಿಸಿ, ನಂತರ ಮಣ್ಣು ಮಾಡುವುದು ಸಂಪ್ರದಾಯ.)

ಬೆರೆತು ಒಂದಾಗಿರುವಾಗ



ನನ್ನ ಕಿಟಕಿಯ ಬಳಿಬಂದು
ನಾಚಿ ಮತ್ತೆ ಸರಕ್ಕನೆ
ಸರಿದು ಹಿಂತಿರುಗಿದ
ನಿನ್ನ ಉಸಿರುಹೊತ್ತ ಗಾಳಿ
ಏನನ್ನೋ ಸಾರಿ ಹೋಗಿದೆ.


ನನ್ನ ಸನಿಹವೇ ಸುಳಿದು
ಹುಸಿ ಮುನಿಸ ಮೆರೆದು
ಮತ್ತೆ ಸುಯ್ಯನೆ ಸರಿದ
ನಿನ್ನ ಘಮಲು ಹೊತ್ತ ಗಂಧ
ಮತ್ತೇನನ್ನೋ ನುಲಿದು ಹಾರಿದೆ!

ನನ್ನ ಕಣ್ಣೆದುರೇ ಮೂಡಿ
ಕೆನ್ನೆ ಕೆಂಪಾಗಿಸಿ ಕೆಣಕಿ
ಮರುಕ್ಷಣವೇ ಮರೆಯಾದ
ನಿನ್ನ ಕಾಯ ಹೊತ್ತ ಚಿತ್ರ
ಅದೇನೋ ದಾಟಿಸಿ ಕರಗಿದೆ!



ಗಾಳಿ, ಘಮಲು, ರೂಪು
ರೂಹುಗಳಲ್ಲೆಲ್ಲಾ ನೀನೇ
ಬೆರೆತು ಒಂದಾಗಿರುವಾಗ
ನಾನು ಮಾತ್ರ ನಾನಾಗಿ ಇಹನೇ?

–ಶಶಿ ಸಂಪಳ್ಳಿ




ರೇಖಾಚಿತ್ರಗಳು : ವಿಜಯಶ್ರೀ ಹಾಲಾಡಿ

ಸಾಹಿತ್ಯ-ಸಂಸ್ಕೃತಿ, ಶಿಕ್ಷಣ ಇತ್ಯಾದಿ : ನೀನಾಸಂ ಶಿಬಿರ ಕುರಿತ ಕೆಲವು ಟಿಪ್ಪಣಿಗಳು


ಈ ಬಾರಿಯ ನೀನಾಸಂ ಸಂಸ್ಕೃತಿ ಶಿಬಿರ ಅಕ್ಟೋಬರ್ ೭ರಿಂದ ೧೧ರವರೆಗೆ ನಡೆಯಿತು, ಈ ಶಿಬಿರದ ಮುಖ್ಯ ವಿಷಯ 'ಶಿಕ್ಷಣದಲ್ಲಿ ಕಲಿಕೆಯ ಬಿಕ್ಕಟ್ಟು' ಎಂಬುದಾಗಿತ್ತು. ಹಗಲು ಈ ವಿಷಯದ ಸುತ್ತಮುತ್ತ ಇಂಗ್ಲಿಷ್ ಮತ್ತು ಕನ್ನಡದಲ್ಲಿ ಉಪನ್ಯಾಸ-ಚರ್ಚೆಗಳು ನಡೆದರೆ, ಸಂಜೆ ನಾಟಕಗಳ ಪ್ರದರ್ಶನವಿತ್ತು. ಹಗಲಿನ ಗೋಷ್ಠಿಗಳ ನಡುವೆಯೂ ಕಿರು ನಾಟಕಗಳ ಪ್ರದರ್ಶನವಿರುತ್ತಿತ್ತು. ನಾನು ೭ರ ಮಧ್ಯಾಹ್ನದಿಂದ ೯ರ ಸಂಜೆವರೆಗೆ ಶಿಬಿರದ ಕಲಾಪಗಳಲ್ಲಿ ಭಾಗವಹಿಸಿದ್ದೆ. ಕೆಲವು ಭಾಷಣಗಳನ್ನೂ, ನಾಟಕಗಳನ್ನೂ ನೋಡಿದೆ.

ನೀನಾಸಂನ ಮುಖ್ಯಸ್ಥ ಕೆ.ವಿ ಅಕ್ಷರ ಒಮ್ಮೆ ಹೇಳಿದಂತೆ 'ನಾವೇನೋ ಹೇಳುತ್ತೇವೆ, ಅವರೇನೋ ಅರ್ಥ ಮಾಡಿಕೊಂಡು ಇಲ್ಲಿ ಬಂದು ಮಾತಾಡುತ್ತಾರೆ' ಎಂಬಂತೆ ಈ ಬಾರಿಯ ಉಪನ್ಯಾಸಗಳೂ ಉಪನ್ಯಾಸಕರ ಲಹರಿಗಳಂತೆ ಅತ್ತಿತ್ತ ಹರಿದುಹೋಗಿ 'ಕಲಿಕೆಯ ಬಿಕ್ಕಟ್ಟು'ಗಳ ಮೇಲೆ ಹೊಸ ಬೆಳಕೇನೂ ಚೆಲ್ಲಿದಂತೆ ಕಾಣಲಿಲ್ಲ. ಇದ್ದುದರಲ್ಲಿ ತ್ರಿದೀಪ್ ಸುಹೃದ್ ಮತ್ತು ಶಿವಾನಂದ ಕಳವೆಯವರ ಮಾತುಗಳು ಹೊಸದೇನನ್ನೋ ಹೇಳುವ ಪ್ರಯತ್ನ ಮಾಡಿದಂತೆನಿಸಿದವು. ಸುಹೃದ್, ಗಾಂಧಿ ಹೆಸರಿನ ಸಂಸ್ಥೆಗಳೇ ಪ್ರಭುತ್ವಗಳ ಸಹಯೋಗದಲ್ಲಿ ಗಾಂಧಿಯನ್ನು ಹೇಗೆ ಕೇವಲ ಪ್ರದರ್ಶನದ ವಸ್ತು ಮಾತ್ರವನ್ನಾಗಿ ಮಾಡಿ ಅವರ ವ್ಯಕ್ತಿತ್ವದೊಳಗಿನ ಕ್ರಾಂತಿಕಾರಕ ಶಕ್ತಿಯನ್ನೇ ನಾಶ ಮಾಡಿವೆ ಎಂಬುದನ್ನು ಉದಾಹರಣೆಗಳ ಸಹಿತ ವಿವರಿಸಿದರು. ಕಳವೆಯವರು ದೇಶ ತಿರುಗಿ ಕೋಶ ಓದುವ ಸಹಜ ಕಲಿಕೆಯ ಮಾರ್ಗದ ತಮ್ಮದೇ ಅನುಭವಗಳನ್ನು ಬಿಡಿಸಿಟ್ಟು ಕಲಿಕೆಯ ಬಿಕ್ಕಟ್ಟನ್ನು ಪರಿಹರಿಸಬಹುದಾದ ದೇಸಿ ಮಾರ್ಗವೊಂದರ ಕಡೆ ಬೊಟ್ಟು ಮಾಡಿದರು. ಪೃಥ್ವಿದತ್ತ ಚಂದ್ರ ಶೋಭಿಯವರ ಒಂದು ಉಪನ್ಯಾಸ ಕೇಳಿ ನಾನು ನಿರಾಶನಾದೆನೆಂದೇ ಹೇಳಬೇಕು. ಅವರು ಶಿಕ್ಷಣವೆಂದರೆ ಕೇವಲ ಲೌಕಿಕ ಶಿಕ್ಷಣಕ್ಕೆ ಸೀಮಿತಗೊಳಿಸಿಕೊಂಡು ಇತ್ತೀಚಿನ ಕೃತಕ ಬುದ್ಧಿಮತ್ತೆಯ ಅಭಿವೃದ್ಧಿಯ ಸಾಧ್ಯತೆಗಳ ಬಗ್ಗೆ ಮಾತಾಡತೊಡಗಿದಾಗ ನಾನು ಈ ಕೃತಕ ಬುದ್ಧಿಮತ್ತೆಯ ಸಂಶೋಧನಾ ಕ್ಷೇತ್ರದಲ್ಲಿ ದೇವರು ಮತ್ತು ಧರ್ಮಗಳನ್ನು ಕುರಿತಂತೆ ಏನಾದರೂ ಪ್ರಯೋಗಗಳು ನಡೆದಿವೆಯಾ? ನಡೆದಿರದಿದ್ದರೆ ಏನು ಕಾರಣ? ಎಂದು ಕೇಳಬೇಕಾಯಿತು. ಅವರು ಅಂತಹ ಪ್ರಯೋಗಗಳೇನೂ ನಡೆದಿಲ್ಲವೆಂದರು. ಏಕೆ ಎಂಬುದನ್ನು ಹೇಳಲಿಲ್ಲ. ಶಿಕ್ಷಣದ ಮೂಲ ಉದ್ದೇಶ ಜ್ಞಾನವೇ ಆಗಿದ್ದರೆ ಮತ್ತು ಅದು ಆ ಜ್ಞಾನದ ಎಲ್ಲ ದಿಗಂತಗಳನ್ನೂ ಸ್ಪರ್ಶಿಸುವಂತಿರಬೇಕು ಎಂಬ ಅರಿವಿಲ್ಲದಿದ್ದರೆ ಇಂದಿನ ಕಲಿಕೆಯ ಬಿಕ್ಕಟ್ಟುಗಳ ಮೂಲ ನಿಜವಾಗಿ ಎಲ್ಲಿದೆ ಎಂಬುದು ಅರ್ಥವಾಗುವುದಾದರೂ ಹೇಗೆ? ಹಾಗಾಗಿಯೇ ಏನೋ ಕಲಿಕೆಯ ಬಿಕ್ಕಟ್ಟುಗಳು ಕುರಿತ ಚರ್ಚೆಯ ಸಂದರ್ಭದಲ್ಲಿ ಪ್ರಸ್ತಾಪಿತವಾಗಲೇ ಬೇಕಿದ್ದ ಗಾಂಧೀಜಿಯ 'ನಯೀ ತಾಲೀಂ' ಶಿಕ್ಷಣ ಮಾದರಿಯ ಮಾತು ನಾನು ಕೇಳಿದ ಯಾವುದೇ ಗೋಷ್ಠಿಯಲ್ಲಿಯೂ ಕೇಳಿಬರಲಿಲ್ಲ!

ಮಿಕ್ಕಂತೆ ಕ್ಲಾಡ್ ಆಳ್ವರೀಸ್ ದಂಪತಿಗಳ ಮತ್ತು ಗೋಪಾಲಗುರು ಅವರ ಮಾತುಗಳು ಗೊಂದಲಮಯವಾಗಿದ್ದವೆಂದೇ ಹೇಳಬೇಕು. ಕ್ಲಾಡ್‌ರ ಮಾತುಗಳಂತೂ ಎಲ್ಲವೂ ನಮ್ಮಲ್ಲಿಯೇ ಇತ್ತು, ಇದೆ ಎಂಬ ಸಂಘ ಪರಿವಾರದವರ ವಾದದ ಪರಿಷ್ಕೃತ ಆವೃತ್ತಿಯಂತೆ ಕೇಳಿಸಿತು. ಇನ್ನು 'ಅಡುಗೆ ಕ್ಷೇತ್ರದಲ್ಲಿನ ಕಲಿಕೆಯ ಬಗ್ಗೆ ಮಾತಾಡಲು ಬಂದಿದ್ದ ಸದಾನಂದ ಮಯ್ಯ ತಮ್ಮ ಸಾಧನೆಗಳ ವಿವರಣೆಗೇ ತಮ್ಮ ಮಾತುಗಳನ್ನು ಸೀಮಿತಗೊಳಿಸಿಕೊಂಡು ನಿರಾಶೆ ಹುಟ್ಟಿಸಿದರು.



ಇನ್ನು ನಾಟಕಗಳ ಬಗ್ಗೆ ಹೇಳುವುದಾದರೆ, ನಾನು ನೋಡಿದ ಸಂಜೆಯ ಎರಡು ನಾಟಕಗಳಲ್ಲಿ ನೀನಾಸಂ ತಂಡಕ್ಕಾಗಿ ಗಣೇಶ್ ಮಂದರ್ತಿ ರೂಪಿಸಿ ನಿರ್ದೇಶಿಸಿದ್ದ ಸೊಫೋಕ್ಲೀಸನ 'ಈಡಿಪಸ್' ತನ್ನ ಪ್ರಯೋಗಶೀಲತೆಯಿಂದ ಗಮನ ಸೆಳೆಯಿತು. ಮೂಲ ನಾಟಕವನ್ನು ಕಥಕ್ಕಳಿ, ಭೂತದ ಕೋಲ ಮತ್ತು ಯಕ್ಷಗಾನಗಳ ಲಯ ರೂಪಗಳಿಗೆ ಅಳವಡಿಸಿ ಪ್ರಸ್ತುತಪಡಿಸಲಾದ ಈ ನಾಟಕದಲ್ಲಿ ಲಯ ಮತ್ತು ರೂಪಗಳಿಗೆ ಹೆಚ್ಚು ಒತ್ತುಬಿದ್ದು ಮೂಲದಲ್ಲಿ ನಮ್ಮ ಎದೆ ನಡುಗಿಸುವ ನಾಟಕದ ದುರಂತ-ವಿಧಿ ವಿಲಾಸದ ವಿಕಟತೆ-ಕಳೆದುಹೋಯಿತೇನೋ ಎನ್ನಿಸಿತು. ಇದರ ಹಿಂದಿನ ದಿನ ('ನೀನಾಸಂ ತಿರುಗಾಟ'ಕ್ಕಾಗಿ ಸಿದ್ಧಪಡಿಸಿ) ಪ್ರದರ್ಶಿಸಲ್ಪಟ್ಟ ಶಕ್ತಿಭದ್ರನ 'ಆಶ್ಚರ್ಯ ಚೂಡಾಮಣಿ' ಎಂಬ ಸಂಸ್ಕೃತ ನಾಟಕದ ಕನ್ನಡ ಅವತರಣಿಕೆಯ (ವಿನ್ಯಾಸ; ಮಂಜುಕೊಡಗು, ನಿರ್ದೇಶನ ಜೋಸೆಫ್ ಜಾನ್) ಬಗ್ಗೆಯೂ ಇಲ್ಲಿ ಹೇಳಿ ಇದನ್ನು ಸ್ಪಷ್ಟಪಡಿಸಬಹುದು. ಶೂರ್ಪನಖಿ ಪ್ರಕರಣದಿಂದ ಆರಂಭವಾಗಿ ಸೀತೆಯ ಅಗ್ನಿ ಪ್ರವೇಶದವರೆಗೆ ಚಾಚಿಕೊಂಡಿರುವ ಈ 'ಆಶ್ಚರ್ಯಚೂಡಾಮಣಿ'ಯ ಅಂದಿನ ರಂಗಪ್ರಯೋಗವನ್ನು 'ವಾಲ್ಮೀಕಿ ರಾಮಾಯಣ; ಕಂಭ ರಾಮಾಯಣ, ತೊರವೆ ರಾಮಾಯಣ, ಜನಪದ ರಾಮಾಯಣಗಳಂತೆ 'ಸರ್ಕಸ್ ರಾಮಾಯಾಣ' ಎಂದು ಕರೆಯಬಹುದಾದಷ್ಟು ಕೂಡಿಯಾಟ್ಟುಂ ಸೇರಿದಂತೆ ಸಕಲ ಕರಾವಳಿ ಪ್ರದರ್ಶಕ ಕಲೆಗಳ ಜೊತೆಗೆ ಮಲ್ಲಕಂಭ ಸೇರಿದಂತೆ ವಿವಿಧ ರಂಗ ಕಸರತ್ತುಗಳಿಂದ ಕಿಕ್ಕಿರಿದು ಒಂದು 'ದೊಡ್ಡ ರಾಮಾಯಣ'ವೇ ಆಗಿ ಪರಿಣಮಿಸಿ ವೀಕ್ಷಕರ ಸಹನೆಯನ್ನು ಪರೀಕ್ಷಿಸಿತು. ನಾಟಕದ ಪಠ್ಯದ ಸಾಹಿತ್ಯಿಕ-ದಾರ್ಶನಿಕ ಸೂಕ್ಷ್ಮಗಳು ಹಿನ್ನೆಲೆಗೆ ಸರಿಯುವಂತೆ ಪ್ರದರ್ಶನವನ್ನು ಕಲಿತ ರಂಗ ಕಲೆಗಳ ಪ್ರಯೋಗಗಳಿಂದ ರೋಚಕಗೊಳಿಸುವ ಚಾಳಿ ರಂಗಭೂಮಿ ಧರ್ಮಕ್ಕೇ ವಿರುದ್ಧವಾದದ್ದೆಂದು ನಾನು ಭಾವಿಸಿದ್ದೇನೆ. ಈಡಿಪಸ್ ತನ್ನ ಗಟ್ಟಿ ವಸ್ತು ಮತ್ತು ನಟನಟಿಯರ ಅಭಿನಯ ಪ್ರತಿಭೆಗಳಿಂದಾಗಿ ಈ ದಾಳಿಯಿಂದ ಸ್ವಲ್ಪಮಟ್ಟಿಗೆ ಪಾರಾದರೆ, 'ಆಶ್ಚರ್ಯ ಚೂಡಾಮಣಿ' ಪ್ರದರ್ಶನದ ಎಲ್ಲ ಉತ್ಸಾಹದ ಹೊರತಾಗಿಯೂ ಬಸವಳಿಯಿತು. ಹಾಗೆಂದೇ ನಾನು ನನ್ನ ಪಕ್ಕದಲ್ಲೇ ನಾಟಕ ನೋಡುತ್ತಾ ಕೂತಿದ್ದ ಅಕ್ಷರ ಅವರ ಬಳಿ ಲಘು ಶೈಲಿಯಲ್ಲಿ 'ನೀನಾಸಂ ಆವರಣದಲ್ಲಿ ಸ್ವಲ್ಪ ಕಾಲ ಈ ಕರಾವಳಿ ಕಲೆಗಳನ್ನು ನಿಷೇಧಿಸಿದರೆ ಒಳ್ಳೆಯದೇನೋ!' ಎಂದೆ. ಇದನ್ನು ಗಂಭೀರ ಸಲಹೆ ಎಂದು ಅರ್ಥೈಸಿಕೊಂಡ ಅವರು 'ಹಾಗೆಲ್ಲ ಮಾಡಲಾಗದು. ಹಾಗೆ ಮಾಡಹೊರಟರೆ ಏನೆಲ್ಲ ಬಹಿಷ್ಕರಿಸಬೇಕಾದಿತು!' ಎಂದು ಸ್ವಲ್ಪ ಅಸಮಧಾನದಿಂದಲೇ ನೀಡಿದ ಪ್ರತಿಕ್ರಿಯೆ ಆ ಸಂದರ್ಭದಲ್ಲಿ ಸಹಜವೇ ಆಗಿತ್ತು.



ಇನ್ನು ಮಧ್ಯಾಹ್ನದ ಕಿರು ನಾಟಕಗಳ ಪೈಕಿ ಎಚ್.ಎಸ್. ಶಿವಪ್ರಕಾಶರ 'ಮದುವೆಯ ಹೆಣ್ಣು' ವಸ್ತುವಿನ ಮಹತ್ವಾಕಾಂಕ್ಷೆಯ ಭಾರವನ್ನು ಹೊರಲಾರದಾಗಿ ತೆಳು ದೇಹದ ಈ ನಾಟಕ ನರಳಿದರೆ ಮುಂಬೈನ ಸುಷ್ಮಿತಾ ಮುಖರ್ಜಿಯವರ 'ನಾರೀಬಾಯಿ' ಎಂಬ ಏಕವ್ಯಕ್ತಿ ಪ್ರದರ್ಶನದ ಬಹುಭಾಷಾ ನಾಟಕ ಪೂರ್ಣವಾಗಿ ಎಷ್ಟು ಜನರಿಗೆ ತಲುಪಿತೋ ತಿಳಿಯದು. ಇನ್ನು ಬಹು ಕುತೂಹಲ ಕೆರಳಿಸಿದ್ದ ವಸುಧೇಂದ್ರರ 'ಮೋಹನಸ್ವಾಮಿ' ಕಥೆಯನ್ನಾಧರಿಸಿದ ನಾಟಕವು ಪ್ರದರ್ಶನದ ನಂತರ ಬಹುಚರ್ಚೆಗೆ ಒಳಗಾಯಿತಾದರೂ ಆ ಚರ್ಚೆ ನಡೆದದ್ದು ಕಥೆಯ ವಸ್ತುವಾದ ಸಲಿಂಗ ಕಾಮ ಕುರಿತ ಸಮಾಜದ ಮಡಿ ಮೈಲಿಗೆಗಳ ಬಗ್ಗೆ; ನಾಟಕದ ಬಗ್ಗೆ ಅಲ್ಲ. ಏಕೆಂದರೆ, ಅಲ್ಲಿ ನಾಟಕವೆಂಬುದು ಅಷ್ಟಾಗಿ ಇರಲಿಲ್ಲ. ಮಹಾದೇವ ಹಡಪದ ಕಥೆಯ ನಾಯಕ ಪಾತ್ರವನ್ನು ಸಮರ್ಥವಾಗಿ ನಿರ್ವಹಿಸಿದರಾದರೂ(ನಿರ್ದೇಶನವೂ ಅವರದ್ದೇ) ಆ ಪಾತ್ರಕ್ಕೆ ಅವರ ಮುಖದ

(೧೫ನೇ ಪುಟಕ್ಕೆ

ಲಲಿತ ಪ್ರಬಂಧ

ಬಾಡೆಸ್ರು ಕನೊ ಅಪ್ಪಾ...

–ಹೆಚ್.ಆರ್. ಸುಜಾತಾ



ಮ್ಯಾಗಳ ಕೇರಿಲಿ ನೀರು ಹುಯ್ಯೋ ದಿನದ ಸಡಗರ ನಡಿತಿತ್ತು. ಆವತ್ತು ಬೆಳಗಿಂದ ಚಪ್ಪರ ಹಾಕೋರು ಹಾಕತಿದ್ರು. ಸುತ್ತಲೂ ಗಿರುಗಟ್ಲು ಹೂವ ತಂದು ಸಿಗ್ಸೋರು ಸಿಗುಸತಿದ್ರು. ಆ ಹೂವ ನೋಡತಿದ್ದಂಗೆ ಚಪ್ಪಲಿ ಹೊಲಿಯೋ ಗಾಳ ತಲಿಗೆ ಬಂದ. ಒಂದು ನೆಪ್ಪು ಹಾದುಹೋಯ್ತು.

ತಲೆ ತುಂಬ ಕೆಂಪು ಕೋಳಿ ಕೊಕ್ಕಾಂಗಿರ ಹೂವ ಮುಡಕಂದು, ಗಾಳಿ ಜೊತಿಗೆ ತೇಲೋಗಂಗಿರ ಹಸ್ರು ಎಲೆ ಪದರವಾ ಗಾಳೀ ಬೀಸಿದ ದಿಕ್ಕಿಗೇ ತೂರಕಂದು, ಆ ಬಿಸ್ಲು ಮೈಯ್ಯೇ ಕೆಂಪುಗೆ ಮೈ ನೆರೆದು ನಿಂತ ತೆರದಲ್ಲಿ ಒಂದು ಗಾಳಿ ಗಿರಗಟ್ಲೆ ಮರ ಆಲೂರು ಬಸ್ಸ್ಟ್ಯಾಂಡಲ್ಲಿ ಇತ್ತು. ರುತುಮತಿಯಾದ ಹರೇದ ಹೆಣ್ಣು ಅವರವ್ವನ ಕೈಲಿ ಮಿಂದು ಮಡಿಯುಟ್ಟು ಹೂ ಮುಡುಸ್ಕಂದು ಬಂದು ನೆಲ್ಲು ಕೊಟ್ಕಂಡು ನಿಂತಂಗೆ ಅದು ಅಲ್ಲಿ ನಿಂತಿರೋದು. ಅದರ ಕೆಳಗೆ ಗಾಳ ಒಂದು ಸಣ್ಣ ಮಸೆಕಲ್ಲುನೂವೆ, ಪಕ್ಕದಾಗೆ ನೀರ ತುಂಬಿರೋ ಒಂದು ಸಣ್ಣ ಗಲ್ಲೇಬಾನಿನೂವೆ ಇಟ್ಕಂಡು ಚಪ್ಪಲಿ ಹೊಲಿಯೋ ಚೂಜಿ ದಬ್ಬಣ ಕುಟ್ಬೋ ಹತಾರವಾ ಹರವಕಂಡು.... ಒಂದೆರ್ಡು ಜೊತೆ ಯಾರೋ ಬಿಟ್ಟುಹೋಗಿರೋ ಬ್ಯಾಡದಿರ ಹಳೆ ಚಪ್ಪಲಿಯ....ಪಕ್ಕಕ್ಕೆ ಮಡಿಕ್ಕಂಡೂ....ತನ್ನ ಬಾಳಾಟ ತೋರೋ ತೆರದಲ್ಲಿ ಅಲ್ಲಿ ಕುಂತಿರೋನು.

ಇಂಥ ಪಾಪಿ ಪರದೇಸಿಗೆ ಗುರುತು ಕೊಟ್ಟಿರೋ ಈ ಛತ್ರಿ ಮರವ ಹಾಕದೋರು ನಮ್ಮೋರಲ್ಲ. ಬ್ರಿಟೀಸ್ನೋರು. ಇವು ಅಂಥ ಗಟ್ಟಿ ಮರಲ್ಲ ಅಂತವ ನಮ್ಮಪ್ಪ ಬೆಟ್ಟ ಹಿಡಕಂದು ಪ್ಯಾಟೆ ಬಸ್ಸ ಹತ್ತುವಾಗೆಲ್ಲ ಹೇಳದು. ನಾವು ಬಸ್ ಕಾಯ್ತಾ ಆ ಮರದ ಕೆಳಗಡೆ ನಿಲ್ಲೂವಿ. ಆಗ ಚಪ್ಪಲಿ ಹೊಲ್ಸದೋರು ನಾಕಾಣೆ, ಎಂಟಾಣೆ ಕೊಡೋಕೆ ಗಾಳನ ತಾವ ಗಿಂಜಾಡತಿರರು. ಆಗ ಅಪ್ಪನ ಕೈಲಿ ಅವನು ದೂರ ಹೇಳನು.

"ಅಲ್ಲಾ ಕನಿ ಭೀರ್ಮಣ್ಣರೇ, ಚಪ್ಲಿ ಯಾ ಕಡಿಂದ ನೋಡುದ್ರೂವೆ ಹೊಲಿಗೆ ಹಾಕಂಗಿತ್ತೆನಿ. ಅದರ ಮಯ್ಯಲ್ಲಿ ಒಂದ ಕಡೇನಾರ ತ್ಯಾಪೇ ಹಾಕದಿರ ತಾವು ಇತ್ತೇನಿ. ನೀವೆ ಯೋಳಿ. ಅದರ ಮೈಗೆಲ್ಲ ದಾರ ನೇದು ನೇದು ನನ್ನ ದಾರದ ಉಂಡೆ ಮುಗದೋತು ಅಂತೀನಿ. ಅದೂವೆ ಹೋಕ್ಕಳ್ಲಿ, ದಾರಕ್ಕೆ ತಗಳೋ ಎಂಟಾಣೆ ಕೊಡಕ್ಕೆ ಅಳ್ತಾರಲ್ಲಿ. ಕಾಸುಕಾಸಿಗೆ ಇಂಗಾಡುಬುಟ್ರೆ ಇವರ್ನೆ ನಂಬಕಂದು ಕುಂತ ನಮ್ಮ ಹೊಟ್ಟೆ ಗತಿ ಯೋನು ಯೇಳಿ. ನಾವೇನು ಇವ್ರಂಗೆ ಮಳೆಬೆಳೆ ನಂಬಿ ಜೀವ ತೇಯತೀವ.... ಏನ್ ಮಾಡದು? ಇದ್ದೋರ– ಸತ್ತೋರ ತೊಗಲು ನಂಬಕಂದು ಬದುಕು ಮಾಡೋ ಕುಲಕಸಬುನೋರು ಇವ್ರು ಅಂತಲಾದರೂವೆ.... ಒಂದೀಟಾರೂ ಕರುಣೆ ಬ್ಯಾಡವೇನಿ?" ಗೋಳಾಡ್ದ.

"ಅವನತ್ರ ಇದ್ರಲ್ವೇನೋ ನಿಂಗ ಕೊಡತಾನೆ. ಏನೋ ಮೆಟ್ಟ ಮೆಟ್ಕಂದೇ ಓಡ್ಯಾಡಬೇಕು ಅನ್ನ ಆಸೆ. ಅದಕ್ಕೇ ಬಂದು ನಿಂತವ ಗುಂಜಾಡತಾನೆ. ಆಚಿಗೆ ಎಸ್ದರೆ ಇನ್ನೊಂದು ತಕಬೇಕಲ್ಲ ಅಂತ ಅವನು ಒದ್ದಾಡತಾನೆ." ಅಂದು ಅಲ್ಲೇ ಮಾರಾಟಕ್ಕೆ ಇದ್ದ ಚುಕ್ಕಿಬಾಳೆ ಹಣ್ಣ ತಗಂದು ನನಗೊಂದು, ಅವ್ನಗೊಂದು ಕೊಟ್ಟು, ತಾನೊಂದು ತಿಂತು. ಅದನ್ನ ಸಿಪ್ಪೆ ಸುಲಕಂದು ತಿಂತ ತಿಂತ ಅವ್ನು

"ಈ ಸಲ ಮಳೆ ಜೋರಾಗಿರಂಗೆ..... ಕಾಣತೀತೆ ಕನಿ. ಎಂಗೋ ಎಲ್ರೂ ಬದಿಕ್ಕತರೆ. ಕೊಡಿ ಇಲ್ಲಿ...ನೆನ್ನೆ ಜಿಸ ಅಂದ್ರಲ್ಲ, ಬೂಟಿಗೆ ಅಟ್ಟೆ ಕಟ್ಕೊಡತೀನಿ."

ಬೆಳಿಗ್ಗಿನ ಬಿಸಲಲ್ಲಿ ಬೆಂದ ಮದ್ವೆಮನೆ ಕಾರ್ಯ ಈಗ ಇರುಳಲ್ಲಿ ಗಂಡಿಗೆ ಹಸೆ ಹಾಕುದ ಕೂಡ್ಲೆ ಊಟಕ್ಕೆ ಜನವ ಎಬ್ಬುಸ್ತಾ ಇತ್ತು. ಕಣದ ಹೊಲದಲ್ಲಿ ಹುಲ್ಲ ಹಾಸಿ ಪಂಕ್ತಿ ಕೂರಕ್ಕೆ ಅಣಿ ಮಾಡಿರರು. ಅದರ ಮ್ಯಾಲೆ ಕುಂತು ಉಂಡು ಹೋದ ಊರೋರ, ನೆಂಟರ ಊಟ ಆಗೋ ಹೊತ್ಗೆ ರಾತ್ರಿ ಅನ್ನದು ಎಲ್ರು ಕಣ್ಣಲ್ಲಿ ಇಳೆಬಿದ್ದು ಹಂಗೆ ಜೋತಾಡತಿರದು. ಆ ಹೊತ್ನಲ್ಲಿ ಊರ ಹೊಲಗೇರಿ ಜನೆಲ್ಲರೂವೆ ಪಂಕ್ತಿ ಹಿಡದು ಉಣ್ಣತಾ ಇದ್ರು. ಅದ್ರಲ್ಲಿ ಒಬ್ಬ ಮಾತ್ರ ತನ್ನ ಮಗಿನ ಎಬ್ಬಸಕ್ಕೆ ಹರಸಾಹಸ ಮಾಡತಾ ಇದ್ದ.

"ಅಪ್ಪಾ, ಬುಡೋ ಕಣ್ಣ, ತಿನ್ನೋ ಚಿಚ್ಚಿಯಾ"

"ಇಲ್ಲಾ ಕನೋ, ಬಸ್ ಬರ ಹೊತ್ತಾಯ್ತು. ಮಗ ಕರ್ಕೊರ್ ಹೋಗಿ ಬುಟ್ಟುಬರಬೇಕು ಹಾಸನಕ್ಕೆ. ನಾಳಿಂದ ಸ್ಕೂಲು ಶುರುವಾತೀತೆ. ಪುರುಸೊತ್ತಾದಾಗ ಮಾಡುಸ್ಕಂದ್ರಾತು ಬುಡು. ಈ ಬಟ್ಟೆ ಬೂಟು ಬಾಳಿಕೆ ಬರಕ್ಕುಲ್ಲ. ಚಪ್ಪಲಿ ಮೆಟ್ಕಂದ್ರೆ ನನಗೆ ಆಗಕುಲ್ಲ. ಗುಡ್ಡದ ತೆಗ್ಗಲ್ಲಿ ಆ ಕಲ್ಲು ನುರಜಾ ತುಳುದು ತುಳುದು ಅಂಗಾಲಲ್ಲಿ ಕಲ್ಲೊತ್ತು ಆಗಬುಟ್ಟವೆ. ಮೆತ್ತನೆ ಬಟ್ಟೆ ಬೂಟೇ ಆಗಬೇಕು. ಇವು ಮಳೆ ದಿನಕ್ಕೆ ಆಗಕುಲ್ಲ, ಏನ್ ಮಾಡತೀಯ? ಆಗ್ಲೆ ಅಟ್ಟೆ ಸವದವೆ. ನಾಳಿಕೆ ನಿಂತು ಆಕಸ್ಕತೀನಿ."

ಅಷ್ಟೊತ್ತಿಗೆ ಹಾರನ್ ಊದಕಂದು ಬಂದ ಬಸ್ಸಿಗೆ ಅಪ್ಪ ನಾನು ಹತ್ತಕಂದ್ವಿ.

ಈ ಚಪ್ಪಲಿ ಹೊಲಿಯೋ ಗಾಳ ಅನ್ನೋ ವಾರುಸುದಾರ ಕೂರುತಿದ್ದಂಥ ಆಲೂರಿನ ಗಾಳಿಗಿರಗಟ್ಲೆ ಹೂವಿನ ಮರ ಒಂದು ನಮ್ಮೂರಲ್ಲೂ ಈತೆ ಗುಡ್ಡದ ಆ ಕಡಿಕೆ! ಅಲ್ಲಿಂದ ಮೂಟೆಗಟ್ಲೆ ಹೂವ ತಂದು ಮದ್ವೆ ಮನೆ ಚಪ್ಪರಕ್ಕೆ ಗೊಂಚಗೊಂಚಲ ಮಾಡಿ ತೂಗ ಬುಟ್ಟರೋ ಚಂದಕ್ಕೆ ಅಣ್ಣತಮ್ಮರ ಮನೇರೆಲ್ಲಾ ಹೊಸಬಟ್ಟೆ ಇಕ್ಕಂದು ವೈನಾಗಿ ತಲೆ ಕೆರ್ಕಂದು ಮದ್ವೆಮನೇರು ಕೊಟ್ಟ ಹೋವಿನ ಸರವ ತಲಿಗೆ ನೇತುಬುಟ್ಕಂದು...ಹೆಣ್ಣಮಕ್ಳು ಸರಬರನೆ ನಿರಿಗೆ ಗಳಿಗೆಯ ಸದ್ದು ಮಾಡಕಂದು ಓಡಾಡತಿದ್ರೆ ಅವರ ಮಯ್ಯ ಗಂಧಕ್ಕೆ ಬಂದ ನೆಂಟರ ತುಂಡು ಹುಡ್ಲು ಅವರ ಸುತ್ತಾಲೇ ಗಿರಕಿ ಹೊಡಿತಿರವು. ಇದು ತಮ್ಮ ಮುಂದಿನ ಬದುಕು ಮಾಡೋ ದಿಕ್ಕಿನ ಹುಡುಕಾಟ ಅನ್ನದು ಗೊತ್ತಾಗದಂಗೆ ಆ ಕತ್ತಲು ಅನ್ನದು ಒಂದು ಮೋಜಿನ ಪರದೆಯ ಇಳೆ ಬುಟಕಂಡು ಅವರ ಮೇಲೆ ತನ್ನ ಚಿಕ್ಕಿ ಕಣ್ಣ ತಂದು ಬುಟ್ಟಿತ್ತು.

ಮೈ ಸವರ್ಕಂಡು ಕಾಣದರಂಗೆ ಹೋಗದೇನು? ಸುತ್ತುಬಳಸಿ ಅವರ ಮಖದ ಮೇಲೆ ಮುಳ್ಳು ಬಿಡಕ್ಕೆ ಓಡಾಡೋ ಜೇನು ಹುಳಿನಂಗೆ ಜೀಗುಟ್ಕಂದು ಗಾರು ಹೊಡ್ಯದೇನು? ಮೀಸೆ ಹಲ್ಲಲ್ಲಿ ಕಚ್ಚಂದು ತಮ್ಮಾಸೆಯ ತಾವೆ ನುಂಗಕೊಳದೇನು? ಅರಶ್ನದೆಣ್ಣೆ ತಿಕ್ಕಿ ಗಂಡಿಗೆ ನೀರು ಹುಯ್ಯೋ ನೆವದಲ್ಲಿ ಅಡ್ಡಾಡೋ ಹೆಣ್ಣುಗಳಿಗೆ ಎಣ್ಣೆನೂ ನೀರನೂ ಉಗ್ಗಿ "ಥೂ....ನನ್ನ ಹಾಟಗಳ್ಳ" ಅಂತ ಬಯ್ಯಸ್ಕಂಡು ನಕ್ಕು ನಲಿಯಾದೇನು? ಮಾಡ ಮಳ್ಳಾಟವ ಮಾಡಿ ಯಾರದಾರ ಕಣ್ಣಿಗೆ ಬೀಳೋ ಮುಂಚೆಲೆ ಗಾಳಿಲಿ ಆಚಿಗೆ ಹೋತಿರ ಸೋಬಾನೆ ಸ್ವರದ ಜೊತಿಗೆ ಮದ್ವೆ ಮನೆ ಕೊಟ್ಗೆ ದಿಕ್ಕಿಗೆ ನಗೆ ಅರಳಸ್ತಾ ಓಡಿ ಹೋಗೋ ಗಂಡ್ಗಳು ಗ್ವಾಡೆ ದಾಟಿ ಮರೆಯಾಗದು ಅಲ್ಲದೆ, ಅಲ್ಲಿ ಬೇಯ್ತಿರೊ ಕುರಿ ಕೋಳಿ ಘಮನಕ್ಕೆ ಹಸಿವಿನ ಕಣ್ಣು ತೆರಕಂದು, ಹೆಣ್ಣುಹುಡ್ಲು ನೋಡಿ ಹರಸಿದ ಬಾಯನೀರ ಇಲ್ಲಿ ಸೋರಿ.....ಬುಟ್ಟುಬುಡೋರು.

ಬೆಳಿಗ್ಗಿನ ಬಿಸಲಲ್ಲಿ ಬೆಂದ ಮದ್ವೆಮನೆ ಕಾರ್ಯ ಈಗ ಇರುಳಲ್ಲಿ ಗಂಡಿಗೆ ಹಸೆ ಹಾಕುದ ಕೂಡ್ಲೆ ಊಟಕ್ಕೆ ಜನವ ಎಬ್ಬುಸ್ತಾ ಇತ್ತು. ಕಣದ ಹೊಲದಲ್ಲಿ ಹುಲ್ಲ ಹಾಸಿ ಪಂಕ್ತಿ ಕೂರಕ್ಕೆ ಅಣಿ ಮಾಡಿರರು. ಅದರ ಮ್ಯಾಲೆ ಕುಂತು ಉಂಡು ಹೋದ ಊರೋರ, ನೆಂಟರ ಊಟ ಆಗೋ ಹೊತ್ಗೆ ರಾತ್ರಿ ಅನ್ನದು ಎಲ್ರು ಕಣ್ಣಲ್ಲಿ ಇಳೆಬಿದ್ದು ಹಂಗೆ ಜೋತಾಡತಿರದು. ಆ ಹೊತ್ನಲ್ಲಿ ಊರ ಹೊಲಗೇರಿ ಜನೆಲ್ಲರೂವೆ ಪಂಕ್ತಿ ಹಿಡದು ಉಣ್ಣತಾ ಇದ್ರು. ಅದ್ರಲ್ಲಿ ಒಬ್ಬ ಮಾತ್ರ ತನ್ನ ಮಗಿನ ಎಬ್ಬಸಕ್ಕೆ ಹರಸಾಹಸ ಮಾಡತಾ ಇದ್ದ.

"ಅಪ್ಪಾ, ಬುಡೋ ಕಣ್ಣ, ತಿನ್ನೋ ಚಿಚ್ಚಿಯಾ"

ಅಪ್ಪಲೋ, ಮಗಾ.... ಬಾಡೆಸ್ರು ಕಣೋ... ಎದ್ದೇಳು... ಬುಡೋ ಕಣ್ಣಾ, ತಿನ್ನೋ ಚಿಚ್ಚೀಯಾ...

ಇಲ್ನೋಡವ್ವಾ ಇಲ್ನೋಡು ... ಬಾಯ ಆ ಅನ್ನು."

ಬಾಡೆಸ್ರು ಘಮನಕ್ಕೆ ಊರೇ ಕಣ್ ಬುಟ್ಕಂಡು ಕಾಯ್ತಿದ್ರೆ..., ನಾಯಿ ನರಿ ಸೈತಾ ನಾಲಿಗೆ ತುದೀಲಿ ನೀರ ಇಳೆಬುಟ್ಕಂಡು ಕುಂತಿದ್ರೆ, ಈ ಮಗ ಅನ್ನದು ಬೆಳಿಗ್ಗಿಂದ ಚಪ್ಪರದಂಡೀಲಿ ಕುಣದು, ವಾದ್ಯದೋರ ಜತೇಲೆ ಅಳ್ಳಾಡಕಂದು ಇದ್ದು.... ತಾರಾಮಾರಾ ತಮ್ಮಟೆ ಹೊಡ್ಯೋರಗಿಂತಲೂ ಮೈ ಕೈಯ್ಯ ಕುಣಸಿ ಕಾಲ ಕುಪ್ಪಳಿಸಿ ಸೋತು ಸುಣ್ಣಾಗಿ ಬೆಳಕಿನ ಕಣ್ಮುಚ್ಚಿ ಮೈ ಮೇಲೆ ನವರಿಲ್ಲದಂಗೆ ಆ ಹುಲ್ಲ ಮೇಲೆ ಬೀಸೋ ಗಾಳಿಯ ತೊಟ್ಲು ಮಾಡಕಂಡು ಕತ್ತಲ ಜೋಲಿಲಿ

ನಿದ್ದೆಹೋಗಿರೋದು. ಅದರ ಕನಸಲ್ಲಿ ಅದು ಮುಳುಗಿಹೋಗಿರೋದು. ಅವರಪ್ಪನ ಹಲುಬ ಕೇಳಿ ಉಣ್ಣಕ್ಕೆ ಕುಂತಿದ್ದ ವಾದ್ಯದ ಕುಣಿಯ ನೆಗಾಡದ.

"ಬುಡೋ ಜವರ, ಮಗಿಗೆ ಯಾಕೆ ಹಿವಚಿ ಕೊಟ್ಟೀಯಾ.... ನಿದ್ದೆ ಕಣ್ಣ ಬುಡನಾರದು. ಮಲಿಕ್ಕಲ್ಲಿ. ಏನು? ಕುಣಿತು ಕುಣಿತು. ಅದುಕ್ಕೆ ಆ ಕಾಲು ಕಯ್ಯಲ್ಲಿ ಏನು ಶಕ್ತಿ ಕೊಟ್ಟೋನೋ ಆ ದ್ಯಾವ್ರು, ಏನ್ ಮಟ್ಟಿಗೆ ಕುಣಿತು ಅಂತಿಯ. ನಮಗೆ ತಮ್ಮಟೆ ಬಡದು ಬಡದು ಕೈ ಸೋಲು ಬಂದ್ವು. ಅದುಕ್ಕೆ ಕಾಲು ಸೋಲ್ಲಿಲ್ಲ. ಮುಂದೆ ಒಳ್ಳೆ ಕಲೆಗಾರ ಆತನೆ ಕಣೋ...."

ಮಗಿನ ಅಪ್ಪಂಗೆ ಒಂದೇ ಧಾವಂತ. ಹಾಕೋ ಮೂರ್ನಾಕು ತುಂಡು ಬಾಡ, ಮಗಿನ ಬಾಯಿಗೆ ನಂಚ್ಕಳಕೆ ಕೊಟ್ಟು ....ತಾನು ಬಾಡು ಮೈ ಬುಟ್ಟಿರೋ ಗಮಲ ಎಸರಲ್ಲೇ ಅನ್ನ ಉಣ್ಕಳೂನಿ, ಅದರ ಬಾಯ ಚಪಲವೂ ತೀರದು ಅನಕಂದು ಆ ಕತ್ತಲ ಸೆರಗಲ್ಲಿ ಲಾಟೀನು ಬೆಳಕಲ್ಲಿ ಅವನು ಮಾಡಿದ ಪ್ರಯತ್ನೆಲ್ಲಾ ಕನಸಿನ ಮಾತಂಗೆ ಊರ ಕಿವಿಲಿ ಮರಿದಂಗೆ ಅಂದಿಂದ ಅಂಗೇ ಉಳದೋತು.

ಆಗಾಗ್ಗೆ, ಊರು ಬಾಯಿ ಅದ ನೆನಸ್ಕಂಡು, ಆ ಮಾತ ಮಗಚು ಹಾಕ್ಕಂಡು, ನಗಾಡೋ ಹಂಗೆ....ಅದು ಉಳಕತು. ಅಂತೂ ಇಂತೂ ಮಗಿನ ಕಣ್ಣ ಬುಡಸಕ್ಕೆ ಆಗದೆ.... ಅಲ್ಲೇ ಇದ್ದ ಜೊನ್ನೆ ಸಾರ ಅನ್ನಕ್ಕೆ ಬುಟ್ಕಂದು, ತನ್ನ ಜೋಳಿಗೇಗೆ ಬಾಡ ತೆಗದು ಇಟ್ಕಂದ. ಅದ ನೋಡಿದ ಹಿರೇರೊಬ್ರು ಸಣ್ಣೀರ ಕೈ ತೊಳದು ಬಂದ ಮ್ಯಾಕೆ, ಒಂದು ತ್ಯಾಗದ ಎಲಿಗೆ ಅನ್ನನೂವೆ, ಇನ್ನೊಂಜನ್ನಿ ಎಸ್ರುನ್ನೂವೆ ಇಟ್ಟು ಅದರೊಳಿಕೆ ಒಂದೆರ್ಡು ಬಾಡಿನ ತುಂಡ ಇಳಿಬುಟ್ರು,

"ಮನಿಗೋಗಿ ಮಗಿಗೆ ತಿನ್ನುಸ್ಕಳ. ಹಸ್ಕಂಡು ಮಲಗೀತೆ ಮಗ".

ಅಲ್ಲಿ ಎಲೆ ಎಸೆದ ಜಾಗದಲ್ಲಿ ಕಚ್ಚಾಡೋ ನಾಯ್ಗಳ "ಕುರ್ಯಾ..... ನಿನ್ನವಸಡ್ಡಾ...." ಅನ್ನ ಆಡು ಬೈಗಳವ ಅವುಗಳ ಮೇಲೆ ಬಿಸಾಕಿ, ಕೊಟ್ಟ ಬುತ್ತಿಗೆ ಜೊನ್ನೀಲಿ ಎತ್ತಿಟ್ಕಂದಿದ್ದ ಬಾಡಿನ ತುಂಡುನ್ನೂವೆ ಸುರಕಂದು, ತುಳಕದಂಗೆ ಹಿಡಕಂದೇ.... ಸಣ್ಣೀರ ತನ್ನ ಮಗವ ಹೆಗಲಲ್ಲಿ ಅವಚ್ಕಂದು ಕತ್ತಲ ದಾರೀಲಿ ಬಂದೋರ ಜೊತೇಲಿ ತಂಪಾಗಿ ಸಾಗೋವಾಗ, ಮನೆ ಬಾಗಲಲ್ಲಿ ಹಾಡತಿದ್ದ ಸೋಬಾನೆ ಪದ ಬಂದಾಗಿತ್ತು.

ಮದ್ವೆ ಮನೆ ಸಡಗರ ಮಾಡಿದ್ದ ಆ ಎಂಗುಸ್ರನೂವೆ.... ಊಟದುಸ್ತವಾರಿ ಮಾಡುದ ಹಿರೇ ಜೀವಗಳನೂವೆ ಕೂರುಸಿ ಬೇಕಾದ್ದ ಕೇಳಿ... ಕೊನೇ ಪಂಕ್ತಿ ಹೊಟ್ಟೆಗೆ ಊರು ಉಣ್ಣಕ್ಕಕತಿತ್ತು. ಬೆಳಗಾನೆ ಗುಡುಗುಟ್ಟ್ಕಂಡು ಮಾಡೋ ಶಾಸ್ತ್ರ ವಳಗೆ ಇನ್ನೂ ಕಾಯತಿದ್ವು, ಆದರೆ ಇಲ್ಲಿ ಕೋಳ್ಕೂಗೋ ಹೊತ್ತಿಗೇ... ಮದ್ವೆ ಮನೆ ಗಾಡಗಳ ಹೂಡಿ..... ಊರಜನ ಕರಕಂದು ಮದ್ವೆ ಚಪ್ರಕ್ಕೆ ಹೋಗ ತಯ್ಯಾರಿ ಮಾತಾಡತಾ.... ಹಿರೀಕರು ಉಣ್ಣುತಿದ್ರು, ಅವ್ರಿಗೆ ಇವತ್ತು ಬಾಡೆಸ್ರು ಮ್ಯಾಲೆ ಗಮನ ಇರ್ನಿಲ್ಲ. ಮದ್ವೆ ಮಾಡಿ ಮುಗುಸೋ ಹೊರೆ ಅವರ ಹೆಗಲ ಮ್ಯಾಲಿದ್ದು ಮನಸ್ಸು ಮುಂದಿನ ಕಾಯಕದ ಎಚ್ಚರದಲ್ಲೇ ಇತ್ತು. ಒಂದನೇ ಜಾವ ಎರಡನೇ ಜಾವದಾಗೇ ಕೋಳಿ ತಿಕಕ್ಕೆ ಮದ್ವೆ ಮನೆ ವಾದ್ಯಗಳು ನಿದ್ಗಣ್ಣಲ್ಲಿ ಕನಸಿನ ಥರದಲ್ಲಿ

ಕಿವಿಗೆ ಕೇಳುಸ್ತಿದ್ದಂಗೆ ಮೈಗೆ ಛಳಿ ಬಂದು ಒದ್ದಂಗೆ ತಾಗಿದ್ದೇಯ ರಗ್ಗ ಗಟ್ಟಿಯಾಗಿ ಸುತ್ಕಂಡು ಮಲಕ್ಕಂಡಿದ್ವಿ.

ಬೆಳಗಾಗೆದ್ದು ನಮ್ಮನೇ ಏಣಿರೂಮಲ್ಲಿ ಬಿಚ್ಚಿರೊ ಹಾಸಿಗೇನ ಸುತ್ತಿಡದಂಗೆ, ಅದರ ಮೇಲೆ ಕಾಲು ನೀಡಕಂದು ನಾನಾ ಭಂಗಿಯ ಮುಖದಲ್ಲಿ ನಗೆ ಅನ್ನದು ಬಿದ್ದುಎದ್ದು ಉರುಳಾಡತಿತ್ತು. ಯಾಕಿಂಗೆ ನಗ್ತಿದಾರೆ ಅಂತ ನಾನೂ ಎಚ್ಚರಾಗಿ ಕಣ್ಣು ಬುಟ್ರೆ ತವರ ಮನೆ ಸುಖ ಎಲ್ರಿಗೂ ಕಚಗುಳಿ ಇಡತಾ ಇತ್ತು. ಅದು ಏನಪ್ಪಾ ಅಂದ್ರೆ ಮೂರನೆ ಅಣ್ಣನ ಮಗ ಚಿಕ್ಕದು ಮೂರು ವರುಶದ್ದು. ಎರಡನೆ ಅಣ್ಣನ ಕೈ ಬಿಡದೆ

"ನಾನೂ ಬರ್ತೀನಿ ದೊಡ್ಡಪ್ಪ." ಅನ್ನಕಂದು ಹಿಂದ್ಲ ದಿಸದ ಮದ್ವೆಮನೆ ದೇವರೂಟಕ್ಕೆ ಹೋಗೀತೆ.

ಅಲ್ಲಿ ಸಾರು ಸಾಲಕುಲ್ವೇನೋ.... ಎಚ್ಚಾಗಿ ಜನ ಬಂದವರೆ ಅಂತ ಸಾರಿಗೆ ನೀರ ಕಾಯ್ಸಿ ಕೂಡಸಿ ಹುಯ್ದವರೆ. ಸಾರು ತೆಳ್ಳಗಾಗಿತ್ತಲ್ಲ. ನಮ್ಮನೆ ಮಗ ಜೊನ್ನೆಗೆ ಬುಟ್ಟ ಸಾರ ಎತ್ತಿ ಎತ್ತಿ ಕುಡ್ಕಳದಂತೆ. ಅವರು ಪಂಕ್ತಿ ಮೇಲೆ ಸಾರು ತಂದಂಗೆ ತಂದಂಗೆ ಇದು ಸಾರು ಸಾರು ಅನ್ನಕಂದು ಕುಡ್ಯದಂತೆ. ಎಲ್ರೂ ಇದ ನೋಡಿ ನಗಾಡುದ್ರ ಮಗ ಮೇಕಲ್ಲಿ ಇನ್ನೂವೆ ಸೊರ್ ಅಂತ ಕುಡಕಳದಂತೆ. ಮಗಿನ್ ಕಣ್ಣು ಮೂಗಲ್ಲಿ ನೀರು ಸುರ್ಯದ ನೋಡಿ ಅಣ್ಣ ಅತ್ಲಾಗಿ ....ಊಟ ಅರ್ಧಕ್ಕೆ ಬುಟ್ಟು ಎದ್ದು ಬಂತಂತೆ.

"ಒಂದು ಖಂಡುಗ ನಾಚುಗೆ ಆಗಿರದು ನಂಗೆ. ಅಂಗೂ ಯಾರೋ ಅಂದೇಬುಟ್ರು, ದೊಡ್ಡೋರ ಮನೆ ಹುಡುಗ ಬರಗೆಟ್ಟಂಗೆ ಬಾಡೆಸ್ರು ಕುಡಿತಾ ಈತೆ ನೋಡ ಅಲ್ಲೀ... ಏನಪ್ಪಾ? ಏಸು ವರ್ಷ ಆತು ಮನೇಲಿ ನೆಂಟರುಮಕ್ಕಳಿಗೆ ಕೋಳಿ ಕೂದು" ಅಂತವ ನಗೆ ಚಾಟಿಕೆ ಮಾಡಿದ್ರೆ ಎಲ್ಲಾ ಹೋ ಅಂತ ನಗಾಡುಬುಟ್ರಂತೆ.

ಎರಡನೇ ಅಣ್ಣ ಅದನ್ನ ನಕ್ಕಂಡು ಹೇಳ್ತಾ ಇದ್ರೆ ಎಲ್ಲಾ ಬಿದ್ದೂ ಬಿದ್ದೂ ನಗ್ತಿದ್ರು, ಅವರ ಅಪ್ಪಾ ಅಮ್ಮನೂ ಹೋ ಅಂತ ನಗತಿದ್ರು. ಆದ್ರೆ ಏನೂ ಅರಿದಿರ ಮಗ ಕೈಕಾಲ ಬಿಸಾಕಂದು ನಿದ್ದೆಗಣ್ಣಲ್ಲಿ ಬೆಳಗಿನ ಸೂರಪ್ಪನಂಗೆ ಎಳೆ ಬಿಸ್ಲು ನಗೆಯ ಮುಖದ ಮೇಲೆ ಅರುಳುಸ್ತಾ ಮಲಗಿತ್ತು.

ಆ ಹೊತ್ತಿಗೆ ಅಲ್ಲಿಗೆ ಬಂದ ನನ್ನ ದೊಡ್ಡಕ್ಕ ,

"ಆಹಾಹಾ...... ನೀನೇನು ಕಡಿಮೆ ಏನಪ್ಪಾ....ಚಿಕ್ಕೋನಾಗಿದ್ದಾಗ ಮನೇಲಿ ಮಾಂಸಸಾರು ಮಾಡುದ್ರೆ ಸಾಕು. ದಿನಕ್ಕೆ ನಾಕೈದು ಸಲ ಕೈಗೆ ತಟ್ಟೆ ತಗಳೂವೆ" ಅಂದಾಗ ಅಣ್ಣನ್ನೂ ಸೇರಿ ಎಲ್ಲಾ ಗೊಳ್ ಅಂತ ನಗಾಡುದ್ರು.

ಒಳಗಿಂದ ಕಾಪಿ ಲೋಟಗಳ ತಟ್ಟೆಗೆ ಜೋಡುಸ್ಕಂದು ತಂದ ಅತ್ತಿಗೆ "ನಿಮ್ಮವ್ವಾರು ಕರಿತಾವರೆ ಬನ್ನಿ ಅಕ್ಕ. ನಾನು ರೊಟ್ಟಿ ಹಿಟ್ಟು ಮಿದ್ದಕತೀನಿ. ನೀವು ಕೈಮ ಚೆನ್ನಾಗ ಮಾಡತೀರ. ಖಾರಕ್ಕ ಹಾಕ್ಕೊಡಿ. ರಾತ್ರಿ ಉಳಿದಿದ್ದ ನಾಟಿ ಕೋಳಿ ಗೊಜ್ಜು ಕುದ್ಯಕೆ ಇಟ್ಟು ಬಂದಿದೀನಿ." ಅನ್ನಕಂದೆ ಎಲ್ರಿಗೂ ಕಾಪಿ ಲೋಟ ಕೈಗಿಟ್ಟರು. ಅಡಿಗೆ ಮನೆಲಿ ಬೇಯಕ್ಕಿಟ್ಟ ಬಾಡೆಸ್ರು ಘಮ ಆಚೆಲಿದ್ದ ಎಲ್ರೂ ಮೂಗನ ಅಂಗೇ, ಸೋಕತಾ ಇದ್ದಂಗೆ..... ಕಣ್ಣು ಅಗಲ ಮಾಡಿ ಮೂಗ ಅಳ್ಳುಸ್ಕಂದು ಎಲ್ರೂ ಜೋರಾಗಿ ನಕ್ಕರು. ಮಲಗಿದ್ದ ಮಗ ಬೆಚ್ಚಿ ಕಣ್ ಬುಡತು. ಎಲ್ರೂ ಮೇಲೂ ಒಂದು ಮಳ್ಳುನಗೆಯ ಒಗದು ಎದ್ದು ಕುಂತ್ಕತು.



ಆವತ್ತಿಂದ ಇವತ್ತಿನ ವರಗೂವೆ ನಮ್ಮೂರಲ್ಲಿ ಸಣ್ಣೀರನ "ಬುಡೋ ಕಣ್ಣ, ತಿನ್ನೋ ಚಿಚ್ಚಿಯಾ ?" ಅನ್ನೋ ಮಾತು .. ಮಕ್ಳಿಗೆ ಉಣುಸುವಾಗ ಗಾದೆ ಮಾತಂಗೆ ಉಳ್ಕೋಗೀತೆ.

(ಲೇಖಕಿ ಹೆಚ್. ಆರ್ ಸುಜಾತಾ ಹಾಸನದ ಮಲೆನಾಡ ಸೀಮೆಯ ಅಪ್ಪಟ ಆಡು ಭಾಷೆಯ ಸೊಗಡಿನಲ್ಲಿ ಲಲಿತ ಪ್ರಬಂಧಗಳನ್ನೂ ಬರೆಯುತ್ತಿರುವ ಭರವಸೆಯ ಕವಯತ್ರಿ)

೧೩ನೇ ಪುಟದಿಂದ)

'ಕಳೆ' ಹೊಂದದಂತೆ ಕಂಡು ನಾಟಕದ ಕಥೆಯ 'ನಿಜತ್ವ'ಕ್ಕೆ ಪೆಟ್ಟುಕೊಟ್ಟಿತು ಎಂದೇ ಹೇಳಬೇಕು. ಹಾಗೆ ನೋಡಿದರೆ 'ಮೋಹನ ಸ್ವಾಮಿ' ವಸುಧೇಂದ್ರರ ಒಳ್ಳೆಯ ಕಥೆಗಳಲ್ಲೊಂದೇನೂ ಅಲ್ಲ. ಅದರಲ್ಲಿ ಸಲಿಂಗ ಕಾಮಿಯೊಬ್ಬನ ಸಾಮಾಜಿಕ ಅಸಹಾಯಕತೆ ಮತ್ತು ಗೋಳಿನ ಹೊರತಾಗಿ ಮತ್ತೇನೂ ಇಲ್ಲ. ಕಥೆಯನ್ನು 'ಪರಿಣಾಮಕಾರಿ' ಮಾಡಲು ಅಲ್ಲಲ್ಲಿ ಲೈಂಗಿಕ ವಿವರಗಳಿಗೆ ಮೊರೆಹೋಗಿರುವುದು ಕಥೆಯಾಗಲು ಅದು ಹೆಣಗಿರುವುದರ ಸೂಚನೆಯೇ ಹೌದೆಂದು ನಾನು ಭಾವಿಸಿದ್ದೇನೆ. ಮೊದಲೇ ಹೇಳಿಬಿಡುತ್ತೇನೆ : ಸಲಿಂಗ ಕಾಮವನ್ನು ಅಪರಾಧಗಳ ಪಟ್ಟಿಯಿಂದ ತೆಗೆದುಹಾಕಿದ ನಮ್ಮ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ನಾನು ಸ್ವಾಗತಿಸುತ್ತೇನೆ. ಸಲಿಂಗ ಕಾಮ ಕೆಲವರ ಸಹಜ ದೈಹಿಕ ಪ್ರವೃತ್ತಿ ಎಂಬುದನ್ನೂ ಒಪ್ಪುತ್ತೇನೆ. ಆದರೆ ಅದನ್ನು ಸಹಜ ಪ್ರಾಕೃತಿಕ ಕಾಮ ಎಂದು ಒಪ್ಪಲಾರೆ. ಏಕೆಂದರೆ ಪ್ರಾಕೃತಿಕವಾಗಿ ಕಾಮ ಸಂತಾನ ಪ್ರೇರಿತವಾದದ್ದು. ನಮ್ಮ ದರ್ಶನಗಳಿರಲಿ, ಜೀವಶಾಸ್ತ್ರ ಹೇಳುವುದೂ ಅದನ್ನೇ. ಆದರೆ ಸಲಿಂಗ ಕಾಮಕ್ಕೆ ಆ ಪ್ರೇರಣೆಯಾಗಲೀ, ಉದ್ದೇಶವಾಗಲೀ ಇಲ್ಲ. ಹಾಗಾಗಿ ಅದನ್ನು ಅದರೆಲ್ಲ ಅರ್ಥಗಳಲ್ಲಿ 'ಕಾಮ'ವೆಂದು ಕರೆಯಲಾಗದು. ಹೆಚ್ಚೆಂದರೆ ಅದೊಂದು ಅ-ಸಾಮಾನ್ಯ ದೈಹಿಕ ಪ್ರವೃತ್ತಿ. ನಾನು ಅಂದಿನ ಚರ್ಚೆಯಲ್ಲಿ ಸಂಕೋಚದಿಂದಲೇ ಈ ಪ್ರಶ್ನೆ ಕೇಳಿದೆ. ಅದಕ್ಕೆ ವಸುಧೇಂದ್ರ 'ಮಕ್ಕಳಿರುವವರು ತಮ್ಮ ಹೆಂಡತಿಯನ್ನು ಮುಟ್ಟುವುದೇ ಇಲ್ಲವೇ? ಈ ಪ್ರಶ್ನೆಯೇ ಬಾಲಿಶ!' ಎಂದು ತಳ್ಳಿ ಹಾಕಿ ಚರ್ಚೆ ಮುಗಿಸಿ ಎದ್ದುಬಿಟ್ಟರು. ಇದಕ್ಕೆ ತಕ್ಷಣ ನಾನು 'ನಿಮ್ಮ ಕಥೆಯಷ್ಟು ಅಲ್ಲ!' ಎಂದು ಹೇಳಬೇಕೆಂದಿದ್ದವನು ಎಷ್ಟಾದರೂ ಅವರು ಆ ಗೋಷ್ಠಿಯ ಅತಿಥಿ ಮತ್ತು ಚರ್ಚೆಯನ್ನು ಮುಗಿಸಿಬಿಟ್ಟಿದ್ದಾರೆ ಎಂದು ತುಟಿಯಂಚಿಗೆ ಬಂದ ಆ ಮಾತನ್ನು ತಡೆದುಕೊಂಡೆ.

ಈ ವರ್ಷದ ಶಿಬಿರದಲ್ಲಿ ನಾನು ಕಂಡ ಒಂದು ಹೊಸ ಬೆಳವಣಿಗೆ ಎಂದರೆ, ಶಿಬಿರಾರ್ಥಿಗಳ ಪೈಕಿ ಗ್ರಾಮಾಂತರ ಮುಖಗಳು ಕಡಿಮೆಯಾಗಿ, ನಗರ ಪ್ರದೇಶಗಳ-ಪ್ರಮುಖವಾಗಿ ಬೆಂಗಳೂರಿನ-'ಅಚ್ಚು'ಕಟ್ಟಾದ ಮುಖಗಳು ಹೆಚ್ಚಾಗಿ ಕಾಣತೊಡಗಿರುವುದು. ಅದಕ್ಕೆ ತಕ್ಕಂತೆ ಚರ್ಚೆಗಳಲ್ಲಿ ಗಣನೀಯವಾಗಿ ಇಂಗ್ಲಿಷ್ ಬಳಕೆ ಜಾಸ್ತಿಯಾಗತೊಡಗಿದ್ದು ಹಿಂದಿಯೂ ರಾಜಮರ್ಯಾದೆ ಪಡೆಯತೊಡಗಿರುವುದು. 'ಸಂಸ್ಕೃತಿ ಶಿಬಿರ'ದ ಸಂಸ್ಕೃತಿ ಬದಲಾಗುತ್ತಿರುವ ಸೂಚನೆ ಇದು. ಅಕ್ಷರರನ್ನು ಕೇಳಿದರೆ 'ಯಾಕಾಗಬಾರದು?' ಎಂದಾರು!

-ಡಿ.ಎಸ್. ನಾಗಭೂಷಣ

ಜೆ ಕೃಷ್ಣಮೂರ್ತಿ ವಿಚಾರಗಳು



ಜೆಕೆ ಎಂದೇ ಪ್ರಸಿದ್ಧರಾದ ಇಪ್ಪತ್ತನೆಯ ಶತಮಾನದ ಪ್ರಸಿದ್ಧ ಚಿಂತಕ, ತತ್ವಜ್ಞಾನಿ, ಭಾಷಣಕಾರ, ಲೇಖಕ ಜಿಡ್ಡು ಕೃಷ್ಣಮೂರ್ತಿ (ಮೇ ೧೨, ೧೮೯೫–ಫೆಬ್ರವರಿ ೧೭, ೧೯೮೬) ಹುಟ್ಟಿದ್ದು ಆಂಧ್ರಪ್ರದೇಶದ ಮದನಪಲ್ಲಿಯಲ್ಲಿ. ಹತ್ತನೆಯ ವಯಸ್ಸಿನಲ್ಲೇ ತಾಯಿಯನ್ನು ಕಳೆದುಕೊಂಡ ಕೃಷ್ಣಮೂರ್ತಿ ತಂದೆ ಸಂಜೀವಯ್ಯ ಕೆಲಸದಿಂದ ನಿವೃತ್ತರಾದ ಮೇಲೆ ಉದ್ಯೋಗಕ್ಕೆ ಸೇರಿಕೊಂಡ ಮದರಾಸಿನ ಥಿಯಾಸೊಫಿಕಲ್ ಸೊಸೈಟಿ ಇದ್ದ ಅಡ್ಯಾರಿನಲ್ಲಿರುವಾಗ ಚಾರ್ಲ್ಸ್ ಲೆಡ್‌ಬೀಟರ್ ಎಂಬ ಪ್ರಮುಖ ಥಿಯಾಸಫಿಸ್ಟ್(ದೇವತಾ ಶಾಸ್ತ್ರಜ್ಞ)ರ ಕಣ್ಣಿಗೆ ಬಿದ್ದರು. ದುರ್ಬಲ ಕಾಯದ, ಸೂಕ್ಷ್ಮ ಆರೋಗ್ಯದ, ಇಲ್ಲಿದ್ದರೂ ಇಲ್ಲಿನವನಲ್ಲ ಅನ್ನುವಂಥ ನೋಟದ ಕೃಷ್ಣಮೂರ್ತಿಯಲ್ಲಿ ಅವರು ಇಪ್ಪತ್ತನೆಯ ಶತಮಾನದ ಜಗದ್ಗುರು ಹಾಗೂ ಆಗಮಿಸಲಿರುವ ಮೈತ್ರೇಯ(ಬುದ್ಧ)ನಿಗೆ ವಾಹಕನೇ ಕೃಷ್ಣಮೂರ್ತಿ ಎಂದು ಗುರುತಿಸಿದರು. ಆನಿಬೆಸೆಂಟರೊಡನೆ ಸಮಾಲೋಚನೆ ನಡೆದು, ಜಗದ್ಗುರುವಾಗಲು ತಕ್ಕ ಶಿಕ್ಷಣ ಪಡೆಯುವುದಕ್ಕಾಗಿ ಕೃಷ್ಣಮೂರ್ತಿ ಅವರ ತಮ್ಮ ನಿತ್ಯನನ್ನು ಯೂರೋಪಿಗೆ ಕಳಿಸಲಾಯಿತು. ಕೃಷ್ಣಮೂರ್ತಿಯವನ್ನು ಥಿಯಾಸಫಿಯ ಸದಸ್ಯರಿಗೆ ಪರಿಚಯಮಾಡಲೆಂದೇ 'ಆರ್ಡರ್ ಆಫ್ ದಿ ಸ್ಟಾರ್ ಆಫ್ ಈಸ್ಟ್' ಎಂಬ ಸಂಸ್ಥೆಯನ್ನು ಸ್ಥಾಪಿಸಲಾಯಿತು. ಸತ್ಯದ ಸಂಸ್ಥೀಕರಣವನ್ನು ಒಲ್ಲದ ಜೆಕೆ ಆ ಸಂಸ್ಥೆಯ ಜವಾಬ್ದಾರಿಯನ್ನು ವಹಿಸಿಕೊಂಡ ಕೂಡಲೇ ಅದನ್ನು ವಿಸರ್ಜಿಸುವ ತೀರ್ಮಾನ ಕೈಗೊಂಡರು. ಮುಂದೆ ಅವರು ಯಾವ ಸಂಸ್ಥೆಯ ಹಂಗೂ ಇಲ್ಲದೆ ತನ್ನ ಅನುಭವ, ಚಿಂತನೆಗಳನ್ನು ಹಂಚಿಕೊಳ್ಳುತ್ತ ಇಡೀ ಜಗತ್ತನ್ನು ಸುತ್ತಿದರು. ಅವರ ಭಾಷಣ, ಲೇಖನಗಳೆಲ್ಲ ಸುಮಾರು ೧೯ ದೊಡ್ಡ ಸಂಪುಟಗಳಲ್ಲಿ ಸಂಗ್ರಹವಾಗಿವೆ. ಕೃಷ್ಣಮೂರ್ತಿ ತಮ್ಮ ೯೦ನೆಯ ವಯಸ್ಸಿನಲ್ಲಿ ಕ್ಯಾನ್ಸರಿನಿಂದ ತೀರಿಕೊಂಡರು.

ತತ್ವಶಾಸ್ತ್ರದ ಪಾರಿಭಾಷಿಕ ಪದಗಳ, ಶಾಸ್ತ್ರಗ್ರಂಥದ ವಿದ್ವತ್ತಿನ ಉಲ್ಲೇಖವಿಲ್ಲದೆ, ಸಂಸ್ಕೃತಿ, ಶಿಕ್ಷಣ, ಮನುಷ್ಯ ಸಂಬಂಧ, ಭಯ, ಸ್ವಾತಂತ್ರ್ಯ, ಪ್ರೀತಿ, ನಿಸರ್ಗ ಇಂಥ ಬದುಕಿನ ಮುಖ್ಯ ಸಂಗತಿಗಳನ್ನು ಸ್ವಂತದ ಅನುಭಾವ, ಚಿಂತನೆಗಳನ್ನು ನಿರಲಂಕಾರವಾದ ತಮ್ಮದೇ ಮಾತುಗಳಲ್ಲಿ ಜೆಕೆ ನುಡಿಯುತ್ತಾರೆ. ಅವರ ಆಯ್ದ ಕೆಲವು ಸೂಕ್ತಿಗಳನ್ನು ಇಲ್ಲಿ ನೀಡಲಾಗಿದೆ

• ಸತ್ಯವೆಂಬುದು ಹೋಗಿ ತಲುಪಲು ದಾರಿಗಳಿಲ್ಲದ ಬಯಲು. ಯಾವುದೇ ಮಾರ್ಗ, ಯಾವುದೇ ಧರ್ಮ, ಯಾವುದೇ ಮತವನ್ನು ಅನುಸರಿಸಿ ಸತ್ಯವನ್ನು ತಲುಪಲಾಗದು. ಮಿತಿಗಳಿಲ್ಲದ, ಷರತ್ತುಗಳಿಲ್ಲದ, ಯಾವುದೇ ಮಾರ್ಗದಲ್ಲಿ ಹೋಗಿ ತಲುಪಲಾಗದ ಸತ್ಯವನ್ನು 'ವ್ಯವಸ್ಥೆ'ಗೊಳಿಸಲು, ಸಾಂಸ್ಥಿಕಗೊಳಿಸಲು ಸಾಧ್ಯವಿಲ್ಲ. ಇಂಥದೇ ಮಾರ್ಗದಲ್ಲಿ ಹೀಗೆಯೇ ಸಾಗಿ ಸತ್ಯವನ್ನು ಪಡೆಯಬಹುದು ಎಂದು ಯಾವ ಸಂಸ್ಥೆಯ ಮೂಲಕವೂ ಪ್ರತಿಪಾದಿಸಬಾರದು. ನನಗೆ ಹಿಂಬಾಲಕರು ಯಾರೂ ಬೇಡ. ನೀವು ಯಾರನ್ನಾದರೂ ಹಿಂಬಾಲಿಸಿದರೆ ಸತ್ಯವನ್ನು ಅರಸಲು ಸಾಧ್ಯವಿಲ್ಲ. ನೀವು ನನ್ನ ಮಾತನ್ನು ಗಮನವಿಟ್ಟು ಆಲಿಸುತ್ತೀರೋ ಇಲ್ಲವೋ ಅದು ನನಗೆ ಸಂಬಂಧಿಸಿದ್ದಲ್ಲ. ಮನುಷ್ಯನನ್ನು ಬಿಡುಗಡೆಗೊಳಿಸಬೇಕು ಎಂಬುದೊಂದೇ ನನ್ನ ಗುರಿ. ಎಲ್ಲ ಪಂಜರ, ಎಲ್ಲ ಭಯಗಳಿಂದ ಮನುಷ್ಯನನ್ನು ಬಿಡುಗಡೆಗೊಳಿಸಬೇಕು. ಹೊಸಧರ್ಮವನ್ನೋ, ಹೊಸ ಪಂಥವನ್ನೋ, ಹೊಸ ಸಿದ್ಧಾಂತಗಳನ್ನೋ, ಹೊಸ ತತ್ವವನ್ನೋ ನಿರೂಪಿಸುವುದು ನನ್ನ ಉದ್ದೇಶವಲ್ಲ.' [ಆರ್ಡರ್ ಆಫ್ ಈಸ್ಟ್ ಸಂಸ್ಥೆಯನ್ನು ವಿಸರ್ಜಿಸುವ ಸಂದರ್ಭದಲ್ಲಿ ಹೇಳಿದ ಮಾತು]

• ತೀವ್ರವಾಗಿ ಅಸ್ವಸ್ಥವಾಗಿರುವ ಸಮಾಜಕ್ಕೆ ಹೊಂದಿಕೊಂಡು ಬದುಕುವುದು ಆರೋಗ್ಯದ ಅಳತೆಗೋಲಲ್ಲ.

• ಪರಂಪರೆ, ಸಂಪ್ರದಾಯಗಳು ನಮ್ಮ ರಕ್ಷಣೆಯ ಉಪಾಯಗಳು. ಸುರಕ್ಷಿತವಾದ ಮನಸ್ಸು ಕೊಳೆಯುತ್ತಿರುವ ಮನಸ್ಸು.

• [ಸಾವು ನಮಗೆ ಗೊತ್ತಿಲ್ಲ.] ಗೊತ್ತಿಲ್ಲದ್ದರ ಬಗ್ಗೆ ಯಾರೂ ಭಯಪಡಲಾರರು. ಗೊತ್ತಿರುವುದೆಲ್ಲ ಇಲ್ಲವಾಗುತ್ತದೆಂಬ ಭಯವೇ ಸಾವು.

• ಪ್ರತಿಯೊಂದೂ ಆಲೋಚನೆ, ಪ್ರತಿಯೊಂದೂ ಭಾವನೆಯ ಬಗ್ಗೆ ಅರಿವು ಇರುವುದೇ ಧ್ಯಾನ. ಆಲೋಚನೆ, ಭಾವನೆಗಳನ್ನು ಸರಿ, ತಪ್ಪು ಎಂದು ತೀರ್ಮಾನಿಸುವುದಲ್ಲ, ಸುಮ್ಮನೆ ಅವನ್ನು ಗಮನಿಸುವುದು, ಅವುಗಳ ಜೊತೆಗೆ ಚಲಿಸುವುದು ಧ್ಯಾನ. ಈ ಗಮನದಲ್ಲಿ ಆಲೋಚನೆ ಮತ್ತು ಭಾವನೆಗಳ ಚಲನೆ ಅರ್ಥವಾಗಲು ತೊಡಗುತ್ತದೆ. ಈ ಅರಿವಿನಿಂದ ಮೌನ ಮೂಡುತ್ತದೆ.

• ನಿಮಗೆ ಭಯವಿದ್ದಾಗ ಪರಂಪರೆಗೆ, ಸಂಪ್ರದಾಯಕ್ಕೆ ಬದ್ಧರಾಗುತ್ತೀರಿ. ಯಾರೋ ನಾಯಕನನ್ನು, ಯಾರೋ ಗುರುವನ್ನು ಹಿಂಬಾಲಿಸುತ್ತೀರಿ. ನೀವು ಸಂಪ್ರದಾಯಬದ್ಧರಾಗಿದ್ದಾಗ, ನಿಮ್ಮ ಹೆಂಡತಿಗೋ, ಗಂಡನಿಗೋ ಭಯಪಡುತ್ತಿರುವಾಗ ಮನುಷ್ಯ ಜೀವಿಗೆ ಇರಬೇಕಾದ ಘನತೆಯನ್ನು ಕಳಕೊಳ್ಳುತ್ತೀರಿ.

• ಬದುಕಿನ ಒಂದು ತುಣುಕನ್ನಲ್ಲ, ಇಡೀ ಬದುಕನ್ನು ಅರ್ಥಮಾಡಿಕೊಳ್ಳಬೇಕು. ಅದಕ್ಕಾಗಿಯೇ ನೀವು ಓದಬೇಕು, ಆಕಾಶ ನೋಡಬೇಕು, ಹಾಡಬೇಕು, ನರ್ತಿಸಬೇಕು, ಕವಿತೆ ರಚಿಸಬೇಕು, ನರಳಬೇಕು, ಅರ್ಥಮಾಡಿಕೊಳ್ಳಬೇಕು. ಇದೇ ಬದುಕು..

• ನಾವು ಸೆಕೆಂಡ್ ಹ್ಯಾಂಡ್ ಜನ; 'ಮೂಲಕ ಮಹಾಶಯರು'. ನಮಗೆ ಹೇಳಿಕೊಡಲಾದ ರೀತಿಯಲ್ಲಿ ಬದುಕಿದ್ದೇವೆ. ನಮ್ಮ ಮನೋಧರ್ಮವೋ ಪ್ರವೃತ್ತಿಯೋ ದಾರಿ ತೋರುತ್ತಾ ಅಥವಾ ಪರಿಸರ, ಸಂದರ್ಭಗಳನ್ನು ಒಪ್ಪಿಕೊಳ್ಳಲೇಬೇಕು ಎಂಬ ಒತ್ತಾಯಕ್ಕೆ ಸಿಲುಕಿಯೋ ನಮ್ಮತನ ರೂಪುಗೊಂಡಿದೆ. ಅದರಲ್ಲಿ ಹೊಸತೇನೂ ಇಲ್ಲ, ನಾವೇ ಕಂಡುಕೊಂಡದ್ದು ಏನೂ ಇಲ್ಲ, ಒರಿಜಿನಲ್ ಆದದ್ದು, ಪರಿಶುದ್ಧವಾದದ್ದು, ಸ್ಪಷ್ಟವಾದದ್ದು ಏನೂ ಇಲ್ಲ.

• ವಾದ, ಪ್ರತಿಪಾದನೆ, ಮಾನಸಿಕ ಕಸರತ್ತುಗಳ ಮೂಲಕ ನಾವೇ ಕಟ್ಟಿಕೊಂಡಿರುವ ಪಂಜರಗಳಲ್ಲಿ ಸುಮ್ಮನೆ ಅತ್ತಿತ್ತ ಅಡ್ಡಾಡುವ ಪಳಗಿಸಿದ ಮೃಗಗಳು ನಾವು. ರಾಜಕೀಯ ಮುಖಂಡರಾಗಲೀ, ನಮ್ಮ ಭ್ರಮೆಗಳನ್ನು ಪೋಷಿಸುವ, ಶೋಷಿಸುವ ಗುರುಗಳಾಗಲೀ ಅತ್ಯಂತ ಸೂಕ್ಷ್ಮವಾಗಿ ಇಲ್ಲವೇ ಅತ್ಯಂತ ಒರಟಾಗಿ ಈ ಭ್ರಮೆಗಳನ್ನು ಬಳಸಿಕೊಳ್ಳುತ್ತಾರೆ.

• ಪ್ರೀತಿ ಎಂದರೆ ಮೌನ ಅನ್ನುವುದನ್ನು ಗಮನಿಸಿದ್ದೀರಾ? ಇನ್ನೊಬ್ಬರ ಕೈ ಹಿಡಿದಿರುವಾಗ, ಅಥವಾ ಮಗುವನ್ನು ಪ್ರೀತಿಯಿಂದ ನೋಡುತ್ತಿರುವಾಗ ಅಥವಾ ಸಂಜೆಯ ಸೌಂದರ್ಯವನ್ನು ನಮ್ಮೊಳಗುಮಾಡಿಕೊಳ್ಳುತ್ತಿರುವಾಗ ಮೌನ ಇರುತ್ತದೆ. ಪ್ರೀತಿಗೆ ಭೂತ, ಭವಿಷ್ಯತ್ತುಗಳಿಲ್ಲ; ಅಸಾಮಾನ್ಯ ಮೌನಕ್ಕೂ ಅಷ್ಟೇ.

• ನನ್ನನ್ನು ನಾನು ಅರಿತಾಗ ನಿನ್ನನ್ನೂ ಅರಿಯುವೆ. ಆ ಅರಿವಿನಿಂದ ಪ್ರೀತಿ ಮೂಡುತ್ತದೆ.

• ಸಮಸ್ಯೆಯನ್ನು ಅರ್ಥಮಾಡಿಕೊಳ್ಳಬೇಕಾದರೆ ಸಮಸ್ಯೆಗೆ ಉತ್ತರವನ್ನು ಪಡೆಯಬೇಕೆಂಬ ಆಸೆಯಿಂದ ಬಿಡುಗಡೆಪಡೆದಿರಬೇಕು.

• ಧಾರ್ಮಿಕ ಅಥವ ರಾಜಕೀಯ ಐಡಿಯಾಲಜಿಗಳು ಪರಿಕಲ್ಪನೆಗಳನ್ನು ಆಧರಿಸಿದ ಆಲೋಚನೆಗಳು. ಈ ಕಲ್ಪನೆಗಳೇ ಮನುಷ್ಯರನ್ನು ಬೇರೆ ಬೇರೆಯಾಗಿ ವಿಂಗಡಿಸಿರುವುದು ದುರದೃಷ್ಟದ ಸಂಗತಿ.

• ಧರ್ಮವೆನ್ನುವುದು ಸಂಪೂರ್ಣವಾಗಿ ವೈಯಕ್ತಿಕವಾದದ್ದು. ಅದನ್ನು ನೀವು ಸಾಂಸ್ಥಿಕಗೊಳಿಸಲಾರಿರಿ, ಅಷ್ಟೇ ಅಲ್ಲ ಧರ್ಮ ಸಾಂಸ್ಥಿಕವಾಗಬಾರದು. ಹಾಗೇನಾದರೂ ಆದರೆ ಧರ್ಮ ಸತ್ತುಹೋಗುತ್ತದೆ, ಕಲ್ಲಾಗುತ್ತದೆ, ಇತರರ ಮೇಲೆ ಹೇರುವ ಮತ, ಪಂಥ, ಸಿದ್ಧಾಂತವಾಗುತ್ತದೆ.

• ವೈಯಕ್ತಿಕ ಲಾಭ, ಭದ್ರತೆಗಳನ್ನು ಅರಸಿಕೊಳ್ಳಬೇಕು, ಅದಕ್ಕಾಗಿ ಸ್ಪರ್ಧಿಸಬೇಕು ಎಂದು ನಮ್ಮ ಶಿಕ್ಷಣವೂ, ಪರಿಸರವೂ ನಮಗೆ ಸುಂದರ ನುಡಿಗಟ್ಟುಗಳ ಮೂಲಕ ಕಲಿಸಿದೆ. ಆದರೆ ಸತ್ಯವೇನೆಂದರೆ ಶೋಷಣೆ, ಸಂಗ್ರಹಗುಣ ಮತ್ತು ಭಯಗಳನ್ನೇ ಆಧಾರಿಸಿರುವ ವ್ಯವಸ್ಥೆಯನ್ನು ಪೋಷಿಸಲು ಶಿಕ್ಷಣದ ಹೆಸರಿನಲ್ಲಿ ಬೇರೆ ಬೇರೆ ಕೆಲಸಗಳಿಗೆ ತರಬೇತಿ ಹೊಂದುತ್ತಿದ್ದೇವಷ್ಟೆ.

• ದೇವರು, ಸತ್ಯ, ವಾಸ್ತವ—ಯಾವ ಹೆಸರಿನಿಂದ ಬೇಕಾದರೂ ಕರೆಯಿರಿ, ಅದು ಇದೆಯೋ ಇಲ್ಲವೋ ಎಂಬ ಉತ್ತರವನ್ನು ಪುಸ್ತಕಗಳು, ಪುರೋಹಿತರು, ಪ್ರವಾದಿಗಳು, ರಕ್ಷಕರು, ತತ್ವಜ್ಞಾನಿಗಳು ನೀಡಲಾರರು. ಈ ಪ್ರಶ್ನೆಗೆ ನೀವು, ಸ್ವತಃ ನೀವು ಮಾತ್ರ ಉತ್ತರ ನೀಡಬಲ್ಲಿರಿ. ಅದಕ್ಕಾಗಿಯೇ ನಿಮ್ಮನ್ನು ನೀವು ಅರಿಯಬೇಕು.


• ನಾನು ಭಾರತೀಯ, ಅಥವಾ ಮುಸ್ಲಿಂ, ಅಥವಾ ಕ್ರಿಶ್ಚಿಯನ್, ಅಥವಾ ಯೂರೋಪಿಯನ್ ಎಂದು ಕರೆದುಕೊಳ್ಳುವಾಗ ನೀವು ಹಿಂಸಕರಾಗಿರುತ್ತೀರಿ. ಯಾಕೆ ಗೊತ್ತೇ? ನಿಮ್ಮನ್ನು ನೀವು ಒಟ್ಟು ಮನುಷ್ಯಕುಲದಿಂದ ಪ್ರತ್ಯೇಗೊಳಿಸಿಕೊಂಡಿರುತ್ತೀರಿ. ನಿಮ್ಮ ಮತ, ಧರ್ಮ ಅಥವಾ ರಾಷ್ಟ್ರೀಯತೆಗಳನ್ನು ನೆಚ್ಚಿ ನಿಮ್ಮನ್ನು ಇತರರಿಗಿಂತ ಬೇರೆ, ವಿಶಿಷ್ಟ ಅಂದುಕೊಳ್ಳುವುದು ಹಿಂಸೆಗೆ ಕಾರಣವಾಗುತ್ತದೆ.

(ಪ್ರಸ್ತುತಿ : **ಪ್ರೊ. ಓ.ಎಲ್. ನಾಗಭೂಷಣ ಸ್ವಾಮಿ**)

ಪುಸ್ತಕಾವಲೋಕನ

ಪು : ಮೀನಾಕ್ಷಿಯ ಸೌಗಂಧ (ದಿ. ಬಿ.ಜಿ.ಎಲ್ ಸ್ವಾಮಿಯವರ ಬಿಡಿ ಲೇಖನಗಳು) ಸಂ : ಟಿ.ಆರ್. ಅನಂತರಾಮು, ಎಸ್.ಎಲ್. ಶ್ರೀನಿವಾಸಮೂರ್ತಿ, ಜಿ.ಎನ್ ನರಸಿಂಹಮೂರ್ತಿ ಮತ್ತು ಕೆ.ಎಸ್. ಮಧುಸೂಧನ ಪ್ರ: ವಸಂತ ಪ್ರಕಾಶನ, ಬೆಂಗಳೂರು ಪು : ೨೪೦ ಬೆಲೆ : ರೂ. ೧೮೦/-

ಕುತೂಹಲ ಹುಟ್ಟಿಸುವ ಬಹುಮುಖಿ ಅಧ್ಯಯನಗಳು



'ಹಸುರು ಹೊನ್ನು', 'ಕಾಲೇಜುರಂಗ. 'ತಮಿಳು ತಲೆಗಳ ನಡುವೆ' ಮುಂತಾದ ವಿವಿಧ ಅಭಿರುಚಿಗಳ ಪುಸ್ತಕಗಳ ಮೂಲಕ ಕನ್ನಡ ಸಾಹಿತ್ಯಲೋಕಕ್ಕೆ ಸುಪರಿಚಿತರಾಗಿರುವ ದಿ. ಬಿ.ಜಿ.ಎಲ್. ಸ್ವಾಮಿ ಅವರ ಕೆಲವು ಅಪ್ರಕಟಿತ ಲೇಖನಗಳ ಸಂಗ್ರಹ 'ಮೀನಾಕ್ಷಿಯ ಸೌಗಂಧ' ಸ್ವಾಮಿಯವರ ಬಹುಮುಖಿ ವಿದ್ವತ್ತನ್ನು ಮತ್ತೊಮ್ಮೆ ಅನಾವರಣಗೊಳಿಸುವಂತಿದೆ. ಸಾಹಿತ್ಯ, ಸಂಗೀತ, ಚರಿತ್ರೆ., ಚಿತ್ರಕಲೆ ಇವುಗಳ ಜೊತೆಗೆ ಸಂಶೋಧನೆಯ ವಿಧಾನ-ವಿಚಾರಗಳ ಕುರಿತು ಅವರಿಗಿದ್ದ ಆಸಕ್ತಿ ಈ ಕೃತಿಯ ಉದ್ದಕ್ಕೂ ಕಾಣುತ್ತದೆ. ಮೂಲತಃ 'ಸಸ್ಯಶಾಸ್ತ್ರ'ದ ವಿದ್ವಾಂಸರಾದ ಸ್ವಾಮಿಯವರು ಯಾವುದೇ ವಿಚಾರವನ್ನು ಬಹುಬೇಗ ಸ್ವೀಕರಿಸುವುದಿಲ್ಲ. ಇದರಲ್ಲಿನ ಬಹುತೇಕ ಬರಹಗಳೇ ಇದನ್ನು ಸಾಬೀತು ಪಡಿಸುತ್ತವೆ.

ನಲವತ್ತರ ದಶಕದಲ್ಲೇ ಅನ್ಯಜ್ಞಾನ ಶಿಸ್ತುಗಳ ಕುರಿತು ಚಿಂತಿಸಿದ, ಬರೆದ ಕೆಲವೇ ಲೇಖಕರಲ್ಲಿ ಇವರೂ ಒಬ್ಬರು. ಅಂದರೆ ನಾವು ಇವತ್ತಿನ ಪರಿಭಾಷೆಯಲ್ಲಿ ಹೇಳುವುದಾದರೆ ಕೇವಲ 'ಸಿದ್ಧಾಂತ'ಗಳ 'ಪರಿಕಲ್ಪನೆ'ಗಳ ಆಧಾರದ ಮೇಲೆ ತಮ್ಮ ವಾದ ಸರಣಿಗಳನ್ನು ಬೆಳಸದೇ, ಇಲ್ಲಿನ ಎಲ್ಲ ಲೇಖನಗಳಿಗೂ ಸೃಜನಶೀಲ ಸ್ಪರ್ಶವನ್ನೂ ನೀಡುವುದರಲ್ಲಿ ಯಶಸ್ವಿಯಾಗಿದ್ದಾರೆ. ಇಂಥಹ ಹಿರಿಯರ ಬರಹಗಳನ್ನು ಇಂದಿನ ಕಾಲಮಾನದಲ್ಲಿ ಹೇಗೆ ಓದಬೇಕು? ಹೇಗೆ ಗ್ರಹಿಸಬೇಕು? ಎಂಬ ಪ್ರಶ್ನೆಗಳಿಗೆ ತೀರಾ ತಲೆಕೆಡಿಸಕೊಳ್ಳಬೇಕಾಗಿಲ್ಲ. ಕಾರಣ, ಇಂದಿಗೂ ಕೆಲ ಲೇಖನಗಳು ತಾಜತನದಿಂದ ಕೂಡಿವೆ. ಮಾತ್ರವಲ್ಲ, ವಿಜ್ಞಾನದ ವಿದ್ಯಾರ್ಥಿಯಾಗಿ ಸ್ವಾಮಿಯವರು ಎಲ್ಲವನ್ನು ಸಾರಾಸಗಟಾಗಿ ಸ್ವೀಕರಿಸದೇ ತಮ್ಮದೇ ವಾದ ಸರಣಿಯನ್ನು ಮಂಡಿಸಲು ಅನೇಕ ಸಂಶೋಧನಾ ಆಕರಗಳನ್ನು ಬಳಸಿಕೊಳ್ಳುತ್ತಾರೆ.

ಸ್ವಾಮಿಯವರ ಬಹುಮುಖ್ಯ ವಾದಗಳಲ್ಲಿ 'ಸಂಪ್ರದಾಯ ಶರಣತೆ'ಯ ಶೋಧನೆ. ಇದನ್ನು ತೀರಾ ಆಧುನಿಕತೆಯ ನಿಕಷಕ್ಕೊಡ್ಡುವ ಸರಳೀಕೃತ ಮಾರ್ಗ ಹಿಡಿಯದೆ ಆಕರಗಳ ಬೆಳಕಿನಲ್ಲಿ ಅದರ ಸತ್ಯ ಕುರಿತ ಪ್ರಶ್ನೆಗಳನ್ನು ಎತ್ತುವುದು ಈ ಶೋಧನೆಯ ವಿಶೇಷ. ಡಾರ್ವಿನ್‌ನ ಆರ್ಜಿತ ಗುಣಗಳು ಮತ್ತು ಅನುವಂಶೀಯತೆಗಳನ್ನು ವಿವರಿಸುವಾಗಲೂ ಅವರು ಡಾರ್ವಿನ ವಾದವನ್ನು ಸಂಪೂರ್ಣವಾಗಿ ನಿರಾಕರಿಸದೇ ಅದರಲ್ಲಿನ ಕೆಲವು ವಾದಗಳನ್ನು ಅನುಮೋದಿಸಿ ಅವನ ಶಿಷ್ಯ ಮಂಡಿಸಿದ ಹೊಸದಾದ ಅನುವಂಶೀಯತೆಯ ಸಿದ್ಧಾಂತಗಳನ್ನು ಒಪ್ಪಿಕೊಳ್ಳಲು ಸಿದ್ಧರಾಗುತ್ತಾರೆ. ಇವರಿಬ್ಬರ ಚಿಂತನೆಗಳ ನಡುವೆ ಸ್ವಾಮಿ ಚಿಂತನೆಗಳು ಕಾಣಿಸಿಕೊಳ್ಳುತ್ತವೆ. ತಾತನಂತೆ ಅಪ್ಪ, ಅಪ್ಪನಂತೆ ಮಗ ಇರಲು ಸಾಧ್ಯವಿಲ್ಲ. ಸಾಧ್ಯವಿದ್ದರೆ ಅದು ಮನುಷ್ಯನ ಸ್ವಂತ ಪ್ರಯತ್ನಗಳ ಫಲವೆಂದೇ ಭಾವಿಸುತ್ತಾರೆ. ಇದಕ್ಕೆ ಅವರು ಹೈದರ್ ಮತ್ತು ಟಿಪ್ಪುವಿನ ಉದಾಹರಣೆಯನ್ನೂ ನೀಡುತ್ತಾರೆ.

ಅವರ ಯಾವುದೇ ಲೇಖನದಲ್ಲೂ ಸಾಹಿತ್ಯದ ಜ್ಞಾನ ಪ್ರಜ್ಞಾಪೂರ್ವಕವಾಗಿಯೇ ಸೇರಿರುತ್ತದೆ. ಸಸ್ಯಶಾಸ್ತ್ರ ಮತ್ತು ಕನ್ನಡ, ತಮಿಳು ಅಭಿಜಾತ ಪಠ್ಯಗಳ ಜೋಡಣೆಯನ್ನು ಒಂದು ಕ್ರಮಬದ್ಧವಾದ ಜ್ಞಾನ ಶಿಸ್ತುಗಳಾಗಿಯೇ ತರಲು ಅವರು ಯತ್ನಿಸುತ್ತಾರೆ. ಅವರಿಗೆ ಪಂಪ ಮತ್ತು ತಮಿಳು ಅಭಿಜಾತ ಪಠ್ಯಗಳ ವಿವರಗಳು ಚರಿತ್ರೆಯ ಶೋಧನೆಗೂ ಇಲ್ಲಿ ಒದಗುತ್ತವೆ. ಏಕಕಾಲಕ್ಕೆ ಸಸ್ಯಶಾಸ್ತ್ರ ಮತ್ತು ಸಾಹಿತ್ಯ, ಚರಿತ್ರೆಗಳು ಪರಸ್ಪರ ಒಗ್ಗೂಡುತ್ತವೆ. ಈ ಒಗ್ಗೂಡುವ ಪ್ರಕ್ರಿಯೆಯಲ್ಲಿ ಸಂಶೋಧಕನೊಬ್ಬನ ಕೂತುಹಲ, ವಿವೇಕ, ಸೃಜನಶೀಲ ಬರಹಗಾರನೊಬ್ಬನ ಕಲಾತ್ಮಕತೆಗಳೂ ಏಕೀಭವಿಸುತ್ತವೆ.

ಸ್ವಾಮಿಯವರ ಈ ಪುಸ್ತಕದಲ್ಲಿ ನಾವು ಗಮನಿಸಲೇಬೇಕಾದ ಲೇಖನಗಳು ಹಲವಿವೆ. ಅವರು ಚಿತ್ರಕಲೆ ಮತ್ತು ಸಂಗೀತಕ್ಕೆ ಸಂಬಂಧಪಟ್ಟ ಹಾಗೆ ಕಲಾವಿದರಾದ ವೆಂಕಟಪ್ಪನವರ ಬಗ್ಗೆ ಬರೆದ ಲೇಖನ ಇಂದಿಗೂ ಸಂಗೀತ ಮತ್ತು ಚಿತ್ರಕಲೆಗಳಿಗೆ ಸಂಬಂಧಿಸಿದಂತೆ ಹಲವು ಒಳನೋಟಗಳನ್ನು ನೀಡುತ್ತಾ ಯುವ ಕಲಾವಿಮರ್ಶಕರ ಗಮನವನ್ನು ಆಹ್ವಾನಿಸುವಂತಿದೆ. ಭೂಚಿತ್ರಗಳಲ್ಲಿ ಡಿಸ್ಟೆನ್ಸಿ ಸಾಲದು ಎಂಬ ಕೆಲ ಯುವ ಕಲಾವಿದರ ಅಭಿಪ್ರಾಯಕ್ಕೆ ಅವರು ಕೊಡುವ ಉತ್ತರಗಳು ಸಿಟ್ಟಿನಿಂದ ಇದ್ದರೂ ಹೊಸ ಕಲಾವಿದರಿಗೆ ಬೇಕಾದ ವಿವೇಕವನ್ನು ಕುರಿತು ಸ್ವಾಮಿಯವರು ವಿವರವಾಗಿ ಬರೆಯುತ್ತಾರೆ. ಇದರಲ್ಲಿ ಸ್ವಾಮಿಯವರ ಕಲಾ ಚಿಂತನೆ ವಿಸ್ತಾರ ನೆಲೆಯಲ್ಲಿ ಕಾಣಿಸುವುದು. ಚಿತ್ರಗಳ ಬಣ್ಣ ಮತ್ತು ನೆರಳು ಮುಂತಾದ ಆಯಾಮಗಳ ಮೂಲಕ ವೆಂಕಟಪ್ಪನವರ ಕಲೆಯನ್ನು ದೇಸಿ ಕಲಾಚಿಂತನೆ ಅನ್ನುವುದಕ್ಕಿಂತ ಭಾರತೀಯ ಸಂಪ್ರದಾಯದ ಶೋಧನೆ ಎನ್ನಬೇಕು ಎಂದು ಅವರು ವಾದಿಸುವಾಗ, ವೆಂಕಟಪ್ಪನವರು ಅನ್ಯ ವಿದ್ವಾಂಸರ ಬಳಿ ಕಲಿತರೂ ಮತ್ತು ಅವರಿಗೆ ವಂಗಶೈಲಿಯ ವರ್ಣಗಳ ಪರಿಚಯ ಇದ್ದರೂ, ತಮ್ಮದೇ ಚಿತ್ರ ಶೈಲಿಯನ್ನು ಪಡೆದಿದ್ದರು ಎಂಬುದನ್ನು ಸ್ವಾಮಿಯವರು ವಿವರಿಸುವ ರೀತಿ ಅವರ ಕಲಾವಿಮರ್ಶೆಯನ್ನು ಸಾಬೀತುಪಡಿಸುವಂತಿದೆ.

ಸ್ವಾಮಿಯವರ ಬಹುಮುಖಿ ಚಿಂತನೆಗಳಿಗೆ ಹಲವು ನಿದರ್ಶನಗಳೆಂಬಂತೆ ಇಲ್ಲಿ ದಾಸಿಮಯ್ಯನ ಮತವಿಚಾರ ಕುರಿತು ಮತ್ತು ಪುರಂದರದಾಸರ ಸಂಗೀತದ ಧಾತು ವಿಚಾರಗಳ ಕುರಿತು ಲೇಖನಗಳಿವೆ. ದಾಸಿಮಯ್ಯನನ್ನು ಸ್ವಾಮಿಯವರು 'ದೇವರ ದಾಸಿಮಯ್ಯ' ಎಂದು ಕರೆಯದೇ 'ಜೇಡರ ದಾಸಿಮಯ್ಯ' ಎಂದು ಕರೆದಿದ್ದಾರೆ. ಆ ಬಗ್ಗೆ ಅವರು ಹೆಚ್ಚು ಚರ್ಚೆ ಮಾಡದೇ, ದಾಸಿಮಯ್ಯನನ್ನು ಬಸವಣ್ಣನ ಕಾಲ ಮತ್ತು ಮತಕ್ಕೆ ಜೋಡಿಸುವುದಿಲ್ಲ. ಇಲ್ಲಿ ಸ್ವಲ್ಪ ಮಟ್ಟಿಗೆ ಗೊಂದಲವಿದೆ ಎನಿಸಿದರೂ ಅವರು ತಮ್ಮ ನಿಲುವುಗಳಿಗೆ ಬದ್ಧರಾಗಿರುವುದು ಸ್ಪಷ್ಟವಿದೆ. ಅವರ ಪ್ರಮುಖ ವಾದವಿರುವುದು 'ಅವನ ವಚನಗಳ ವಿಶ್ಲೇಷಣೆಯಿಂದ ಜಾಲಿಸಿ ಬರುವುದು ಪಾಶುಪತ ಪಂಥದ ಆಚರಣೆಯಗಳು, ಚಿಂತನೆಗಳು, ತಾತ್ವಿಕ ವಿಚಾರಗಳು ಎಂದು ಸ್ಪಷ್ಟವಾಗುತ್ತದೆ' (ಪು. ೧೬೧) ಎಂಬ ಅವರ ಮಾತಿನಲ್ಲಿ. ಈ ಮಾತುಗಳನ್ನು ಅವರು ಇನ್ನಿತರ ವಿದ್ವಾಂಸರ ಹೇಳಿಕೆಗಳ ಬೆನ್ನಲ್ಲಿ ಹೇಳುತ್ತಾರೆ. ದಾಸಿಮಯ್ಯನ ಮತಕ್ಕೂ ಬಸವಣ್ಣನ ಮತಕ್ಕೂ ವ್ಯತ್ಯಾಸಗಳಿವೆ ಎಂಬುದು ಸತ್ಯವಾದರೂ ಗೊಂದಲಕ್ಕೆ ಒಳಗಾಗುವುದು ಈ ಮಾತುಗಳಿಂದ : 'ಬಸವೇಶ್ವರರು ವರ್ಣಾಶ್ರಮ ವ್ಯವಸ್ಥೆಯನ್ನು ಒಡೆಯಲು ಪ್ರಯತ್ನಿಸುತ್ತಿದ್ದಾಗ ಜೇಡರ ದಾಸಿಮಯ್ಯ ಆ ವ್ಯವಸ್ಥೆಯನ್ನು ಬಹುನಿಷ್ಠೆಯಿಂದ ಆಚರಣೆಯಲ್ಲಿಟ್ಟುಕೊಂಡಿದ್ದಾನೆ.' (ಪು. ೧೬೦) ಈ ಮಾತುಗಳು ಚರ್ಚಾರ್ಹವಾಗಿದ್ದು ಬಹುಶಃ ಆ ಕಾರಣದಿಂದ ಈ ಲೇಖನವನ್ನು ಅಪೂರ್ಣವಾಗಿ ಬಿಟ್ಟಿದ್ದಾರೆ.

ಇನ್ನು ವಚನಕಾರರ ನಂತರ ಕಾಣಿಸಿಕೊಳ್ಳುವ ಪುರಂದರರ ಸಂಗೀತದ ಮಟ್ಟುಗಳ ಕುರಿತು ಮತ್ತು ಬಿ.ವಿ. ಕಾರಂತರು ಅವರ ಪದಗಳನ್ನು ನಾಟಕಗಳಿಗೆ ಒಳಪಡಿಸಿದ ಬಗ್ಗೆ ಸ್ವಾಮಿಯವರು ವಿಸ್ತಾರವಾಗಿ ಚರ್ಚಿಸಿದ್ದಾರೆ. ಈ ಲೇಖನ ಸಂಗೀತದ ವಿದ್ಯಾರ್ಥಿಗಳಿಗೆ ಇಂದಿಗೂ ವಿಶೇಷ ತಿಳುವಳಿಕೆಯನ್ನು ನೀಡುವಂತಿದೆ. ಪುರಂದರರ ಹಲವು ಪದಗಳನ್ನು ಸಂಗೀತಜ್ಞಾನದ ಹಿನ್ನೆಲೆಯಿಂದ ಈ ಲೇಖನ ವಿವರಿಸಿದರೂ ಬದಲಾದ ಸಂಗೀತ ಶಿಸ್ತಿನ ನಿಯಮಗಳನ್ನು-ಕಾರಂತರ ಅಳವಡಿಕೆಯ ರೀತಿಗಳ ಹಿನ್ನೆಲೆಯಲ್ಲಿ-ಸ್ವಾಮಿಯವರು ಒಪ್ಪಿಕೊಳ್ಳುತ್ತಾರೆ. ಆದರೆ ಪುರಂದರರ ಕಾಲದ ಜನಪದ ಸಂಗೀತದ ಮಟ್ಟುಗಳ ಕುರಿತು ಪ್ರಸ್ತಾಪ ಮಾಡಿದರೂ ಅದನ್ನು ಹೆಚ್ಚು ವಿವರಿಸಲು ಹೋಗುವುದಿಲ್ಲ. ಆದರೆ ಪುರಂದರ ಮತ್ತು ಕನಕರು ಆ ಕಾಲದ ಜನಪದ ಮಟ್ಟುಗಳಿಗೆ ಮಾರುಹೋಗಿದ್ದರು ಎಂಬುದನ್ನು ಸೂಚಿಸುವ ಅನೇಕ ಲೇಖನಗಳು ಬಂದಿವೆ. ದಾಸರ ಎಲ್ಲ ಪದಗಳನ್ನು ಬರೀ ಸಂಗೀತದ ನೆಲೆಯಲ್ಲಿ ಕಾಣಲು ಆಗದು ಎಂಬುದು ಸ್ವಾಮಿಯವರಿಗೆ ತಿಳಿದಿದೆ. ಹಾಗಾಗಿಯೇ ಅವರು ಕಾರಂತರ ಕೆಲವು ಬದಲಾವಣೆಗಳನ್ನು ಒಪ್ಪುತ್ತಾರೆ.


ಈ ವಿದ್ವತ್ಪೂರ್ಣ ಬರಹಗಳ ಜೊತೆಗೇ ಈ ಕೃತಿಯಲ್ಲಿ ಮನಕ್ಕೆ ಮುದ ನೀಡುವ ಸ್ವಾಮಿಯವರಿಗೇ ವಿಶಿಷ್ಟವಾದ ಕೆಲ ಲಲಿತ ಬರಹಗಳೂ ಕವಿತಾ ರಚನೆಗಳೂ ಇವೆ ನಮ್ಮ ಹಳೆಯ ಪ್ರತಿಭೆಗಳ ಬಹುಮುಖತೆಯ ಸಾಮರ್ಥ್ಯ ಮತ್ತು ಸೊಬಗಳನ್ನು ನಮ್ಮ ಯುವ ಜನಾಂಗಕ್ಕೆ ಪರಿಚಯಿಸುವ ಈ ಪ್ರಯತ್ನದಲ್ಲಿ ಭಾಗಿಯಾಗಿರುವ ಇದರ ಸಂಪಾದಕರು ಮತ್ತು ಪ್ರಕಾಶಕರು ಕನ್ನಡ ಸಾಹಿತ್ಯಾಭಿಮಾನಿಗಳ ಕೃತಜ್ಞತೆಗೆ ಪಾತ್ರರಾಗಿದ್ದಾರೆ.

-ಡಾ. ಸುರೇಶ ನಾಗಲಮಡಿಕೆ

ಜಿ.ಪಿ ಬಸವರಾಜು ಅವರ ಎರಡು ಪುಸ್ತಕಗಳು

ಪು : ಕಾಗೋಡು ಸತ್ಯಾಗ್ರಹ ಪ್ರ : ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು
ಪು :೧೨೦ ಬೆಲೆ : ರೂ. ೬೫/-

ಐತಿಹಾಸಿಕ ಚಳುವಳಿಯೊಂದರ ಸಜೀವ ಚಿತ್ರಣ



ಕರ್ನಾಟಕದ ಭೂ ಹೋರಾಟಗಳ ಪ್ರಸ್ತಾಪ ಬಂದಾಗಲೆಲ್ಲ ಕಾಗೋಡು ಸತ್ಯಾಗ್ರದ ಹೆಸರು ಉಲ್ಲೇಖವಾಗುತ್ತದೆ. ೧೯೫೦ರ ದಶಕದ ಆರಂಭದಲ್ಲಿ ಸಾಗರ ತಾಲ್ಲೂಕಿನಲ್ಲಿ ನಡೆದ ಈ ಹೋರಾಟದ ಕುರಿತು ಕನ್ನಡ ಪುಸ್ತಕ ಪ್ರಾಧಿಕಾಶರಕ್ಕಾಗಿ ರಚಿಸಲಾಗಿರುವ ಪರಿಚಯಾತ್ಮಕ ಎನ್ನಬಹುದಾದ ಕೃತಿಯಿದು.

ಸಾವಿರಾರು ಎಕರೆ ಭೂಮಿಯ ಮಾಲಿಕತ್ವ ಹೊಂದಿದ್ದ ಭೂ ಮಾಲೀಕರು ಭೂಮಿಯನ್ನು ಗೇಣಿಗೆ ಕೊಡುವ ಪದ್ಧತಿ ಆಗ ಜಾರಿಯಲ್ಲಿತ್ತು.ಅಂದಿನ ಸಾಮಾಜಿಕ ಸನ್ನಿವೇಶಕ್ಕೆ ತಕ್ಕಂತೆ ಭೂ ಮಾಲೀಕರು ಮೇಲ್ವರ್ಗದವರಾಗಿದ್ದರೆ ಗೇಣಿದಾರರು ಹಿಂದುಳಿದ ಸಮುದಾಯದವರಾಗಿದ್ದರು. ಹೀಗಾಗಿ ಗೇಣಿದಾರರ ಶೋಷಣೆ ಸಹಜ ಎನ್ನುವಂತೆ ನಡೆದಿತ್ತು.

ಗೇಣಿಯನ್ನು ಕೊಳಗದಲ್ಲಿ ನೀಡಲಾಗುತ್ತಿದ್ದು ಕೊಳಗದ ?ಅಳತೆಯ ವಿಚಾರದಲ್ಲಿ ಆರಂಭವಾದ ತಗಾದೆ ಮುಂದೆ ಚಳವಳಿಯ ಸ್ವರೂಪ ಪಡೆದು,ರಾಜ್ಯ,ರಾಷ್ಟ್ರದ ಗಮನ ಸೆಳೆಯಿತು.ಗೋಪಾಲಗೌಡರ ನೇತೃತ್ವದಲ್ಲಿ ಸಮಾಜವಾದಿಗಳ ಪ್ರವೇಶದೊಂದಿಗೆ ಚಳವಳಿಗೆ ಸೈದ್ಧಾಂತಿಕ ಸ್ಪರ್ಶ ದೊರಕಿ ಲೋಹಿಯಾ, ಜಯಪ್ರಕಾಶ್ ನಾರಾಯಣ್ ಅವರೆಲ್ಲಾ ಸಾಗರಕ್ಕೆ ಆಗಮಿಸಿ ಸತ್ಯಾಗ್ರಹಿಗಳಿಗೆ ಬೆಂಬಲ ಘೋಷಿಸಿದ್ದು ಇತಿಹಾಸ.

ಮುಂದೆ ಕಾಗೋಡು ಚಳವಳಿ ಕಾರಣಕ್ಕೆ ಭೂ ಸುಧಾರಣೆ ಕಾನೂನು ಜಾರಿಯಾಯಿತು ಎನ್ನಲಾಗುತ್ತಿದೆ.ಇದರಿಂದ ಗೇಣಿದಾರರು ಅಪಾರ ಪ್ರಮಾಣದಲ್ಲಿ ಭೂಮಿಯ ಹಕ್ಕನ್ನು ಪಡೆದರು ಎನ್ನುವ ವಾಸ್ತವ ಕಣ್ಣೆದೆರು ಇದೆ. ಈ ಎಲ್ಲಾ ಸಂಗತಿಗಳನ್ನು ಲೇಖಕರು ಸರಳವಾದ ಭಾಷೆಯಲ್ಲಿ ಚಿತವತ್ತಾದ್ರ ನಿರೂಪಣೆಗಳೊಂದಿಗೆ ಕಟ್ಟಿಕೊಟ್ಟಿದ್ದಾರೆ. ಆರು ದಶಕಗಳಿಗೂ ಹಿಂದೆ ನಡೆದ ಚಳವಳಿಯ ಬಗ್ಗೆ ವಿಸ್ಮೃತಿ ಆವರಿಸಿರುವ ಈ ಹೊತ್ತಿನಲ್ಲಿ ಅದರ ಬಗ್ಗೆ ಕೃತಿ ರಚಿಸುವಾಗ ಈಗಾಗಲೇ ಇದೇ ವಿಷಯದ ಕುರಿತು ಬಂದಿರುವ ಕೃತಿಗಳು ಹೇಳಿರದ, ಗುರುತಿಸಿರದ ಅಂಶಗಳು ಇರಬೇಕಾಗುತ್ತದೆ. 'ಕಾಗೋಡು' ಕೃತಿಯಲ್ಲಿ ವಿವರಗಳು ಲೇಖಕರ ಚಿತ್ರಕ ಶಕ್ತಿಯಿಂದ (ಕಣ್ಣೆದುರೆ ನಡೆದಿರುವ ಘಟನೆಗಳಂತೆ) ಪರಿಣಾಮಕಾರಿಯಾಗಿ ನಿರೂಪಣೆಗೊಳ್ಳುವಲ್ಲಿ ಪ್ರಕಟಗೊಂಡಿರುವ ಆಸಕ್ತಿ, ಉತ್ಸಾಹ ಚಳವಳಿಯನ್ನು ವಿಮರ್ಶಿಸುವ, ವಿಶ್ಲೇಷಿಸುವ ನಿಟ್ಟಿನಲ್ಲಿ ವ್ಯಕ್ತವಾಗಿಲ್ಲ. ಈ ದಿಕ್ಕಿನಲ್ಲಿ ಲೇಖಕರ ಮಹತ್ವಾಕಾಂಕ್ಷೆಯ ಕೊರತೆ ಕೃತಿಗೆ ಸೀಮಿತ ಚೌಕಟ್ಟು ನಿರ್ಮಿಸಿದಂತಾಗಿದೆ.

ಕಾಗೋಡು ಸತ್ಯಾಗ್ರಹದ ಕುರಿತು ಬಂದಿರುವ ಪ್ರಮುಖ ವಿಮರ್ಶೆ ಎಂದರೆ ನಿಜಕ್ಕೂ ಇದೊಂದು ಚಳವಳಿಯೆ ಅಥವಾ ಬಂಡಾಯವೇ ಎನ್ನುವುದು.ಸಾಗರ ತಾಲ್ಲೂಕಿನಲ್ಲಿ ನಡೆದ ಈ ಚಳವಳಿಯ ಪ್ರಭಾವ ಪಕ್ಕದ ಸೊರಬ ಹಾಗೂ ಹೊಸನಗರ ತಾಲ್ಲೂಕಿಗೂ ಯಾಕೆ ತಟ್ಟಲಿಲ್ಲ ಎಂಬ ಪ್ರಶ್ನೆ ಅಧ್ಯಯನಕಾರರನ್ನು ಕಾಡಿದೆ. ಇಂತಹ ಪ್ರಶ್ನೆಗಳಿಗೆ ಲೇಖಕರು ಮುಖಾಮುಖಿಯಾಗಿದ್ದರೆ ಏನಾದರೂ ಹೊಸ ಹೊಳಹು ದೊರಕುತ್ತಿತ್ತೇನೋ.


ಭೂ ಸುಧಾರಣೆ ಕಾನೂನು ಜಾರಿಯಾಗಬೇಕು ಎಂಬ ಪ್ರಸ್ತಾಪ ಮೊದಲ ಪಂಚವಾರ್ಷಿಕ ಯೋಜನೆಯಲ್ಲೆ ಇತ್ತು. ನಿಜಕ್ಕೂ ಕಾಗೋಡು ಸತ್ಯಾಗ್ರಹದಿಂದಾಗಿ ಕರ್ನಾಟಕದಲ್ಲಿ ಈ ಕಾನೂನು ಜಾರಿಯಾಯಿತು ಎಂಬುದನ್ನು ಒಪ್ಪಿಕೊಳ್ಳುವುದಾದರೂ ಅದಕ್ಕಾಗಿ ಎರಡೂವರೆ ದಶಕ ಯಾಕೆ ಕಾಯಬೇಕಾಯಿತು ಎನ್ನುವ ಪ್ರಶ್ನೆ ಕೂಡ ಇಂದಿಗೂ ಜೀವಂತವಾಗಿದೆ. ಇಂತಹ ಪ್ರಶ್ನೆಗೆ ಉತ್ತರವನ್ನು ಹುಡುಕುವ ಪ್ರಯತ್ನ ಕೃತಿಯಲ್ಲಿ ಆಗಬೇಕಿತ್ತು.

ಕಾಗೋಡು ಸತ್ಯಾಗ್ರಹ, ಭೂ ಸುಧಾರಣೆ ಕಾನೂನಿನ ನಂತರವೂ ಈ ಭಾಗದ ದಲಿತರಿಗೆ ದಕ್ಕದ ಭೂಮಿಯ ಹಕ್ಕು, ಆ ಕಾಲದಲ್ಲಿ ಜಾತಿಯ ಹೆಸರಿನಲ್ಲಿ ವಿಭಜನೆಗೊಂಡ ಸಮಾಜದ ಯಥಾಸ್ಥಿತಿಯ ಮುಂದುವರಿಕೆ, ಇವುಗಳನ್ನು ಕೃತಿ ಒಳಗೊಳ್ಳಬಹುದಿತ್ತು. ಇವುಗಳು ಏನೇ ಇದ್ದರೂ ಮನುಷ್ಯನ ಘನತೆಯ ಪ್ರಶ್ನೆಯನ್ನು ಮುಂದಿಟ್ಟುಕೊಂಡು ರೈತರ ಸ್ವಾಭಿಮಾನದ ಸಂಕೇತವಾಗಿ ನಡೆದ ಹೋರಾಟವೊಂದರ ಕುರಿತು ಈ ಹೊತ್ತಿನಲ್ಲಿ ಬಂದಿರುವ ಕೃತಿ ಮರೆಗೆ ಸರಿಯುತ್ತಿರುವ ಚಳವಳಿಗಳ ಬಗ್ಗೆ ಯುವ ತಲೆಮಾರಿನಲ್ಲಿ ಒಂದಿಷ್ಟು ಆಸಕ್ತಿ, ಸ್ಫೂರ್ತಿ ತಂದರೆ ಕೃತಿಕಾರರ ಶ್ರಮಕ್ಕೆ ಬೆಲೆ ಬಂದೀತು.

–ಎಂ. ರಾಘವೇಂದ್ರ

ಪು : ಕಾಡಿನ ದಾರಿ ಪ್ರ: ಮನೋಹರ ಗ್ರಂಥಮಾಲಾ, ಧಾರವಾಡ
ಪುಟ : ೧೨೦ ಬೆಲೆ : ರೂ. ೧೧೦/-

ಕಾಡು–ನಾಡುಗಳ ಮುಖಾಮುಖಿಯ ಕಥೆ



ಪತ್ರಕರ್ತರೂ, ಕಥೆಗಾರರು ಆಗಿರುವ ಜಿ.ಪಿ. ಬಸವರಾಜು ಅವರ ಈ ಮೊದಲ ಕಾದಂಬರಿ ಇದರ ಹೆಸರು ಮತ್ತು ಸ್ವರೂಪದಿಂದ ಮೇಲ್ನೋಟಕ್ಕೆ ಕಾಡಿನ ಅನುಭವಗಳ ಕುರಿತ ಪ್ರವಾಸ ಕಥನದಂತೆ ಕಾಣುತ್ತದೆ. ಆದರೆ ಪುಟ ತಿರುವಿದಂತೆ ಕಾಡು, ಅಲ್ಲಿನ ಹಸಿರು, ನೆಲ–ಜಲ ಮತ್ತು ಕಾಡನ್ನೇ ನಂಬಿ ಬದುಕಿರುವ ಆದಿವಾಸಿಗಳ ಕುತೂಹಲಕರ ಚಿತ್ರಣವುಳ್ಳ ಒಂದು ವಿಶಿಷ್ಟ ಕಾದಂಬರಿಯನ್ನಾಗಿಸುವ ಲೇಖಕರ ಮಹತ್ವಾಕಾಂಕ್ಷೆ ಎದ್ದು ಕಾಣುತ್ತದೆ. ಕರ್ನಾಟಕದ ಪ್ರಸಿದ್ಧ ಆದಿವಾಸಿ ಸಮುದಾಯವಾದ ಜೇನುಕುರುಬರ ಬಗ್ಗೆ ಸಾಕ್ಷ್ಯಚಿತ್ರ ಮಾಡಲು ಹೊರಟ ಚಿತ್ರ ತಂಡವೊಂದರ ಅನುಭವಗಳು ಮತ್ತು ಆ ತಂಡದ ನಿರ್ದೇಶಕ ರಾಮಪ್ಪನ ಚಿಂತನೆಗಳ ರೂಪದಲ್ಲಿ ಕಾದಂಬರಿಯ ಕಥಾಹಂದರ ಕಟ್ಟಿಕೊಳ್ಳುತ್ತಾ ಹೋಗುತ್ತದೆ.

ಜೇನುಕುರುಬರ ಗಿಡಮೂಲಿಕೆಗಳ ಜ್ಞಾನ, ಅವರ ಹಾಡು–ಹಸೆ, ದೈವದ ಪೂಜೆ, ಆವಾಹನೆಯ ವಿವರಗಳೊಂದಿಗೆ ಕಾದಂಬರಿ ಕುತೂಹಲದಿಂದ ಓದಿಸಿಕೊಂಡು ಹೋಗುತ್ತದೆ. ಕಾಡಿನ ಮೂಲ ನಿವಾಸಿಗಳಿಗೆ ನಾಗರಿಕ ಸೌಕರ್ಯಗಳನ್ನು ಒದಗಿಸುವ ನೆಪದಲ್ಲಿ ಸರ್ಕಾರ ಅವರನ್ನು ಒಕ್ಕಲೆಬ್ಬಿಸುವ ವಿಚಾರವನ್ನು ಕಾದಂಬರಿ ತುಲನಾತ್ಮಕವಾಗಿ ಚರ್ಚಿಸುತ್ತದೆ. ಅರಣ್ಯ ನಿವಾಸಿಗಳ ವಿಷಯದಲ್ಲಿ ಅರಣ್ಯ ಇಲಾಖೆಯವರೇ ರಾಕ್ಷಸರಾಗುವ ಸನ್ನಿವೇಶ ಒಂದೆಡೆಯಾದರೆ, ಮೂಲನಿವಾಸಿಗಳಿಗೆ ಶಿಕ್ಷಣ ನೀಡುವ ಸ್ವಯಂ ಸೇವಾ ಸಂಸ್ಥೆಗಳು ಅವರನ್ನು ಇತ್ತ ನಾಡಿಗೂ ಸಲ್ಲದೇ, ಅತ್ತ ಕಾಡಿಗೂ ಎರವಾಗಿ ತ್ರಿಶಂಕುಗಳನ್ನಾಗಿಸುವ ಸಂದೇಹವನ್ನು ಕಾದಂಬರಿ ದಾಖಲಿಸುತ್ತದೆ. ನಾಗರಿಕ ಮನುಷ್ಯನ ಕೊನೆ ಇಲ್ಲದ ಆಸೆಗಳೇ ಬಹುದೊಡ್ಡ ಸಂಘರ್ಷವನ್ನು ಸೃಷ್ಟಿಸಿರುವಾಗ ಕಾಡಿನ ಈ ಸರಳ ಜೀವಿಗಳನ್ನು ನಾಗರಿಕರನ್ನಾಗಿಸುವುದು ಅವರಿಗೆ ಮಾಡುವ ಒಳಿತೇ ಅಥವಾ ಕೇಡೇ ಎಂಬ ಮೂಲಭೂತ ಪ್ರಶ್ನೆಯನ್ನು ಎತ್ತುವ ಮೂಲಕ ಕಾದಂಬರಿ ಹೆಚ್ಚು ಪ್ರಸ್ತುತವಾಗುತ್ತದೆ.

ನೂರು ಪುಟಗಳ ಈ ಕಿರುಕಾದಂಬರಿಯಲ್ಲಿ ಜೇನುಕುರುಬರು ಮತ್ತು ವನ್ಯಜೀವಿಗಳ ಚಿತ್ರಣದ ಜೊತೆಗೆ ಅದನ್ನು ಚಿತ್ರಿಸಲು ಹೋದ ತಂತ್ರಜ್ಞರನ್ನೂ ಪಾತ್ರಗಳನ್ನಾಗಿಸುವ ಮೂಲಕ ಅವರವರ ಭಾವನಾ ಲೋಕದ ವಿವರಗಳಿಗೂ ಅವಕಾಶ ಕಲ್ಪಿಸಲಾಗಿದೆ. ಆದರೆ ಇದು ಕಾದಂಬರಿಯ ಓಘಕ್ಕೆ ತೊಡಕಾಗಿ ಕಥಾವಸ್ತುವಿನೊಂದಿಗೆ ಪಾತ್ರಗಳು ಮಿಳಿತವಾಗದೇ ಹೊರಗುಳಿಯುವುದರಿಂದ ಎಲ್ಲವೂ ಗೋಜಲಾಗಿ ಬಿಡುತ್ತದೆ. ಅಲ್ಲಲ್ಲಿ ಭಾಷೆಯ ಕ್ಲೀಷೆ, ಕೃತಕ ಶೈಲಿಯ ನಿರೂಪಣೆಗಳಿಂದಾಗಿ ಸಾಹಿತ್ಯ ಕೃತಿಯೊಂದರ ಓದಿನ ಅನುಭವವಾಗದೇ ಕಾದಂಬರಿ ಈ ದೃಷ್ಟಿಯಿಂದ ನಿರಾಸೆಯನ್ನೂ ಮೂಡಿಸುತ್ತದೆ.

ಆದಾಗ್ಯೂ ಕಾಡಿನ ಜೀವಿಗಳ ಜೀವನ ಶ್ರದ್ಧೆ, ನದಿ–ಮರ–ಪರಿಸರ ಕುರಿತ ರಾಮಪ್ಪನ ಚಿಂತನೆಯ ರೂಪದಲ್ಲಿ ಕಾದಂಬರಿಯ ಉದ್ದಕ್ಕೂ ಹೊಮ್ಮುವ ಲೇಖಕರ ಒಳನೋಟಗಳು ಕೃತಿಯ ತೂಕವನ್ನು ಕಾಯ್ದುಕೊಂಡಿದೆ. ಕಾಡುಪ್ರಾಣಿಗಳು ಮೈಸೂರು ನಗರಕ್ಕೆ ನುಗ್ಗುವುದರ ಚಿತ್ರಣದೊಂದಿಗೆ ಕಾದಂಬರಿ ಮುಕ್ತಾಯವಾಗುತ್ತದೆ. ಪರಿಸರ ನಾಶದಿಂದಾಗಿ ನಮ್ಮ ನಾಗರಿಕತೆಯ ನಾಶಕ್ಕೆ ನಾವೇ ಕಾರಣವಾಗುವ ಸಾಧ್ಯತೆಯನ್ನು ಇದು ಮನಗಾಣಿಸುತ್ತದೆ. ಕಾದಂಬರಿಗೆ ಬೆನ್ನುಡಿ ಬರೆದಿರುವ ಜಿ. ರಾಜಶೇಖರ ಅವರು ನಾಡಿನವರು ಕಾಡನ್ನು, ಕಾಡಿನ ಜನರನ್ನು ಪರಕೀಯವೆಂಬಂತೆ ಕಂಡು ಅವರನ್ನು ಕೇವಲ ತಮ್ಮ ನೋಟ ಮತ್ತು ಅಧ್ಯಯನದ ವಸ್ತುವನ್ನಾಗಿಸಿಕೊಳ್ಳುವುದರ ಬಗ್ಗೆ ಪ್ರಶ್ನಿಸುತ್ತಾ ಈ ಪ್ರಕ್ರಿಯೆ ತಿರುವು ಮುರುವುಗೊಳ್ಳಬೇಕೆಂದು ಆಶಿಸುತ್ತಾರೆ. ಕಾದು ನೋಡಬೇಕಾಗಿದೆ!

–ಎನ್.ಎಂ. ಕುಲಕರ್ಣಿ



ಶ್ರೀ ಹೆಚ್.ಡಿ. ಕುಮಾರಸ್ವಾಮಿ
ಮಾನ್ಯ ಮುಖ್ಯಮಂತ್ರಿಗಳು

ಅಭಿವೃದ್ಧಿಗೆ ಹೊಸ ಆಯಾಮ



ಡಾ. ಜಿ. ಪರಮೇಶ್ವರ
ಮಾನ್ಯ ಉಪ ಮುಖ್ಯಮಂತ್ರಿಗಳು



ರೈತರ ನೋವಿಗೆ ಮಿಡಿದ ಮೈತ್ರಿ ಸರ್ಕಾರ
48,000 ಕೋಟಿ ರೂ. ಕೃಷಿ ಸಾಲ ಮನ್ನಾ
43.59 ಲಕ್ಷ ಕೃಷಿಕರ ಕುಟುಂಬಗಳಲ್ಲಿ ಸಂತಸದ ಹೊನಲು

ಆಧುನಿಕ ಕೃಷಿಗೆ ಆದ್ಯತೆ
ಇಸ್ರೇಲ್ ಮಾದರಿಯ ಕೃಷಿ ತಂತ್ರಜ್ಞಾನ ಅಳವಡಿಕೆಗೆ ಪ್ರೋತ್ಸಾಹ. 300 ಕೋಟಿ ರೂ. ಅನುದಾನ
'ರೈತ ಸ್ಪಂದನ': ರೈತರೊಂದಿಗೆ ಮುಖ್ಯಮಂತ್ರಿಗಳ ನೇರ ಸಂವಾದ ಕಾರ್ಯಕ್ರಮ

ನಿರುದ್ಯೋಗ ನಿವಾರಣೆಗೆ ನಿಶ್ಚಿತ ನೀತಿ...
ಚೀನಾ ಮಾದರಿಯಲ್ಲಿ 9 ಜಿಲ್ಲೆಗಳಲ್ಲಿ ಕೈಗಾರಿಕಾ ಕ್ಲಸ್ಟರ್‌ಗಳ ಸ್ಥಾಪನೆ, ಪ್ರತಿ ಜಿಲ್ಲೆಯಲ್ಲಿ 1 ಲಕ್ಷ ಉದ್ಯೋಗ ಸೃಷ್ಟಿ ಆಶಯ, ಖಾಸಗಿ ಸಹಭಾಗಿತ್ವದಲ್ಲಿ ಪ್ರತಿ ಜಿಲ್ಲೆಯಲ್ಲೂ ಉದ್ಯೋಗಮೇಳ

ಶಿಕ್ಷಣ ಸುಧಾರಣೆಗೆ ಸಂಕಲ್ಪ...
1,000 ಕೋಟಿ ರೂ. ವೆಚ್ಚದಲ್ಲಿ ಸರ್ಕಾರಿ ಶಾಲಾ ಕಾಲೇಜುಗಳ ಆಧುನೀಕರಣ, ಕರಾವಳಿ, ಮಲೆನಾಡು ಜಿಲ್ಲೆಗಳಲ್ಲಿ ಶಾಲಾಮಕ್ಕಳ ಸಂಚಾರಕ್ಕೆ ಕಾಲುಸಂಕದ ಬದಲು 'ಶಾಲಾ ಸಂಪರ್ಕ ಸೇತು' ಶಾಶ್ವತ ಯೋಜನೆ

ತಾಯಿ- ಮಗುವಿನ ಆರೋಗ್ಯ ಕಾಳಜಿ: "ಮಾತೃಶ್ರೀ" ಯೋಜನೆ
ಗರ್ಭಿಣಿ, ಬಾಣಂತಿಯರಿಗೆ ಆರ್ಥಿಕ ನೆರವು.

ಸಂಧ್ಯಾ ಸುರಕ್ಷಾ ಯೋಜನೆ
ಹಿರಿಯ ನಾಗರಿಕರಿಗೆ ಮಾಸಿಕ ಪಿಂಚಣಿ ರೂ. 600 ರಿಂದ ರೂ. 1000ಕ್ಕೆ ಹೆಚ್ಚಳ.

ಪ್ರಗತಿಯ ಹಾದಿಗೆ ರಸ್ತೆ ನಿರ್ಮಾಣ...
ನೆನೆಗುದಿಗೆ ಬಿದ್ದಿರುವ ಎಲ್ಲಾ ಹೆದ್ದಾರಿ, ಜಿಲ್ಲಾ ಮತ್ತು ಗ್ರಾಮೀಣ ರಸ್ತೆಗಳ ಯೋಜನೆಗಳಿಗೆ ಚಾಲನೆ

ಜನತಾ ದರ್ಶನ
ತಿಂಗಳಿಗೊಮ್ಮೆ ಬೆಂಗಳೂರು ಹಾಗೂ ಜಿಲ್ಲಾ ಕೇಂದ್ರಗಳಲ್ಲಿ ಮುಖ್ಯಮಂತ್ರಿಗಳಿಂದ ಜನತಾ ದರ್ಶನ.
ಸಂಕಷ್ಟದಲ್ಲಿರುವ ಜನರಿಗೆ ತುರ್ತು ಪರಿಹಾರ ದೊರಕಿಸುವ ಮಾನವೀಯ ಕಾರ್ಯಕ್ರಮ

ಅವಕಾಶ ವಂಚಿತರ ಅಭ್ಯುದಯದಲ್ಲಿ ಮುನ್ನಹೆಜ್ಜೆ...
ಪರಿಶಿಷ್ಟ ಜಾತಿ, ಪಂಗಡಗಳ ಕಲ್ಯಾಣಕ್ಕಾಗಿ 29,000 ಕೋಟಿ ರೂ.ಗಳ ಬೃಹತ್ ಕಾರ್ಯಕ್ರಮಗಳು


ಬಡವರ ಬಂಧು
ಬೀದಿ ಬದಿ ವ್ಯಾಪಾರಿಗಳಿಗೆ ಬಡ್ಡಿರಹಿತ ಸಾಲ ಯೋಜನೆ

ಋಣ ಪರಿಹಾರ ಕಾಯ್ದೆ - 2018
ರೈತರು, ಕಾರ್ಮಿಕರು ಹಾಗೂ ಸಣ್ಣ ವ್ಯಾಪಾರಿಗಳನ್ನು ಸಾಲದ ಶೂಲದಿಂದ ಮುಕ್ತಗೊಳಿಸಲು ಪ್ರಾಮಾಣಿಕ ಪ್ರಯತ್ನ

ಗಾಂಧಿ 150


ಮಹಾತ್ಮರ ಮಾರ್ಗದಲ್ಲಿ ಮೈತ್ರಿ ಸರ್ಕಾರ





ಕರ್ನಾಟಕ ವಾರ್ತೆ

ತಿಂಗಳ ಸಾಲುಗಳು...



ಅಚ್ಚ ಕೆಚ್ಚು ಕನ್ನಡ ಹುರುಳು
ಇಹ-ಪರ- ಮಹಾನುಭಾವ ವ್ಯಂಜನೆಗೆ ಸಾಕು
ಕನ್ನಡವು ಕನ್ನಡವ ಕನ್ನಡಿಸುತಿರಬೇಕು

-ದ..ರಾ ಬೇಂದ್ರೆ

HOSA MANUSHYA, a kannada Socialist monthly solely owned, edited, published and printed by D.S. Nagabhushana, at HIG-5,Kallahally Extn.,Vinoba Nagara, SHIVAMOGGA-577204. Printed at Replica Offset Printers, No.14/1, 1st Main, Industrial Town, Rajaji Nagara, Bengaluru-560 044 Ph: 08023357963

Regd. News Paper RNI No. KARKAN/2012/47568
Rgd No. KA/SK/SMG-1209/2016-18

ಇವರಿಗೆ \ To

If undelivered, please return to D.S. Nagabhushana, Editor, 'Hosa Manushya', 'HIG-5, 'Nudi', Kallahalli Extension, Vinoba Nagara, Shivamogga -577204(Karnataka)